…ಣ ಕನ್ನಡ ಜಿಲ್ಲಾ ಪರಿಷತ್ತು

ಮಂಗಳೂರು

ದಕ್ಷಿಣ ಕನ್ನಡ ಜಿಲ್ಲೆ, ಕರ್ನಾಟಕ.

ಕೊರಗ ಜನಾಂಗ

ವಿಶ್ಲೇಷಣಾತ್ಮಕ ಅಧ್ಯಯ

ಡಾ. ಅರವಿಂದ ಮಾಲಗತ್ತಿ.

ಡಾ. ಒಡೆಯರ ಡಿ. ಹೆಗ್ಗಡೆ

ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತು

ಮಂಗಳೂರು

ದಕ್ಷಿಣ ಕನ್ನಡ ಜಿಲ್ಲೆ ಕರ್ನಾಟಕ

ಪರಿವಿಡಿ

ಪ್ರಸ್ತಾವನೆ:

ಪ್ರಸ್ತಾವನೆ

ಕೊರಗ ಜನಾಂಗದ ಪ್ರಥಮ ಸಮಾವೇಶದ ನೆಪದ ಹಿನ್ನೆಲೆಯಲ್ಲಿ ಕೊರಗ ಜನಾಂಗದ ಕುರಿತು ವಿಶ್ಲೇಷಣಾತ್ಮಕವಾದ ಅಧ್ಯಯನಕ್ಕೆ ನಾವು ಒಳಗಾಗ ಬೇಕಾಗಿ ಬಂತು. ಉಡುಪಿ ತಾಲ್ಲೂಕಿನ ಪುತ್ತೂರು ಹನುಮಂತ ನಗರದಲ್ಲಿ ಕರೆಯಲಾದ ಈ ಸಮಾವೇಶ ಕೇವಲ ರಾಜಕೀಯ ವ್ಯವಸ್ಥೆಯಿಂದ ಸವಲತ್ತನ್ನು ಪಡೆದುಕೊಳ್ಳುವುದೇ ಆಗಿಲ್ಲ. ಈ ಸಮಾವೇಶದ ಕ್ರಮದಲ್ಲಿ ಕೊರಗ ಜನಾಂಗದ ಸಾಮಾಜಿಕ, ಆರ್ಥಿಕ, ಮತ್ತು ಸಾಂಸ್ಕೃತಿಕ ಸ್ಥಿತಿಗತಿಗಳನ್ನು ಗಮನಿಸಿ ಅಧ್ಯಯನದೊಂದಿಗೆ ಅವರ ಸಮಸ್ಯೆಗಳನ್ನು ಕೂಲಂಕಷವಾಗಿ ಚರ್ಚಿಸುವ ಅವಕಾಶ ದೊರೆತದ್ದೇ ಈ ಕೃತಿಯ ಪ್ರೇರಣೆಯೂ ಆಗಿದೆ. ಕೃತಿ ಸಮಾವೇಶದ ಮತ್ತು ಕೊರಗ ಜನಾಂಗದ ಅಧಿಕೃತ ಕೈಪಿಡಿ

ಕೊರಗ ಜನಾಂಗ ಕುರಿತು 1875 ರಿಂದಲೇ ಎಂ ಟಿ. ವಾಲ್‌ಹೌಸಿಯಂಥ ವರಿಂದ ಅಧ್ಯಯನ ಪ್ರಾರಂಭವಾದುದು ತಿಳಿದು ಬರುತ್ತದೆ. ಅನಂತರದಲ್ಲಿ ಉಳ್ಳಾಲ ರಾಘವೇಂದ್ರ ರಾವ್ (1885-86) ಪ್ರೌಢ ಅಧ್ಯಯನದ ಬರವಣಿಗೆ ಲಭ್ಯವಾಗುತ್ತದೆ. ಹಾಗೂ ಎಡ್ಗರ್ ಥರ್ಸ್ಟನ್ ದಕ್ಷಿಣ ಭಾರತದ ಜಾತಿಗಳು ಮತ್ತು ಪಂಗಡಗಳು (1909) ಎನ್ನುವ ತನ್ನಬೃಹತ್ಕೃತಿಯಲ್ಲೂ ಕೊರಗರ ಬಗೆಗೆ ವಿಶೇಷ ಉಲ್ಲೇಖ ಮಾಡಿರುವುದನ್ನು ನಾವು ಕಾಣುವೆವು. ಈ ಕೃತಿಗಳನ್ನೊಳಗೊಂಡಂತೆ ಕನ್ನಡದಲ್ಲಿ ಈಗಾಗಲೇ ಸಣ್ಣ ಪುಟ್ಟ ಬಿಡಿ ಲೇಖನಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ ಇವುಗಳನ್ನು ಹೊರತು ಪಡಿಸಿದರೆ ಅಮೃತ ಸೋಮೇಶ್ವರರ ವಿವರಣಾತ್ಮಕವಾದ 'ಕೊರಗರು' ಎಂಬ ಪುಟ್ಟ ಕೃತಿಯೊಂದು ಹೊರಬಂದಿದೆ. ನಮ್ಮ ಈ ಕೃತಿಯ ಸಿದ್ಧತೆಯಲ್ಲಿ ನಮ್ಮ ಗಮನಕ್ಕೆ. ಬಂದ ಕೆಲವು ಲೇಖನಗಳನ್ನು ಮತ್ತು ಮೇಲೆ ಹೇಳಲಾದ ಕೃತಿಗಳನ್ನು ಗಮನಿಸಿದ್ದೇವೆ. ಇದಲ್ಲದೆ ಕ್ಷೇತ್ರ ಕಾರ್ಯವನ್ನೂ ಕೈಗೊಂಡು ತನ್ಮೂಲಕ ಲಭ್ಯವಾದ ಅಧಿಕೃತ ವಿವರಗಳಿಂದ ಪರಿಪೂರ್ಣವೆನ್ನಲಾ ಗದಿದ್ದರೂ ಮೂರ್ತ ಸ್ವರೂಪದ ಹತ್ತಿರಕ್ಕೆ ಬರುವಂಥ ರೀತಿಯಲ್ಲಿ ಈ ಕೃತಿಯನ್ನು ರಚಿಸಲಾಗಿದೆ.

ಕೊರಗ ಜನಾಂಗದ ಮೂಲದ ಬಗೆಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ ಆ ಭಿನ್ನಾಭಿಪ್ರಾಯಗಳನ್ನೊಳಗೊಂಡಂತೆ ಕ್ಷೇತ್ರ ಕಾರ್ಯವನ್ನು ಆಧರಿಸಿ ನಮ್ಮ ಅನಿಸಿಕೆಗಳನ್ನು ದಾಖಲಿಸಿದ್ದೇವೆ. ಕೊರಗರಲ್ಲಿಯ ಆರ್ಥಿಕ, ಸಾಮಾಜಿಕ ಮತ್ತು

ಸಾಂಸ್ಕೃತಿಕ ವಿಷಯುಗಳನ್ನೊಳಗೊಂಡಂತೆ ಸಂಕ್ಷಿಪ್ತವಾಗಿ ನಾವಿಲ್ಲಿ ವಿವರಗಳನ್ನು ಮುಂದಿರಿಸಿದ್ದೇವೆ. ಸಮಾವೇಶದ ಅವಧಿಯು ಗಡವು ಅತ್ಯಲ್ಪವಾದ್ದರಿಂದ ಕೊರಗ ಜನಾಂಗದ ವಿಶ್ಲೇಷಣೆಯು ಸಮಗ್ರತೆಯಲ್ಲಿ ಕೊರತೆ ಅನಿವಾರ್ಯ. ಈ ಕೊರತೆಯು ಮಧ್ಯದಲ್ಲೂ ಚಿಕ್ಕದಾದರು ವ್ಯಾಪಕತೆಯು ವಿಷಯು ಪಡೆದುಕೊಂಡಿದೆ ಎನ್ನುವುದಾದರೆ ನಮ್ಮ ಕ್ರಮ ಸಾರ್ಥಕವೆಂದುಕೊಳ್ಳುತ್ತೇವೆ. ಈ ಕೃತಿಯು ಪ್ರಕಟನೆಗೆ ಮುಂದೆ ಬಂದ ದ.ಕ. ಜಿಲ್ಲಾ ಪರಿಷತ್ತು, ಅದರ ಅಧ್ಯಕ್ಷರಾದ ಶ್ರೀ ಸಂಕಪ್ಪ ರೈ ಅವರಿಗೆ ಮತ್ತು ಮುಖ್ಯ ಕಾರ್ಯದರ್ಶಿಯವರಾದ ಶ್ರೀ ವಿ.ಪಿ, ಬಳಿಗಾರ್ ಅವರಿಗೆ ನಮ್ಮ ಕೃತಜ್ಞತೆಗಳು.

ಕನ್ನಡ ವಿಭಾಗ, ಡಾ, ಅರವಿಂದ ಮಾಲಗತ್ತಿ.
ಅರ್ಥಶಾಸ್ತ್ರ ವಿಭಾಗ,
ಮಂಗಳೂರು ವಿಶ್ವವಿದ್ಯಾನಿಲಯ, ಡಾ. ಒಡೆಯುರ. ಡಿ. ಹೆಗ್ಗಡೆ
ಮಂಗಳ ಗಂಗೊತ್ರಿ.

1. ಕೊರಗ ಜನಾಂಗದ ಮೂಲಃ ಜಿಜ್ಞಾಸೆ:—

ಕೊರಗ ಜನಾಂಗದ ಮೂಲದ ಕುರಿತು ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಈ ಭಿನ್ನಾಭಿಪ್ರಾಯಗಳನ್ನು ಅಷ್ಟೊಂದು ಸಲೀಸಾಗಿ ತಳ್ಳಿ ಹಾಕುವಂತಿಲ್ಲ. ಈ ಭಿನ್ನಾಭಿಪ್ರಾಯಗಳಲ್ಲಿ ಐತಿಹಾಸಿಕ ಮತ್ತು ಪೌರಾಣಿಕ ವಿಷಯಗಳನ್ನೊಳಗೊಂಡಿವೆ: ಹಾಗೂ ಇವುಗಳಲ್ಲಿ ಪ್ರತ್ಯೇಕತೆಯಿರುವುದಲ್ಲದೆ, ಎರಡನ್ನೂ ಸಮೀಕರಿಸಿ ಹೇಳಿರುವಂಶಹದ್ದೂ ಕಂಡು ಬರುತ್ತದೆ. ಈ ವಿಷಯ ವಸ್ತುವನ್ನು ಪೌರಾಣಿಕ ಮತ್ತು ಚಾರಿತ್ರಿಕತೆಯ ಹಿನ್ನಲೆಯಲ್ಲಿಯೇ ಒಡೆದು ನೋಡಿ ಅವುಗಳ ಮೂಲ ಸ್ವರೂಪವನ್ನು ಕೆದುಕಬಹುದಾಗಿದೆ.

1.1 — ಪೌರಾಣಿಕ ಹಿನ್ನೆಲೆ:

ಜನಪದದ ಕಥಾ ರೂಪದಲ್ಲಿ ಮತ್ತು ಪಾಡ್ದನಗಳಲ್ಲಿ ಕೊರಗ ಜನಾಂಗದ ಕುರಿತು ಕಥೆಗಳು ಲಭ್ಯವಾಗುತ್ತವೆ. ಈ ಕತೆಗಳಲ್ಲಿ ಪಾಠಾಂತರವಿದ್ದು ಮೂಲ ಆಶಯದಲ್ಲಿ ಯಾವುದೇ ಬದಲಾವಣೆ ಇಲ್ಲ, ಆದರೆ ಪಾಠಾಂತರದ ವಿಷಯಗಳೂ ನಮ್ಮ ವಿಶ್ಲೇಷಣಾತ್ಮಕ ಅಧ್ಯಯನಕ್ಕೆ ಅಷ್ಟೇ ಮಹತ್ವದ್ದಾಗಿದೆ. ಕತೆಯ ಸಂಕ್ಷಿಪ್ತ ರೂಪ ಹೀಗಿದೆ.

ಪ್ರಪಂಚದಲ್ಲಿ ಭೂಮಿ ಎನ್ನುವದೇ ಇರಲಿಲ್ಲ. ಎಲ್ಲವೂ ನೀರಿನಿಂದ ತುಂಬಿ ಹೋಗಿತ್ತು ಆ ನೀರಿನಲ್ಲಿ ಗಂಡು ಹೆಣ್ಣು ಎನ್ನುವ ಎರಡು ಜೀವಿಗಳು ಹುಟ್ಟಿದವು. ಈ ಎರಡು ಜೀವಗಳೇ ಅಣ್ಣ – ತಂಗಿ (ತಗೆ-ತಂಗಡಿ). ಇವರು ನೀರಲ್ಲಿರುವಾಗ ನಾರಾಯಣ ದೇವರು ಮಾಯೆಯ ಸೃಷ್ಟಿಯಿಂದ ಡೋಲಿನ 'ಒಳಸೆ' (ಡೋಲುದ ಕರ)ಯನ್ನು ನೀರಿನಲ್ಲಿ ತೇಲಿ ಬಿಟ್ಟ. ಅವರು ಅದರೊಳಗೆ ಕುಳಿತು ರಕ್ಷೆಯನ್ನು ಪಡೆದರು. ನಾರಾಯಣ ದೇವರು ಬಂದು ನಿಮಗೆ ಏನಾದರೂ ಬೇಕೆ? ಎಂದು ಕೇಳಿದನಂತೆ. ಆಗ ಅವರು ನಮಗೇನೂ ಬೇಡವೆಂಬು ಹೇಳಿದ್ದರಿಂದ ಮರಳಿ ಹೋದ. ಜೀವ ತಡಯಲಾಗದೆ ನಾರಾಯಣ ದೇವರು ಪುನ: ಬಂದು ಕೇಳಿದಾಗಲೂ ಅವರಿಂದ ಅದೇ ರೀತಿ ಉತ್ತರ ದೊರೆಯಿತು. ಮೂರನೆ ಬಾರಿ ಬಂದಾಗ ನಿಮಗೆ ಪ್ರಪಂಚ ಅನ್ನುವದು ಬೇಡವೆ? ಪ್ರಪಂಚದಲ್ಲಿ ಇತರ ಜೀವಿಗಳೂ ಇರಬೇಕು ಎಂಬ ಬಯಕೆ ನಿಮಗಿಲ್ಲವೆ? ನಿಮಗೆ ಈ ನೀರಿನಲ್ಲಿ ಡೋಲಿನ ಇಷ್ಟೇ ಸ್ಥಳದಲ್ಲಿ ಇರಲು ಬೇಸರವಾಗುವುದಿಲ್ಲವೆ ? ಹೀಗೆ ಪ್ರಶ್ನೆಗಳನ್ನು

ಕೇಳಿ ಪರಿಸ್ಪರ ಒಬ್ಬರಿನ್ನೊಬ್ಬರಲ್ಲಿ ಆಸೆ ಹುಟ್ಟಿಸಿದ. ಆಗ ಆ ಅಣ್ಣ-ತಂಗಿಯು ರಿಬ್ಬರೂ ಕೂಡಿದರು. ಆಗ ಭೂಮಿ ಹುಟ್ಟಿತು. ಅವರ ಆಸೆಗೆ ತಕ್ಕಂತೆ ಎಲ್ಲವೂ ನಿರ್ಮಾಣವಾಗುತ್ತಾ ಹೋಯಿತು.

ಅಣ್ಣ-ತಂಗಿಯರ ಸಂತಾನ ಬೆಳೆಯುತ್ತಾ ಹೋಯಿತು. ಈ ಸಂತಾನ ಬೆಳೆದಂತೆ ಮನೆ ತುಂಬಿ ಹೋಯಿತು, ಹೊಟ್ಟೆಯ ಪಾಡಿಗಾಗಿ ಅವರ ಮಕ್ಕಳೆಲ್ಲ ಬೇರೆ ಬೇರೆ ವೃತ್ತಿಯನ್ನು ಅವಲಂಬಿಸಿದರು. ಇದೇ ವೃತ್ತಿಗಳೇ ಮುಂದೆ ಜಾತಿಗಳಾದವು. ಅದರಲ್ಲಿ ಬ್ರಾಹ್ಮಣ, ಶೆಟ್ಟಿ, ಮೊಯ್ಲಿ, ಬಿಲ್ಲವ ಇವರೆಲ್ಲರೂ ಇದ್ದರು. 'ಅಕ್ಕನ' ಸಂತಾನದ ಮಕ್ಕಳಾದ ಇವರು ಬೆಳೆದು ಶ್ರೀಮಂತರಾದರು ಮತ್ತು ಬುದ್ಧಿವಂತರಾದರು. ಆದರೆ ತಂಗಿಯ ಸಂತಾನದವರು ಹಾಗೆ ಆಗಲಿಲ್ಲ, ಏಕೆಂದರೆ ತಂಗಿ ಅಣ್ಣನನ್ನು ವರಿಸಿದ್ದರಿಂದ ಅವರಿಗೆ ಶಾಪವಿತ್ತು. ಆ ಕಾರಣಕ್ಕಾಗಿ ಅವರಿಗೆ ಬೆಳೆಯಲಾಗಲಿಲ್ಲ. ತಂಗಿ ಈ ಶಾಪದಿಂದ ಮುಕ್ತಿಯನ್ನು ಪಡೆಯ ಬೇಕಾದರೆ ಆಕೆ ತನ್ನ ಎಲ್ಲಾ ಮಕ್ಕಳ ಮನೆಯಲ್ಲಿ ಎಂಜಲು ಅನ್ನವನ್ನು ತಿನ್ನ ಬೇಕು ಎಂದು ನಾರಾಯಣ ದೇವರು ಹೇಳಿದನಂತೆ. ಆ ಕಾರಣಕ್ಕಾಗಿ ತಂಗಿಯ ಸಂತಾನದವರು ಎಂಜಲು ಅನ್ನವನ್ನು ತಿನ್ನುತ್ತಾರೆ.

1:1.1 ಈ ಕತೆಯಲ್ಲಿ ದೊರೆಯುವ ಪ್ರಮುಖ ಅಂಶಗಳು:

- ಕೊರಗರು ಮೂಲ ನಿವಾಸಿಗಳು ಎನ್ನುವ ವಿಚಾರ.
- ವರ್ಣವ್ಯವಸ್ಥೆ ಹೇಗೆ ನಿರ್ಮಾಣವಾಯಿತು ಎನ್ನುವುದು.
- ಕೊಗರಿಗೆ "ಡೋಲು" ಎಂಬ ವಾದ್ಯ ಜೊತೆಯಾದ ಬಗೆ ಹೇಗೆ ಎನ್ನುವುದು.
- ಕೊರಗರು ಎಂಜಲು ಅನ್ನವನ್ನು ಏಕೆ ತಿನ್ನುವಂತಾಯಿತು ಎನ್ನುವ ವಿಚಾರ.
- ಕೊರಗರನ್ನು ಬಿಟ್ಟು ಇನ್ನುಳಿದವರು ಶ್ರೀಮಂತ ಮತ್ತು ಬುದ್ಧಿವಂತರಾಗಲು ಕಾರಣ,
- ಇಡೆಲ್ಲವೂ ನಾರಾಯಣ ದೇವರ ಹೇಳಿಕೆಯಿಂದಲೇ ನಡೆಯಿತು ಎನ್ನುವುದು.

ಕತೆಯ ಪಾಠಾಂತರದ ವಿಷಯದಲ್ಲಿ ಸಿಗುವ ಒಂದು ಪ್ರಮುಖವಾದ ವಿಚಾರವೆಂದರೆ ಆರಂಭದ ಹಂತದಲ್ಲಿ-ಪ್ರಪಂಚದಲ್ಲಿ ಭೂಮಿಯೇ ಇಲ್ಲದ ಹಾಗೆ

ಪ್ರಳಯವಾಗಿ ಹೋಯಿತು. ಏಕೆಂದರೆ ಭೂಲೋಕದಲ್ಲಿ ಅನ್ಯಾಯ ಅತ್ಯಾಚಾರಗಳು ಹೆಚ್ಚಾಗಿ ಹೋಗಿದ್ದವು. ಈ ಒಂದು ಆಶಯ ಸೇರಿಕೊಳ್ಳುವುದರಿಂದ ಮತ್ತೆ ಕತೆಯಲ್ಲಿ ಸಣ್ಣ–ಪುಟ್ಟ ಬದಲಾವಣೆಗಳು ಬರುವುದಿದೆ.

1.2 ಕೈಫಿಯತ್ತಿನ ದಾಖಲೆಗಳು :

ಚಾರಿತ್ರಿಕವಾಗಿ ಕೊರಗರ ಮೂಲದ ಬಗೆಗೆ ಸಮಾಜ ಶಾಸ್ತ್ರೀಯ ಮತ್ತು ರಾಜಕೀಯ ಪ್ರಾಬಲ್ಯದ ಸೋಲಿನ ವಿವರಣೆಗಳಿವೆ. ಕ್ರಿ. ಶ. 1875ರಲ್ಲಿ ಎಂ. ಟಿ. ವಾಲೆ ಹೌಸ್ ಬರೆದ ಲೇಖನದಲ್ಲಿ (Journal of Anthropological Institute IV) ಕೈಫಿಯತ್ತು ನೀಡುವ ದಾಖಲೆ ಈ ರೀತಿಯಾಗಿದೆ.

ಭಾರತದಾದ್ಯಂತ ಅನೇಕಾನೇಕ ಗುಲಾಮ ಜಾತಿಗಳು ಇವೆ; ಇವುಗಳಿಗೆ ಕಾನೂನಿನ ಮಾನ್ಯತೆ ಇಲ್ಲವೇನೊ ನಿಜ-1843ರ ಸರ್ಕಾರಿ ಕಾಯ್ದೆಯಂತೆ ಅವುಗಳ ಏಳ್ಗೆಗಾಗಿ ಪ್ರಯತ್ನಿಸಲಾಗಿದ್ದರೂ ವಾಸ್ತವದಲ್ಲಿ ಅವುಗಳು ಗುಲಾಮ ಸ್ಥಿತಿಯಲ್ಲೇ ಇವೆ. ಅವುಗಳ ಹುಟ್ಟು ಮತ್ತು ಸ್ಥಾನಮಾನವನ್ನು ಹೀಗೆ ವಿವರಿಸಬಹುದು, ಬ್ರಹ್ಮನಿಂದ ಸೃಷ್ಟಿಯಾದ ನಾಲ್ಕು ವರ್ಣಗಳ ನಂತರ ಆರು ಅನುಲೋಮ ಜಾತಿಗಳು ಹುಟ್ಟಿಕೊಂಡವು. ಈ ಅನುಲೋಮ ಜಾತಿಗಳಿಗೆ ಸೆರಿದವರ ತಂದೆ ಬ್ರಾಹ್ಮಣ–ಕ್ಷತ್ರಿಯರಾಗಿದ್ದು ತಾಯಿಯು ಕೆಳವರ್ಗಕ್ಕೆ ಸೇರಿದ ಮಹಿಳೆ ಆಗಿದ್ದಳು ಇದರ ನಂತರ ಆರು ಪ್ರತಿಲೋಮ ಜಾತಿಗಳು ಬರುವುವು. ಈ ಪ್ರತಿಲೋಮ ಜಾತಿಗಳಿಗೆ ಸೇರಿದವರು ಬ್ರಾಹ್ಮಣ–ಕ್ಷತ್ರಿಯ ತಾಯಿಯವರಿಂದಲೂ ಮತ್ತು ಕೆಳವರ್ಗದ ತಂದೆಯವರಿಂದಲೂ ಹುಟ್ಟಿದವರಾಗಿದ್ದಾರೆ ಈ ಪೈಕಿ ಚಂಡಾಲ ವರ್ಗವು ಮೂರನೆಯದಾಗಿದೆ; ಈ ವರ್ಗಕ್ಕೆ ತಂದೆಯಂದಿರು ಶೂದ್ರರಿಂದಲೂ ಮತ್ತು ತಾಯಂದಿರು .ಬಾಹ್ಮಣ ವರ್ಗದಿಂದಲೂ ಬಂದವರಾಗಿದ್ದಾರೆ. ಈ ಚಂಡಾಲರನ್ನೇ ಗುಲಾಮರು ಎನ್ನಲಾಗುವುದು, ಇವರನ್ನು 15 ಉಪವರ್ಗಗಳಾಗಿ ವಿಭಜಿಸಲಾಗಿದೆ. ಅವರವರೊಳಗೆ ವಿವಾಹ ಸಂಬಂಧ ಏರ್ಪಡುವುದಿಲ್ಲ; ಈ ಸಂಪ್ರದಾಯವನ್ನು ಇಂದಿಗೂ ಪಾಲಿಸಲಾಗುತ್ತಿದೆ ಈ ಪೈಕಿಯಲ್ಲಿ ಕೊನೆಯ ಎರಡು ಉಪವರ್ಗಗಳೇ–ಕಪಟ (KAPATA) ಅಥವಾ ಕಂಬಳಿ (RAJ) ಹೊದೆಯುವ ಕೊರಗರು ಮತ್ತು ಸೊಪ್ಪು ಅಥವಾ ಎಲೆಗಳನ್ನೇ ವಸ್ತ್ರವಾಗಿ ತೊಡುವ ಕೊರಗರು ಎನ್ನಲಾಗುವುದು.

1.2.1.—ಕೈಫಿಯತ್ತಿನ ದಾಖಲೆಯಲ್ಲಿ ದೊರೆಯುವ ವಿಚಾರಗಳು :

- △ ವರ್ಣ ವ್ಯವಸ್ಥೆ ಹೇಗೆ ಸೃಷ್ಟಿಯಾಯಿತು ಮತ್ತು ಮೂರು ಘಟ್ಟಗಳಲ್ಲಿ ಆದ ಬದಲಾವಣೆ ಹಾಗೂ ವರ್ಣ ಸಂಕರದ ವಿಚಾರ ಪ್ರಸ್ತಾಪಿಸಲಾಗಿದೆ.
- △ ಕೊನೆಯ ಘಟ್ಟದಲ್ಲಿ, ಶೂದ್ರ ಮತ್ತು ಬ್ರಾಹ್ಮಣರ ಸಂಕರದಿಂದ ಹುಟ್ಟಿದವರು ಚಂಡಾಲರಾದರು. ಇವರಲ್ಲಿ 15 ಉಪವರ್ಗಗಳಿದ್ದು, ಕೊನೆಯ ವರ್ಗದಲ್ಲಿ ಬರುವವರು ಕೊರಗರು.
- △ ಕೊರಗರಲ್ಲಿ ಎರಡು ಪಂಗಡಗಳು 'ಕಪಟ' ಅಥವಾ 'ಕಂಬಳಿ 'ಕೊರಗರು'ಮತ್ತು 'ಸೊಪ್ಪು ಕೊರಗರು'.

1.3 ಚಾರಿತ್ರಿಕ ಹಿನ್ನೆಲೆ

ಡರ್ಸ್ಟನ್ ತನ್ನ "ದಕ್ಷಿಣ ಭಾರತದ ಜಾತಿಗಳು ಮತ್ತು ಪಂಗಡಗಳು" ಎಂಬ ಬೃಹತ್ಕೃತಿಯಲ್ಲಿ 19ನೇ ಶತಮಾನದಲ್ಲಿ ಪ್ರಕಟಿಸಲ್ಪಟ್ಟಿರುವ ಮಾನ್ಯುಯಲ್ ಆಫ್ ದಿ. ಸೌತ್ ಕೆನರಾ ಡಿಸ್ಟ್ರಿಕ್ಟ್ ಕೃತಿಯಿಂದ ಕೆಳಕಂಡ ಮಹತ್ವದ ಸಂಗತಿಯೊಂದನ್ನು ಉಲ್ಲೇಖಿಸಿದ್ದಾನೆ.

ಕದಂಬ ವಂಶದ ಮಯೂರವರ್ಮನು ತುಳು ಬ್ರಾಹ್ಮಣರ ಉದಯಕ್ಕೆ ಕಾರಣನಾದನು ಎನ್ನುವುದನ್ನು ಸ್ಪಷ್ಟ ಪಡಿಸಲು ಚಾಲ್ತಿಯಲ್ಲಿರುವ ಎಲ್ಲಾ ಸಂಪ್ರದಾಯಗಳೂ ಒಂದು ಗೂಡುವುವು ಆದರೆ ಆ ವಿವರಗಳು ಈ ಪ್ರದೇಶದಲ್ಲಿ ಅವರು ಹೇಗೆ ಬೇರೂರಲು ಕಾರಣವಾದರು ಎನ್ನುವುದನ್ನು ಮಾತ್ರ ಬೇರೆ ಬೇರೆ ರೀತಿಯಲ್ಲೇ ತಿಳಿಸುವುವು. ಒಂದು ವ್ಯಾಖ್ಯಾನದ ಪ್ರಕಾರ ಹಬಾಶಿಕಾ (Habashika) ಎಂಬ ಕೊರಗರ ನಾಯಕ ಮಯೂರವರ್ಮನನ್ನು ಯುದ್ಧದಲ್ಲಿ ಸೋಲಿಸಿ ಓಡಿಸಿದನು. ಆದರೆ ಕಾಲಾನುಕ್ರಮದಲ್ಲಿ ಗೋಕರ್ಣದಿಂದ ಆಳುತ್ತಿದ್ದ ಲೋಕಾದಿತ್ಯನಿಂದ (ಮಯೂರವರ್ಮನ ಮಗ ಅಥವಾ ಅಳಿಯ) ಹಬಾಶಿಕಾ ಪುನಃ ನಡೆದ ಯುದ್ಧದಲ್ಲಿ ಸೋಲಬೇಕಾಯಿತು. ಆಗ ಹಬಾಶಿಕಾ ಮತ್ತು ಅವನ ಅನುಯಾಯಿಗಳನ್ನು ಬಡಿದೋಡಿಸಲಾಯಿತು. ಈ ಲೋಕಾದಿತ್ಯನೇ ಮೂವತ್ತೆರಡು ಹಳ್ಳಿಗಳಲ್ಲಿ ಅಹಿಕ್ಷೇತ್ರದಿಂದ ಕರೆತಂದ ಬ್ರಾಹ್ಮಣರನ್ನು ನೆಲೆ ನಿಲ್ಲಿಸಿದನು.

ಅಂದರೆ ಮಯೂರವರ್ಮನ ಕಾಲದಲ್ಲಿ ಕೊರಗರು ಕರಾವಳಿ ಪ್ರದೇಶದಲ್ಲಿ ಅಪಾರ ಸಂಖ್ಯೆಯಲ್ಲಿದ್ದು ತಮ್ಮ ನಾಯಕನೊಬ್ಬನನ್ನು ರಾಜನಾಗಿ ಹೊಂದಿದ್ದರು ಎನ್ನುವುದು ಮೇಲ್ಕಂಡ ಕಥೆಯಿಂದ ತಿಳಿದು ಬರುವುದು. ಇಂಥ ಒಂದು ಪ್ರಬಲ ಜನಾಂಗ ಅಧಿಕಾರ ಕಳೆದುಕೊಂಡು ತೀರಾ ನಿಸ್ಸಹಾಯಕ ಸ್ಥಿತಿಗೆ ಇಳಿದುದು ಹೇಗೆ ಎಂಬುದನ್ನು ವಾಲೆ ಹೌಸ್. ಹೀಗೆ ವಿವರಿಸಿದ್ದಾರೆ:

ಉತ್ತರ ಕನ್ನಡದ ಬನವಾಸಿಯಲ್ಲಿ ಲೋಕಾದಿತ್ಯನು ರಾಜ್ಯವಾಳುತ್ತಿದ್ದಾಗ ಅಂದರೆ ಪ್ರಾಯಶ: ಕ್ರಿ.ಶ. 450ರ ಸಮಯದಲ್ಲಿ ಹಬಾಶಿಕಾನೆಂಬುವನು ಘಟ್ಟದ ಮೇಲಿನಿಂದ ಸೈನಿಕರನ್ನು ಒಟ್ಟುಗೂಡಿಸಿ ಸೈನ್ಯ ಕಟ್ಟಿ ಬನವಾಸಿ ಪ್ರಾಂತ್ಯವನ್ನು ದೂಳೀಪಟ ಮಾಡಿದನು. ಅನಂತರ ಅವನು ದಕ್ಷಿಣದತ್ತ ಮಂಗಳೂರಿಗೆ ತೆರಳಿದನು ಈ ಆಕ್ರಮಣಕಾರಿ ರಾಜನನ್ನು ಸಿಡುಬು ಕಾಡಿತು: ಇರುವೆಗಳು ಕಚ್ಚಿ ಘಾಸಿಪಡಿಸಿದವು. ಹಬಶಿಕಾನಿಗೆ ಮಂಗಳೂರು ಹಿಡಿಸಲಿಲ್ಲ. ಆದ್ದರಿಂದ ಅಲ್ಲಿಂದ 12 ಮೈಲು ದಕ್ಷಿಣಕ್ಕಿರುವ ಮಂಜೇಶ್ವರಕ್ಕೆ ಅವನು ದಂಡೆತ್ತಿ ಹೋಗಿ ಅಲ್ಲಿಯ ರಾಜನಾದ ವೀರವರ್ಮನೆಂಬುವನ ಮಗ ಅಂಗಾರವರ್ಮನನ್ನು ಸೋಲಿಸಿದನು. ಮುಂದೆ ಹಬಾಶಿಕಾ ಅಲ್ಲಿ ತನ್ನ ಅಣ್ಣನ ಮಗನೊಡಗೂಡಿ 12 ವರ್ಷಗಳ ಕಾಲ ರಾಜ್ಯವಾಳಿದನು. ಆ ನಂತರ ಅವರಿಬ್ಬರೂ ಮರಣವಪ್ಪಿದರು.

ಇನ್ನೊಂದು ದಂತಕತೆಯ ಪ್ರಕಾರ ಹಬಾಶಿಕಾ ಅಂಗಾರವರ್ಮ ರೂಪಿಸಿದ ತಂತ್ರಕ್ಕೆ ಬಲಿಯಾಗಿ ಮರಣ ಹೊಂದಿದನು. ಅದೇನೆಂದರೆ ಹತ್ತಿರದ ಇನ್ನೊಬ್ಬ ರಾಜನನ್ನು ತನ್ನ ತಂಗಿಯೊಂದಿಗೆ ಹಬಾಶಿಕಾನ ವಿವಾಹಕ್ಕೆ ಪ್ರೇರೆಪಿಸಿದನು ಅಂಗಾರವರ್ಮ, ಅಂಗಾರವರ್ಮ ಮತ್ತು ಆ ರಾಜ ಸೇರಿ ಕುಟಿಲ ತಂತ್ರವೊಂದನ್ನು ರೂಪಿಸಿದರು. ಮದುವಣಿಗನಾಗಿ ತನ್ನ ಜಾತಿಬಾಂಧವರೊಂದಿಗೆ ಬಂದ ಹಬಾಶಿಕಾನನ್ನೂ ಅನುಯಾಯಿಗಳನ್ನು ಅಂಗಾರವರ್ಮ ಭೀಕರ ಹತ್ಯೆಗೈದನು. ಅನಂತರ ಅಂಗಾರವರ್ಮನು ಮಂಜೇಶ್ವರಕ್ಕೆ ದಾಳಿಯಿಟ್ಟು ಹಬಾಶಿಕಾನ ಸೈನಿಕರನ್ನು ಹೊಡೆದೋಡಿಸಿದನು: ಅವರನ್ನು ಕಾಡಿಗಟ್ಟಿದನು ಅವರು ಗುಲಾಮರಾಗಲು ಒಪ್ಪುವ ತನಕ ಹಿಂಸಿಸಲಾಯಿತು ಆದರೆ ಹಬಾಶಿಕಾ ರಾಜ್ಯವಾಳುತ್ತಿದ್ದಾಗ ಸರ್ಕಾರದ ಅತ್ಯುನ್ನತ ಪದವಿಗಳಿಗೇರಿದ್ದ ಕೊರಗರನ್ನು ವಿವಸ್ತ್ರಗೊಳಿಸಿ ಕರಾವಳಿ ಕಡೆಗೆ ನೇಣು ಹಾಕಲು ಒಡಿಸಲಾಯಿತು ಆಗ

ನಗ್ನ ಕೊರಗರು ಗಿಡದ ಸೊಪ್ಪು ಎಲೆಗಳಿಂದ ತಮ್ಮ ಗುಪ್ತಾಂಗಗಳನ್ನು ಮುಚ್ಚಿಕೊಂಡರು, ತಮ್ಮ ನಗ್ನತೆಗಾಗಿ ಅವರು ನಾಚಿಕೊಂಡರು. ಅವಮಾನಕ್ಕೊಳಗಾದರು. ಆಗ ಅಂಗಾರವರ್ಮನ ಸೈನಿಕರು ಕೊರಗರ ಬಗೆಗೆ ಕರುಣೆ ತೋರಿದರು. ಆದರೆ ಅವರು ಇನ್ನೆಂದಿಗೂ ವಸ್ತ್ರ ತೊಡದೆ ಕೇವಲ ಸೊಪ್ಪು ಎಲೆಗಳಿಂದಲೇ ತಮ್ಮ ತಮ್ಮ ದೇಹಗಳನ್ನು ಮುಚ್ಚಿಕೊಳ್ಳಬೇಕೆಂದು ಕಟ್ಟಪ್ಪಣೆ ಮಾಡಿ ಆ ಕೊರಗರನ್ನು ಬಿಟ್ಟು ಬಿಟ್ಟರು. ಹೀಗೆ ಅತ್ಯಂತ ಕೀಳು ಜಾತಿಯ ಕೊರಗರ ಹುಟ್ಟು ಆಯಿತು.

1.3.1—.ಮೇಲಿನ ವಸ್ತುವಿನಲ್ಲಿ ದೊರೆಯುವ ಮುಖ್ಯಾಂಶಗಳು:

- ಕೊರಗರು ಅರಸು ಮನೆತನಕ್ಕೆ ಸೇರಿದವರಾಗಿದ್ದರು.
- ಕೊರಗರು ವೀರ ಕಲಿಗಳೂ ರಣ ವಿದ್ಯೆಯಲ್ಲಿ ಪಳಗಿದವರೂ ಆಗಿದ್ದರು.
- ಕೊರಗರು ಕರಾವಳಿ ಹಾಗೂ ಮಲೆನಾಡು ಪ್ರದೇಶದಲ್ಲಿ ಅಂದು ದಟ್ಟವಾಗಿದ್ದವರೂ ಆಗಿದ್ದರು.
- ಯುದ್ಧದಲ್ಲಿ ಸೋತ ಜನಾಂಗವನ್ನು ಅಂದಿನ ಆರ್ಯ ಪರಂಪರೆಗನುಗುಣವಾಗಿ ಸರ್ವ ರೀತಿಯಲ್ಲೂ ನಿತ್ರಾಣರಾಗಿಸಿ ಕಾಡು, ಬೆಟ್ಟ, ಗುಡ್ಡಗಳಿಗೆ ಓಡಿಸಲಾಗುತ್ತಿತ್ತು ಅಲ್ಲದೆ ಅಂಥವರಲ್ಲಿ ಹಲವರನ್ನು ಗುಲಾಮರನ್ನಾಗಿ ಮಾಡಲಾಗುತ್ತಿತ್ತು.
- ಯುದ್ಧದಲ್ಲಿ ಸೋತ ಕೊರಗರನ್ನು ಬೆತ್ತಲಿಗೊಳಿಸಿ ಅಪಮಾನಿಸಿ ಕೇವಲಸೊಪ್ಪು ಎಲೆಗಳಿಂದಲೇ ಗುಪ್ತಾಂಗ ಮುಚ್ಚಿಕೊಳ್ಳುವಂತೆ ಮಾಡಿದರು.
- ಯುದ್ಧದಲ್ಲಿ ಸೋತ ಕೊರಗ ಸೈನಿಕರನ್ನು ಗೆದ್ದವರು ರಾಜ ಮತ್ತು ಭೂಮಾಲೀಕರು ಖಾಸಗಿ ಆಸ್ತಿಯಾಗಿ ಪರಿಗಣಿಸಿ ಗುಲಾಮ ಕಾರ್ಮಿಕರನ್ನಾಗಿಸಿದುದು.
- ಕೊರಗರನ್ನು ಹೀಗೆ ಗುಲಾಮರನ್ನಾಗಿಸಿದ್ದರಿಂದಲೇ ಅನಂತರದ ಅವಧಿಯಲ್ಲಿ ಸಮಾಜದಲ್ಲಿ ಅತ್ಯಂತ ಕೀಳು ವರ್ಗದವರೆಂದೆನಿಸಿ ಸಂಪೂರ್ಣವಾಗಿ ಅವಲಂಬಿತ ವರ್ಗವಾಗಬೇಕಾಗಿ ಬಂತು.

- ಕೊರಗರು ಖಾಸಗಿ ಅಸ್ತ್ರ ಶಸ್ತ್ರಧಾರಣೆ ಮಾಡುವುದನ್ನು ಹೀಗೆ ತಪ್ಪಿಸಲಾಯಿತು. ತನ್ಮೂಲಕ ಕೊರಗರನ್ನು ಕಾಲಾನುಕ್ರಮದಲ್ಲಿ ಅಸ್ಪೃಶ್ಯರೆಂದು ಪರಿಗಣಿಸಲಾಯಿತು.

1.4 — ಪೌರಾಣಿಕ ಮತ್ತು ಚಾರಿತ್ರಿಕ ವಿಷಯಗಳ ತೌಲನಿಕ ಮತ್ತು ಅನ್ವಯಿಕತೆ

ಮನುಷ್ಯ ಸಂಬಂಧಗಳ ವಿಧಿ ನಿಷೇದಗಳೊಂದಿಗೆ ಪ್ರಾರಂಬವಾಗುವ ಅಣ್ಣ-ತಂಗಿಯರ ಕಥೆ ಮೂಲ ಸಂತಾನವನ್ನು ಕುರಿತದ್ದು ಎನ್ನುವುದನ್ನು ಸ್ಪಷ್ಟಪಡಿಸುತ್ತದೆ. ಈ ಕಥೆಯಲ್ಲಿ ಸಿಕ್ಕುವ ಪಾಠಾಂತರಗಳು ಕಾಲಾಂತರವಲ್ಲಾದ ಬದಲಾವಣೆಗಳನ್ನು ತನ್ನೊಡಲಲ್ಲಿ ಸೇರಿಸಿಕೊಂಡಿರುವುದು ಕಂಡುಬರುತ್ತದೆ. ಜೊತೆಗೆ ವೈದಿಕ ಸಂಪ್ರದಾಯದ ಹೇರಿಕೆಯನ್ನು ಗುರುತಿಸಿಕೊಳ್ಳಬಹುದಾಗಿದೆ ಈ ಕಥೆಯಲ್ಲಿ ಬರುವ ಪ್ರಳಯದ ವಿಚಾರಗಳು ಸಮರವನ್ನು ಸೂಚಿಸುತ್ತದೆ ಮತ್ತು ಸಮರದ ನಂತರ ಉಳಿದುಕೊಂಡು ಬಂದ ಕೊರಗರ ಒಂದು ಹಂತ ಪಾಠಾಂತರದ ಕಥೆಯಲ್ಲಿ ಸಿಕ್ಕುತ್ತದೆ. ಆದರೆ ಮೂಲದ ಕಥೆಯಲ್ಲಿ ಬ್ರಹ್ಮಾಂಡ ವೆಲ್ಲವೂ ನೀರುಮಯವಾಗಿದ್ದು ಅ ನೀರಿನಲ್ಲಿ ನಾವು ಹುಟ್ಟಿದೆವು: ನಾವು ಮೂಲ ನಿವಾಸಿಗಳು ಎನ್ನುವ ಪ್ರಜ್ಞಾ ಪೂರ್ವಕ ವಿಚಾರ ಕೊರಗರಲ್ಲಿಯೇ ಕೊರಗತನದಿಂದ ಸ್ಪಷ್ಟವಾಗುವುದು.

ಕೈಫಿಯತ್ತಿನ ದಾಖಲೆಯಲ್ಲಿ ಸಿಗುವ ಪೌರಾಣಿಕ ವಿಷಯದ ಹಿನ್ನೆಲೆಯಲ್ಲಿ ವಿಶ್ಲೇಷಿಸಿದರೆ ಅಲ್ಲಿ ಕೊರಗರು ಮನುಷ್ಯ ಜಾತಿಯಲ್ಲೇ ಅತಿ ಕೆಳ ಜಾತಿಯವರು ಎನ್ನುವುದು ಗೊತ್ತಾಗುತ್ತದೆ. ಇದಲ್ಲದೆ ಮೂರು ಬಗೆಯ ವರ್ಣ ಸಂಕರದ ವಿಚಾರಗಳನ್ನು ತಿಳಿಸುತ್ತದೆ.

ಅಣ್ಣ—ತಂಗಿಯರ ಕಥೆಯಲ್ಲಿ ವರ್ಣ ವ್ಯವಸ್ಥೆಯ ವಿಚಾರಗಳೂ ಪ್ರಸ್ತಾಪವಾಗಿರುವುದನ್ನು ಗಮನಿಸಬಹುದು ಅಲ್ಲಿಯೂ ಇವರು ಕೆಳಸ್ತರದವರು ಎನ್ನುವ ವಿಚಾರ ಸೇರಿಕೊಂಡಿದೆ ಜನಪದದಲ್ಲಿ ಇದಕ್ಕನುಗುಣವಾಗಿಯೇ ಒಂದು ಗಾದೆ ಮಾತು ಕೂಡಾ ಬಳಕೆಯಲ್ಲಿದೆ.

"ಪಕ್ಕಿ ಪಕ್ಕಿಯಲಿ ಕಾಗಿ ಚೆಂಡಾಳಿ ಮನುಷ್ಯ ಜಾತಿಯಲ್ಲಿ ಕೊರವ ಚೆಂಡಾಳಿ[1]" ಈ ಗಾದೆ ಮಾತಿನಲ್ಲಿ ಬರುವ ಚೆಂಡಾಳಿ ಎನ್ನುವುದು ಚಂಡಾಲ ಎನ್ನುವ ಅತ್ಯಂತ ಕೆಳಸ್ತರದ ಜಾತಿಯನ್ನು ಸೂಚಿಸುವಂಥದ್ದಾಗಿದೆ. ಈ ಪೌರಾಣಿಕ ಕಥೆಯಲ್ಲಿ ಬರುವ ವಿಷಯದ ಪ್ರಸ್ತಾಪಗಳೆಲ್ಲಾ ಸತ್ಯ ಘಟನೆಗಳು ಎನ್ನಲಾಗದಿದ್ದರೂ ಸತ್ಯಕ್ಕೆ ತೀರಾ ದೂರವಾದವುಗಳು ಎನ್ನಲಾಗದು. ಯಾವುದೇ ಒಂದು ವಸ್ತು ಹುಟ್ಟಿಕೊಳ್ಳುವುದಕ್ಕೆ ಅದಕ್ಕೆ ಇನ್ನೊಂದರ ಪ್ರೇರಣೆ ಕಾರಣವಾಗಿರುತ್ತದೆ ಎನ್ನುವುದನ್ನು ಗಮನದಲ್ಲಿಟ್ಟು ಕೊಂಡರೆ, ಇಲ್ಲಿಯ ಕೆಲವು ವಿಚಾರಗಳು ನಮ್ಮ ಗಮನವನ್ನು ಸೆಳೆಯುವಲ್ಲಿ ಸಾಫಲ್ಯತೆಯನ್ನು ಪಡೆದುಕೊಳ್ಳುವುವು.

ಇಂಥ ಕಥೆಗಳು ಕೇವಲ ಕೊರಗ ಜನಾಂಗದ ಒಸ್ನೆಲೆಯಲ್ಲಿಯೇ ಬಂದಿವೆ. ಎನ್ನುವ ವಿಚಾರವೇನೂ ಇಲ್ಲ. ಅಣ್ಣ–ತಂಗಿಯರ ಕಥೆಯನ್ನು ಗಮನಿಸಿದರೆ ನಲ್ಕೆಯವರಲ್ಲಿಯೂ ಕೂಡಾ ಇಂತಹುದೇ ಕಥೆ ಲಭ್ಯವಾಗುತ್ತದೆ. ಆದರೆ ಅಲ್ಲಿ ‘ಡೋಲಿನ’ ಬದಲಾಗಿ ‘ತಂಬರೆ’ ಎಂಬ ವಾದ್ಯದ ಹೆಸರನ್ನು ಬಳಸಿಕೊಳ್ಳಲಾಗುತ್ತದೆ. ನಲ್ಕೆಯವರಾದರೂ ಕೂಡಾ ವರ್ಣಗಳಿಂದ ಪ್ರತ್ಯೇಕವಾಗಿಯೇ ಉಳಿದವರು. ಇವರು ಮೂಲನಿವಾಸಿಗಳು ಎಂದು ಅಧ್ಯಯನಗಳೊಂದಿಗೆ ವಿದಿತವಾದ ವಿಚಾರ.

ಈ ಪೌರಾಣಿಕ ಕಥೆಗಳಲ್ಲಿ ಬರುವ ವರ್ಣ ಸಂಕರ ಮತ್ತು ಪ್ರಳಯದ ವಿಚಾರಗಳು ಆರ್ಯ ಮತ್ತು ದ್ರಾವಿಡರ ಸಂಘರ್ಷವನ್ನೇ ಸೂಚಿಸುತ್ತವೆ ಎಂದೆನಿಸುತ್ತದೆ. ಆದರೆ ಈ ಕಥೆಗಳಲ್ಲಿ ಬರುವ ಎಲ್ಲಾ ವಿಚಾರಗಳನ್ನೂ ಒಪ್ಪಿಕೊಳ್ಳುವುದು ದುಸ್ತರವಾದುದು, ಕೈಫಿಯತ್ತಿನ ವಿಚಾರವನ್ನು ದಾಖಲಿಸಿದ ವಾಲಿಹೌಸ್ ಕೂಡಾ ಕೆಲವು ವಿಚಾರಗಳನ್ನು ಒಪ್ಪದೆ ಇವು ಬ್ರಾಹ್ಮಣರು ನೀಡ-ವ ದಾಖಲೆ ಎಂದು ಅಲ್ಲಗಳೆಯುತ್ತಾನೆ. ಈ ಕೆಳಗಿನ ಗುಲಾಮ ಜಾತಿಗಳು ಇಲ್ಲಿನ ಪುರಾತನ ಜನಾಂಗಗಳಿಂದಲೇ ಹುಟ್ಟಿದವುಗಳಾಗಿವೆ. ಆರ್ಯರ ಆಕ್ರಮಣಕಾರರು

---

[1]ಗಾದೆ ಮಾತಿನಲ್ಲಿ ಬರುವುದು "ಕೊರವ" ಎಂದು ಇದೆ. ಕೊರವರಲ್ಲಿ ಮತ್ತು ಕೊರಗರಲ್ಲಿ ಪ್ರಾದೇಶಿಕವಾಗಿ ಭಿನ್ನತೆ ಇದ್ದಾಗಲೂ ಸಾಕಷ್ಟು ಸಾಮ್ಯತೆಗಳಿವೆ. ಹೀಗಾಗಿ ಈ ಗಾದೆ ಇವರನ್ನೇನು ಹೊರತಾಗಿಲ್ಲ ಎನ್ನುವ ಕಾರಣಕ್ಕಾಗಿ ಆ ಮಾತನ್ನು ಇಲ್ಲಿ ಬಳಸಿಕೊಳ್ಳಲಾಗಿದೆ.

ಅವರನ್ನು ಉತ್ತರದಿಂದ ದಕ್ಷಿಣಕ್ಕೆ ಅಟ್ಟಿದರು. ಆಗ ಅವರ ಭೂಮಿ ಆರ್ಯರ ಪಾಲಾಯಿತು. ಯುದ್ಧದಲ್ಲಿ ಸೋತ ಈ ಮೂಲ ನಿವಾಸಿಗಳನ್ನು ಬೆಟ್ಟಗುಡ್ಡಗಳಿಗೆ ಕಾಡುಗಳಿಗೆ ಅಟ್ಟಲಾಯಿತು. ಈ ಎಲ್ಲಾ ಜನಾಂಗಗಳನ್ನು ಅವುಗಳ ಹಿಂದೂ ಧಣಿಗಳು ಅತ್ಯಂತ ಹೀನಾಯವಾಗಿ ಕಂಡುದಲ್ಲದೆ ಅವರನ್ನು ಹೆಚ್ಚು ಹೆಚ್ಚು ಕೊಸಕರನ್ನಾಗಿಯೇ (ಅನಾಗರಿಕರನ್ನಾಗಿಯೇ) ಇರಿಸಿದರು. ಹೀಗೆ ಹಿಂದೆ ಉಚ್ಛ್ರಾಯ ಸ್ಥಿತಿಯಲ್ಲಿದ್ದವರನ್ನು ಯುದ್ಧದಲ್ಲಿ ಗೆದ್ದ ಆರ್ಯರು ಅಪಮಾನಿಸುವ ಹಿಂಸಿಸುವ ಪ್ರವೃತ್ತಿ ಕಾಣಿಸಿಕೊಂಡಿತು.

ಆರ್ಯ ಮತ್ತು ದ್ರಾವಿಡರ ಕುರಿತು ಸಾಕಷ್ಟು ಭಿನ್ನಾಭಿಪ್ರಾಯಗಳಿದ್ದರೂ ಅವುಗಳನ್ನು ಕೆದಕುವುದು ನಮ್ಮ ಉದ್ದೇಶವೂ ಅಲ್ಲ. ಇಲ್ಲಿ ವಾಲ್‌ಹೌಸ್ ಹೇಳುವ ವಿಚಾರಗಳು ಮತ್ತು ಈ ಹಿಂದೆಯೇ ನಾವು ಗಮನಿಸಿದ ಪೌರಾಣಿಕ ಕಥೆಯ ಕೆಲ ಭಾಗಗಳಲ್ಲಿ ಈ ಅಂಶಗಳನ್ನು ಕಂಡುಕೊಳ್ಳಬಹುದಾಗಿದೆ.

ಈ ಪೌರಾಣಿಕ ಕಥೆಗಳ ವಿಷಯ ವಸ್ತುವಿನಲ್ಲಿ ಸಿಗುವ ಮಾಹಿತಿಗಳು ಒಂದು ಘಟ್ಟವಾದರೆ, ಇನ್ನು ಚಾರಿತ್ರಿಕ ವಿಷಯದ ಹಿನ್ನೆಲೆಯಲ್ಲಿ ಕೊಡುವ ಥರ್ಸ್ಟನ್ ಮತ್ತು ವಾಲ್‌ಹೌಸ್‌ರ ವಿಚಾರಗಳು ಮತ್ತೊಂದು ಘಟ್ಟವಾಗುತ್ತವೆ. ಇವೆರಡಕ್ಕೂ ಇರುವ ಬಂಧವನ್ನು ಅಲ್ಲಗಳೆಯದ ಮಟ್ಟಿಗೆ ಅವೆರಡೂ ಬೆರತುಕೊಂಡಂತೆ ಭಾಸವಾಗುತ್ತವೆ.

ಕದಂಬ ವಂಶದ ಮಯೂರವರ್ಮ ಮತ್ತು ಕೊರಗರ ನಾಯಕನಾಗಿ ಬರುವ ಹಬಾಶಿಕರ ನಡುವಣ ಯುದ್ಧ ಮತ್ತು ಲೋಕಾದಿತ್ಯನೊಂದಿಗೆ ಆಗುವ ಯುದ್ಧ ಇವು ಚಾರಿತ್ರಿಕ ದಾಖಲೆಯಾಗಿ ನಿಲ್ಲುವುವು. ಇನ್ನೊಂದು ದಂತ ಕಥೆಯಂತೆ ಸಿಕ್ಕುವ ಹಬಾಶಿಕನ ಮರಣದ ಕಥೆಯನ್ನು ಗಮನಿಸಿದರೆ ಅಂಗಾರವರ್ಮ ತನ್ನ ತಂಗಿಯನ್ನು ಹಬಾಶಿಕನಿಗೆ ವಿವಾಹ ಮಾಡಿಕೊಡುವ ಸಂದರ್ಭವನ್ನು ಗಮನಿಸಿದರೆ ಕೊರಗರಿಗೂ ಮತ್ತು ಕದಂಬ ಅರಸರಿಗೂ ಆಗುವ ಸಂಬಂಧವನ್ನು ಸ್ಪಷ್ಟ ಪಡಿಸುತ್ತದೆ ಜೊತೆಗೆ ಭೀಕರ ಹತ್ಯೆಯನ್ನೂ ನಾವು ನೋಡುತ್ತೇವೆ. ವೈದಿಕ ಮತ್ತು ಕೆಳಜಾತಿಯ ವ್ಯಕ್ತಿಗಳ ವಿವಾಹ ಸಂಬಂಧಗಳಿಗೆ ಸಂಬಂಧಿಸಿದಂತೆ ಐತಿಹ್ಯಗಳು ಪೌರಣಿಕ ಕಥೆಗಳು, ಜಾನಪದ ಕಥೆಗಳು ನಮಗೆ ಸಾಕಷ್ಟು ಲಭ್ಯವಾಗುತ್ತವೆ ಆದರೆ ಇಂತಹ ಕಡೆಗಳಲೆಲ್ಲಾ ಹಬಾಶೀಕನಂತೆ ಭೀಕರ ಹತ್ಯೆಗೊಳಗಾಗುವುದನ್ನೇ ನಾವು

ಗಮನಿಸುತ್ತೇವೆ. ಉದಾ: ವೈದಿಕರ ಮಾರಿಕಾಂಬೆ ಮತ್ತು ಮಾದಿಗ ವ್ಯಕ್ತಿಯ ಸಂಬಂಧದ ಕಥೆ (1. ಡಾ. ಅರವಿಂದ ಮಾಲಗತ್ತಿ ಮಾರಿಕಾಂಬೆ ಮತ್ತು ಕೋಣ; 2. ಡಾ. ಅರವಿಂದ ಮಾಲಗತ್ತಿ ಮಾರಿಕಾಂಬೆ— [illegible]ಗೆ ಜಿಜ್ಞಾಸೆ–ಈ ಪ್ರಬಂಧಗಳನ್ನು ಹೆಚ್ಚಿನ ವಿವರಗಳಿಗೆ ಗಮನಿಸಿರಿ) ಸಂಪದತ್ತಿಯ ಕೆಳಜಾತಿಯ ಎಲ್ಲಮ್ಮ ಮತ್ತು ಮೇಲ್ಜಾತಿಯ ಜಮದಗ್ನಿಯರ ಕಥೆ, ಚಕ್ರಾಧಿಪತಿಯ ಕನಸು ಕಂಡಿದ್ದಕ್ಕಾಗಿ ಪಾತಾಳವನ್ನು ಕಂಡ ಬಲಿ ಚಕ್ರವರ್ತಿಯ ಕಥೆ– ಇಂಥವಲ್ಲದೆ ಕೆಳಜಾತಿಗಳಿಗೂ ಮತ್ತು ವೈದಿಕ ಸಂಪ್ರದಾಯಸ್ಥರಿಗೂ ಇರುವ ಸಂಬಂಧಗಳನ್ನು ಸೂಚಿಸುವ ಕೆಲವು ಸಾಂಪ್ರದಾಯಿಕ ವಿಧಿವಿಧಾನಗಳು ಉತ್ತರ ಕರ್ನಾಟಕದಲ್ಲಿ ಇಂದಿಗೂ ಬಳಕೆಯಲ್ಲಿವೆ. ಉದಾ: ವೈದಿಕರ ಮದುವೆ ಸಂಪ್ರದಾಯದಲ್ಲಿ ಕೆಳಜಾತಿಯವರ ವೃತ್ತಿಗೆ ಸಂಬಂಧಿಸಿದ ಆಯುಧಗಳನ್ನು ಪೂಜಿಸಿಯೇ ವಿವಾಹ ವಾಗುವ ಕ್ರಮವಿದೆ. ಇಂತಹವುಗಳನ್ನೆಲ್ಲ ಗಮನಿಸಿದಾಗ ಕೆಳಸ್ತರದ ಮತ್ತು ವೈದಿಕರ ಸಂಬಂಧ ಸ್ಪಷ್ಟವಾಗುತ್ತದೆ. ಅದಕ್ಕೆ ಚಾರಿತ್ರಿಕ ವ್ಯಕ್ತಿಯಾದ ಹಬಾಶಿಕ ಒಂದು ಒಳ್ಳೆಯ ಉದಾಹರಣೆಯಾಗಿ ಬಿಡುತ್ತಾನೆ.

ಚಾರಿತ್ರಿಕ ದಾಖಲೆಗಳಲ್ಲಿ ಸಿಗುವ ಕುತೂಹಲಕರವಾದ ಇನ್ನೊಂದು ವಿಷಯ ವೆಂದರೆ ಹಬಾಶಿಕನ ಭೀಕರ ಹತ್ಯೆಯ ನಂತರ ಮಂಜೇಶ್ವರದಲ್ಲಿದ್ದ ಹಬಾಶಿಕನ ಸೈನಿಕರನ್ನು ಹೊಡೆದು ಕಾಡಿಗಟ್ಟಿದ ಸಂದರ್ಭದಲ್ಲಿ ವಿವಸ್ತ್ರಗೊಳಿಸಿದುದು ತಿಳಿದು ಬರುತ್ತದೆ. ವಿವಸ್ತ್ರಗೊಂಡ ಕೊರಗರು ತಮ್ಮ ಮಾನ ಮುಚ್ಚಿಕೊಳ್ಳುವುದಕ್ಕಾಗಿ ಸೊಪ್ಪಿನ ಮೊರೆಯನ್ನು ಹೊಕ್ಕರು ಎನ್ನುವ ವಿಚಾರ ಇಲ್ಲಿ ತುಂಬಾ ಮಹತ್ವ ದೆನಿಸುತ್ತದೆ. ಏಕೆಂದರೆ ಕೆಳಜಾತಿಗೆ ಸಂಬಂಧಪಟ್ಟ ಜನಾಂಗಗಳಲ್ಲಿ ಇಂಥ ಕಥೆಗಳು ನಮಗೆ ಸಿಕ್ಕುತ್ತವೆ.

ಕ್ಷತ್ರಿಯ ವಂಶವನ್ನೇ ನಾಶಮಾಡುವುದಕ್ಕಾಗಿ ಪಣ ತೊಟ್ಟ ಪರಶುರಾಮ ಕ್ಷತ್ರಿಯ ಅರಸರನ್ನು ಸರ್ವನಾಶ ಮಾಡುತ್ತಾನೆ. ಕೊನೆಯಲ್ಲಿ ಉಳಿದವರನ್ನು ಬೆನ್ನಟ್ಟಿ ಓಡಿಸುವಾಗ ಅವರನ್ನೂ ವಿವಸ್ತ್ರಗೊಳಿಸುತ್ತಾನೆ. ಅವರು ಮಾನ ಮುಚ್ಚಿಕೊಳ್ಳುವುದಕ್ಕಾಗಿ ಸೊಪ್ಪನ್ನು ಬಳಸಿಕೊಂಡರು; ಇನ್ನು ಕೆಲವರು ಈತನ ತಾಯಿಯ ಹತ್ತಿರ ಬಂದು ಪ್ರಾಣ ಭಿಕ್ಷೆಯ ಮೊರೆಹೊಕ್ಕರು. ತಾಯಿಯ ಹೇಳಿಕೆ ಯಂತೆ ಪರಶುರಾಮ ಅವರನ್ನು ಕ್ಷಮಿಸಿದನು. ಅವರೇ ಈ ಕೆಳಜಾತಿಯವರಾದರು

ಎನ್ನುವ ಕಥೆಯಿದೆ. ಸಂಪ್ರದಾಯದಂತೆ ಕೆಳಜಾತಿಯ ಜನ ಇಂದಿಗೂ ಸೊಪ್ಪನ್ನು ತೊಟ್ಟು ದೇವಿಗೆ (ಪರಶುರಾಮನ ತಾಯಿ) ಸಪ್ಪೊಪ್ಪಿ ಕಾಣಿಕೆ ಸಲ್ಲಿಸುವ ಕ್ರಮವಿದೆ.

ಈ ಪೌರಾಣಿಕ ಕಥೆ ಮತ್ತು ಕೆಳಜಾತಿಯ ಕೊರಗರ ಹಬಾಶಿಕನ ಕಥೆ ನಡುವೆ ಸಾಕಷ್ಟು ಸಾಮ್ಯಗಳಿವೆ. ಸೋತವರನ್ನು ಚಿತ್ತಲಿಗೊಳಿಸುವುದು ಎಂದರೆ ಸಾರ್ವತ್ರಿಕವಾಗಿ ಅವಮಾನಗೊಳಿಸುವುದಷ್ಟೆ ಅಲ್ಲದೆ, ಯಾವುದೇ ಬಗೆಯ ಆಧಾರವಿಲ್ಲದಂತೆ ಅವರನ್ನು ನಿರಾಶ್ರಿತರನ್ನಾಗಿ ಮಾಡುವುದೇ ಆಗಿದೆ. ಇದರ ಉದ್ದೇಶ ಮತ್ತೊಮ್ಮೆ ಅವರು ಸಬಲರಾಗಿ ಮೈಮೇಲೆ ಬೀಳದಿರಲಿ ಎನ್ನುವುದೆ ಆಗಿದೆ.

ಅಂಬೇಡ್ಕರ್ ಪ್ರಕಾರ 'ದಾಸರು' ಮತ್ತು ದಸ್ಯರು' ಪ್ರಾಚೀನ ಅನಾಗರಿಕ ಜನರಲ್ಲ. ಅವರೂ ಅಷ್ಟೇ ನಾಗರಿಕರಾಗಿದ್ದರು. ಅಲ್ಲದೆ ಆರ್ಯರಿಗಿಂತ ಹೆಚ್ಚು ಶಕ್ತಿಶಾಲಿಗಳಾಗಿದ್ದರು ಎನ್ನುವ ಮಾತು ಇದಕ್ಕೆ ತೀರಾ ಹತ್ತಿರವಾಗುತ್ತದೆ. ಕದಂಬ ರಾಜ್ಯದ ಆಳ್ವಿಕೆಯ ಆರಂಭದ ಕಾಲವನ್ನು ಗಮನಿಸಿದರೆ ನೆಮ್ಮದಿಯನ್ನು ಕದಡಿದ ಕಾಲವಾಗಿಯೇ ಬರುತ್ತದೆ. ಈ ಸಂದರ್ಭದಲ್ಲಿ ಹಿಂದೂ ಧರ್ಮದಲ್ಲಿ ಆಂತರಿಕ ಪ್ರತಿಭಟನೆಗಳು ಎದ್ದಂತಹ ಕಾಲ. ಜೈನ ಮತ್ತು ಬೌದ್ಧ ಧರ್ಮಗಳು ಹುಟ್ಟಿಕೊಂಡು ಅವುಗಳ ಪ್ರಭಾವ ವಿಸ್ತರಿಸಲ್ಪಡುತ್ತಿದ್ದ ಕಾಲ. ಈ ಮಧ್ಯದಲ್ಲಿ ಬ್ರಾಹ್ಮಣರಿಗೂ ಮತ್ತು ಕ್ಷತ್ರಿಯ ಅರಸರಿಗೂ ಸಾಕಷ್ಟು ಭಿನ್ನಾಭಿಪ್ರಾಯಗಳು ಮೂಡಿ ವರ್ಣಾಶ್ರಮ ಪದ್ಧತಿ ಅನುಸರಣೆಯಲ್ಲಿ ಹೊಯ್ದಾಟಗಳಾಗುತ್ತಿದ್ದವು. ಶೂದ್ರರೇ ಕ್ಷತ್ರಿಯರಾಗಿ ಆಳಿರುವಂತ ಕಾಲಕ್ಕೇನೂ ಕೊರತೆಯಿಲ್ಲ. ಅಂಥ ಉದಾಹರಣೆಗಳು ಸಾಕಷ್ಟು ಸಿಗುತ್ತವೆ. ಇಂಥ ಉದಾಹರಣೆಗೆ ಹೆಸರಾದವರಲ್ಲಿ ಹಿಮಾಜಿಯೂ ಒಬ್ಬ. ಅದಕ್ಕೆ ಕೊರಗರ ಹಬಾಶಿಕನನ್ನು ಸೇರಿಸಬೇಕಾಗುತ್ತದೆ.

ಕೊರಗರ ಬಗ್ಗೆ ಬರೆಯುತ್ತ ವಾಲೆಹೌಸ್ ಹೇಳುವುದೆಂದರೆ ಕೊರಗರನ್ನು ಗುಲಾಮರಾಗಿಸಿ ಬ್ರಾಹ್ಮಣರಿಗೆ ಮತ್ತು ಭೂಮಾಲೀಕರಿಗೆ ಹಂಚಿಕೊಡಲಾಯಿತು. ಕೆಲವರನ್ನು ಜಿಂಕೆಗಳನ್ನು ಮತ್ತು ದನಗಳನ್ನು ರಕ್ಷಿಸಲು, ಕೆಲವರನ್ನು ಕೃಷಿ ಮಾಡಲು, ಉಳಿದವರನ್ನು ಅತ್ಯಂತ ಕೀಳು ಕೆಲಸಗಳಿಗೆ ಬಳಸಲಾಯಿತು ಆದಿವಾಸಿಗಳು, ಊರ ಹೊರಗಿದ್ದ ಅಂತ್ಯಜರ ಕುರಿತು ಅಂಬೇಡ್ಕರ್ ಬರೆಯುತ್ತ ವಾಲೆಹೌಸ್ ಹೇಳಿರುವ ವಿಚಾರವನ್ನೇ ಅನುಮೋದಿಸುವಂತೆ

ಕಾಣುವುದು. ಛಿದ್ರಗೊಂಡ ಗುಂಪುಗಳ ನೆರಳು ಮತ್ತು ತಕ್ಷಣ ಸಮಸ್ಯೆಯಾದಾಗ, ನೆಲೆಗೊಂಡವರ ಮತ್ತು ಅಲೆಮಾರಿಗಳ ನಡುವೆ ಒಪ್ಪಂದವಾಗಿ ನೆಲೆಗೊಂಡ ಜನರ ಆಸ್ತಿಪಾಸ್ತಿಗಳನ್ನು ಕಾಯುವ ಕೆಲಸವನ್ನು ಅಲೆಮಾರಿಗಳು ಒಪ್ಪಿಕೊಂಡರು. ಅಲೆಮಾರಿ ಜನರು ಪರಕೀಯರಾಗಿದ್ದರಿಂದಲೇ ಊರ ಹೊರಗೆ ವಾಸಿಸಬೇಕೆಂದು ಬಂತು. ಇವರೇ ಕಾಲಾಂತರದಲ್ಲಿ ಅಸ್ಪೃಶ್ಯರೆಂದು ಪರಿಗಣಿಸಲ್ಪಟ್ಟರು ಎಂದು ಅಂಬೇಡ್ಕರ್ ಅಭಿಪ್ರಾಯಪಡುವರು.

ಈ ವಿಚಾರಗಳ ಹಿನ್ನೆಲೆಯಲ್ಲಿ ನಾವು ಕೊರಗ ಜನಾಂಗವನ್ನು ಗಮನಿಸಿದಾಗ ಆಸ್ತಿಪಾಸ್ತಿಗಳಿಲ್ಲದೆಯೇ ಕಾಡುಮೇಡುಗಳನ್ನಲೆಯುವುದು. ವಾಸವಾಗಿರುವ ಸ್ಥಳ ಊರಿನಿಂದ ಹೊರಗಿರುವುದು. ಆಸ್ತಿಯ ಮಾಲೀಕರು ಹೊಡೆದೋಡಿಸಿದಾಗ ಅಲ್ಲಿಂದ ಓಡಿ ಹೋಗುವುದು ಅಧಿಕೃತ ಜನಸಂಪರ್ಕ ಕಡಿದುಕೊಂಡು ಕಾಡುಮೇಡುಗಳಲ್ಲಿ ವಾಸಿಸುವುದರಿಂದ ಕೊರಗರು ಸೃಷ್ಟಿಯಾರಾಧಕರೂ ಆಗಿದ್ದಾರೆ. ಅವರು ತಮ್ಮ ವೈಭವದ ಸಂಸ್ಕೃತಿಯ ಸಂಬಂಧವನ್ನು ಕಳೆದು ಕೊಂಡರು. ಸಂಸ್ಕೃತಿಯ ಮೂಲದ ಸಂಬಂಧಗಳನ್ನು ಪೂರ್ತಿ ಕಳಚಿಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲವೆನ್ನುವುದು ಅವರ ಆಚಾರ ವಿಚಾರಗಳು ನಂಬಿಕೆ ಸಂಪ್ರದಾಯಗಳು ವಿಧಿ ನಿಷೇಧಗಳು, ಕಥೆ ಪಾಡ್ದನಗಳು ಪಳಿಯುಳಿಕೆಗಳಾಗಿ ನಿಂತುಕೊಳ್ಳುತ್ತವೆ.

ಚಾರಿತ್ರಿಕ ಹಿನ್ನೆಲೆಯಲ್ಲಿ ನಾವು ಗಮನಿಸಿದಾಗ ಹಬಾಶಿಕನ ಆಳ್ವಿಕೆಯ ಪ್ರದೇಶ ಮತ್ತು ಇಂದಿನವರೆಗೂ ಕೊರಗರು ವಾಸಿಸುತ್ತಾ ಬಂದಿರುವ ಸ್ಥಳಗಳನ್ನುಗಮನಿಸಿದರೆ ಅಲ್ಲಿರುವ ಸಾಮ್ಯತೆ ಒಡೆದು ಕಾಣುತ್ತದೆ. ಈಗ ಕೊರಗರು ಉಡುಪಿಯ ಪುತ್ತೂರು, ಕಾಡುಬೆಟ್ಟು ಬನ್ನಂಜೆ, ಇಂದ್ರಾಳಿ, ಚಿಟ್ಪಾಡಿ. ಮಣಿಪಾಲ, ಮೂಬುಕಳ ಮುಂತಾದವು; ಕುಂದಾಪುರ ತಾಲೂಕಿನ ಆನೆಗುಡ್ಡೆ, ವಡೆಯರ ಹೋಬಳಿ, ಬೈಂದೂರು, ಕೊಲ್ಲೂರು ಮುಂತಾದವು: ಮಂಗಳೂರು ತಾಲೂಕಿನ ಕೋಡಿಕಲ್ಲು, ಕಂಕನಾಡಿ, ಕುದ್ರೋಳಿ, ಮೂಡುಶೆಡ್ಡೆ. ಮುಂತಾದವು; ಕಾಸರಗೋಡಿನ ಮಂಜೇಶ್ವರ, ಕುಂಬಳೆ, ಬೇಳ, ಬದಿಯಡ್ಕ. ಪೆರ್ಲ, ಮಲ್ಲ, ಮಧೂರು. ಪಂಜಿಕಲ್ಲು, ಆಡೂರು ಮುಂತಾದವು: ಮೂಡುಬಿದರೆ ಮೂಸ್ತಿಕಟ್ಟೆ ಕಾಟಿಪಳ್ಳ ಬೆಳಗಲಗುಡ್ಡೆ, ಮಿಜಾರು ಮುಂತಾದ ಸ್ಥಳಗಳಲ್ಲಿ ವಾಸವಾಗಿರುವುದು ಕಂಡು ಬರುತ್ತದೆ. ಇಲ್ಲಿ ವಾಸವಾಗಿರುವ ಕೊರಗ

ಜನಾಂಗದಲ್ಲಿ ಏಕ ಸೂತ್ರತೆಯಿದ್ದು ಕೆಲವು ಭಿನ್ನ ಅಂಶಗಳೂ ಸೇರಿಕೊಂಡಿವೆ. ಅಂಥವುಗಳನ್ನು ಮುಂದಿನ ಅಧ್ಯಯನದಲ್ಲಿ ಗಮನಿಸಬಹುದಾಗಿದೆ.

ಇನ್ನೊಂದು ಮಹತ್ವದ ವಿಷಯವೆಂದರೆ ಕೊರಗರು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗುವಾಗ ಕೈಯಲ್ಲಿ 'ದಂಡ' ಇರಲೇ ಬೇಕು ಎಂಬ ನಿಯಮವಿದೆ. ದಂಡ ಎನ್ನುವುದು ಅಧಿಕಾರದ ಸಂಕೇತವಾಗಿ ಬರುತ್ತದೆ. ಇದು ಈ ಹಿಂದೆ ಇದ್ದ ಅಧಿಕಾರದ ಪಳೆಯುಳಿಕೆಯನ್ನು ಸೂಚಿಸುತ್ತದೆ ಎನ್ನಬಹುದು. ಕೊರಗ ತನಿಯನ ಕೈಯಲ್ಲಿಯೂ ಈ ದಂಡ ಇರುವುದು ಹೆಚ್ಚಿನ ಪುರಾವೆಯನ್ನು ಕೊಡುತ್ತದೆ. ಇದೇ ದಂಡದ ಹಿಂದೆ ಇನ್ನೊಂದು ಪದ್ಧತಿಯೂ ಇದೆ. ಊರಲ್ಲಿ ಪ್ರವೇಶಿಸುವಾಗ ದಂಡದಿಂದ ನೆಲವನ್ನು ಕುಟ್ಟಿ ಸದ್ದು ಮಾಡುತ್ತಾ ಬರಬೇಕೆನ್ನುವುದು. ಇದು ಕೊರಗರ ಅಪಶಕುನದ ಹಿನ್ನಲೆಯಲ್ಲಿ ಈ ಪದ್ಧತಿಯನ್ನು ಅರ್ಥೈಸುವುದಿದೆ. ಈ ಅರ್ಥೈಸುವಿಕೆಯನ್ನು ಅಲ್ಲಗಳೆಯಲಾಗದಿದ್ದರೂ ಕಾಲಾಂತರದಲ್ಲಿ ನಿರಾಶ್ರಿತತೆ ಮತ್ತು ದೌರ್ಬಲ್ಯಗಳು, ಅಸ್ಪೃಶ್ಯತಾ ಸೋಂಕು–ಇವೆಲ್ಲವುಗಳ ಹಿನ್ನಲೆಯಲ್ಲಿ ಅದು ಅಪಶಕುನದ ಅರ್ಥ ಪಡೆದುಕೊಂಡಿರಬಹುದಾದ ಸಾಧ್ಯತೆಗಳೇ ಹೆಚ್ಚಾಗಿವೆ ಎನಿಸುತ್ತದೆ. ಅವಿಭಕ್ತ ಕುಟುಂಬ, ಸಂಘ ಜೀವನ, ನಾಯಕತ್ವದ ವಿಚಾರ–ಈ ಎಲ್ಲವುಗಳ ಹಿನ್ನಲೆಯಲ್ಲಿ ಗಮನಿಸಿದರೆ, ಈಗಾಗಲೇ ಪ್ರಸ್ತಾಪಿಸಿದ ವಿಚಾರಗಳಿಗೆ ಸಾಕಷ್ಟು ಪೋಷಣೆ ಸಿಗುವುದು.

2. ಕೊರಗರ ಸಾಂಸ್ಕೃತಿಕ ವಿಶ್ಲೇಷಣಾತ್ಮಕ ಅಧ್ಯಯನ

2.1 — ದೈಹಿಕ ಲಕ್ಷಣ ಮತ್ತು ವೇಷಭೂಷಣ.

2.2 — ಒಳಪಂಗಡಗಳು ಮತ್ತು ಬಳಿ ಪದ್ದತಿ.

2.3 — ಜನನ-ಮರಣದ ಸಂಸ್ಕಾರಗಳು.

2.4 — ಆಹಾರ್ ಪದ್ಧತಿ.

2.5 — ಹಬ್ಬ ಹರಿದಿನಗಳು ಮತ್ತು ಆರಾಧನೆ.

2.6 — ನಂಬಿಕೆ ಮತ್ತು ಸಂಪ್ರದಾಯುಗಳು.

2.7 — ವಿವಾಹ ಪದ್ಧತಿ.

2.8 — ನ್ಯಾಯ ಪದ್ಧತಿ.

2.9 — ಸಂಗೀತ ಮತ್ತು ಮನರಂಜನೆ.

2.10 — ಕೊರಗರ ಭಾಷೆ.

2.1. ಕೊರಗರ ದೈಹಿಕ ಲಕ್ಷಣ ಮತ್ತು ವೇಷಭೂಷಣ:

ಕೊರಗರ ದೈಹಿಕ ಚರ್ಯೆ ಮತ್ತು ಲಕ್ಷಣಗಳು ಬಹುಮಟ್ಟಿಗೆ ದ್ರಾವಿಡ ಜನಾಂಗಕ್ಕೆ ಹತ್ತಿರದವಾಗಿವೆ. ಕೊರಗರು ಕಪ್ಪು ಮೈ ಬಣ್ಣದವರು; ಅಗಲವೂ ಚಪ್ಪಟೆ ಮೂಗು, ಪುಟ್ಟ ಪುಟ್ಟ ಕಂಗಳು, ಅಗಲವಾದ ಹಣೆ, ಕಪ್ಪು ಕಪ್ಪಾದ ದಟ್ಟವಾದ ಗುಂಗುರು ಕೂದಲು ಉಳ್ಳವರು. ಸುಮಾರು ಐದು ಅಡಿ ನಾಲ್ಕು-ಆರು ಇಂಚು ಎತ್ತರದ ಕೊರಗರು ದೈಹಿಕ ರಚನೆ ಲಕ್ಷಣಗಳಲ್ಲಿ ಕೆಲವು ಮಟ್ಟಿಗೆ ದಕ್ಷಿಣ ಭಾರತದ ಇತರೇ ಗುಡ್ಡಗಾಡು ಜನರನ್ನೂ ಹೋಲುವರು. ದಪ್ಪವಾದ ತೊಂಡೆ ಹಣ್ಣಿನಂಥ ತುಟಿಗಳುಳ್ಳವರು.

ಕೊರಗ ಗಂಡಸರು ಹೆಂಗಸರು ನಿಸರ್ಗದ ಮಡಿಲಲ್ಲೇ ಬೆಳೆದವರಾದ್ದರಿಂದ ಪ್ರಕೃತಿ ಪ್ರಿಯರು. ಕಾಡುಮೇಡುಗಳನ್ನು ಬೆಟ್ಟಗುಡ್ಡಗಳನ್ನು ಲೀಲಾಜಾಲವಾಗಿ ಅಲೆಯುತ್ತ ಹತ್ತಿಳಿಯುತ್ತ ಕೆಲವೊಮ್ಮೆ ದಟ್ಟವಾದ ಕಾಡುಗಳಲ್ಲಿ ಚಿಗರೆಯಂತೆ ಚುರುಕಾಗಿ ಸಾಗುವರು. ಮೊಣಕಾಲಿನವರೆಗೆ ಕೊರಗರು ತೊಡುವ ಮುಂಡು ಅವರಿಗೆ ರಭಸದಿಂದ ನಡೆಯಲು ನೆರವಾಗುವುದು. ಕಾಡು ಉತ್ಪತ್ತಿಗಳನ್ನು-ಹಣ್ಣು ಹಂಪಲುಗಳು, ಕಾಡುಕೋಳಿ, ಕಾಡು ಹಂದಿ, ಚಿಗರೆ, ಕವಡೆ ಗಳನ್ನು ಹೊಡೆದು ಆಹಾರವಾಗಿ ಬಳಸುವರು, ತೀರಾ ಇತ್ತೀಚಿನವರೆಗೂ ಕೊರಗರು ಇತರೇ ಗುಡ್ಡಗಾಡು ಜನಾಂಗಗಳಲ್ಲಿರುವಂತೆ ಆಹಾರವನ್ನು ಸಂಗ್ರಹಿಸಿಡುತ್ತಿರಲಿಲ್ಲ. ಹೀಗೆ ಕೊರಗರು ಉತ್ತಮ ದೇಹದಾರ್ಢ್ಯತೆ ಆರೋಗ್ಯ ಪಡೆದವರು.

ಕೊರಗರ ವೇಷಭೂಷಣ ಬಹಳ ಸರಳವಾಗಿದೆ. ಏಕೆಂದರೆ ಅವರಿಗೆ ವಸ್ತ್ರ ತೊಡಬಾರದೆಂಬ ನಿಷೇಧವಿರುವುದರಿಂದ ಅವರು ಕೇವಲ ಮುಂಡು ಧರಿಸುವುದು, ಅಥವಾ ಸೊಪ್ಪುಸೆದೆ ಕಟ್ಟಿಕೊಳ್ಳುವುದು ಇದುವರೆಗೆ ನಡೆದು ಬಂದ ಪದ್ಧತಿ. ಗಂಡಸರು ಹೆಂಗಸರಂತೆ ಉದ್ದ ಕೂದಲು ಬಿಡುವರು, ಗಡ್ಡ ಮೀಸೆಗಳನ್ನು ಉದ್ದವಾಗಿ ಬೆಳೆಸುವ ಕ್ರಮವಿತ್ತು: ಇತ್ತಿಚಿಗೆ ಕೊರಗರ ಗಂಡಸರು ಇತರರಂತೆ ಲುಂಗಿ ಪಂಚೆಯನ್ನೂ ಬಣ್ಣಬಣ್ಣದ ಹತ್ತಿ ಬಟ್ಟೆಗಳನ್ನೂ ಟೆರಿಕಾಟ್ ಅಂಗಿಗಳನ್ನೂ ಬಳಸುವರು. ಹಿಂದೆ ಕೊರಗರ ಹೆಂಗಸರು ಮುಂಡನ್ನು ಸೊಂಟಕ್ಕೆ ಕಟ್ಟಿ ರವಿಕೆಯನ್ನು ತೊಡುತ್ತಿದ್ದರು ಸೆರಗು ಹಾಕುತ್ತಿ

ರಲಿಲ್ಲ. ಇಂದಿಗೂ ಹಳ್ಳಿಗಾಡುಗಳಲ್ಲಿರುವ ಕೊರಗ ಹೆಂಗಸರು ಅದೇ ಹಳೆಯ ಪದ್ಧತಿ ಅನುಸರಿಸುತ್ತಿದ್ದಾರೆ. ಆದರೆ ಮಂಗಳೂರು, ಕಾರ್ಕಳ, ಮೂಡುಬಿದಿರೆ. ಸುರತ್ಕಲ್ ಮುಂತಾದ ಪೇಟೆ ಪಟ್ಟಣಗಳ ಸಂಪರ್ಕಕ್ಕೆ ಬಂದ ಕೊರಗ ಹೆಂಗಸರು ಇತರೇ ಹಿಂದೂ ಮಹಿಳೆಯರಂತೆ ಸೆರಗು ಹೊದೆಯುವಂತೆ ಸೀರೆ ತೊಡುವುದನ್ನು ಕಲಿತ್ತಿದ್ದಾರೆ.

ನಿರಾಭರಣ ಸುಂದರರಾದ ಕೊರಗರು ವಿವಿದ ಬಣ್ಣಬಣ್ಣಗಳ ಮಣಿಸರಗಳ ಪ್ರಿಯರು, ಕೈಗೆ ಹಿತ್ತಾಳೆ ಕಬ್ಬಿಣ ತಾಮ್ರದಿಂದ ಮಾಡಿದ ಬಳೆಗಳನ್ನು ಗಂಡಸರು ಹೆಂಗಸರು ಇಬ್ಬರೂ ಧರಿಸುವರು. ಇಂದಿನ ಕೊರಗ ಮಹಿಳೆಯರು ಎಲ್ಲರಂತೆ ಗಾಜಿನ ಬಳೆ, ಕರಿಮಣಿ ಸರ ಧರಿಸುವರು. ನೈಟಿ, ಸ್ಕರ್ಟ್ ಧರಿಸಿದ ಕೆಲವು ಕೊರಗ ಹದಿಹರೆಯದ ಯುವತಿಯರನ್ನೂ ನಾವು ಕಂಡೆವು. ಹೀಗೆ ಕೊರಗರ ವೇಷಭೂಷಣಗಳಿಗೆ ನಾಗರಿಕತೆಯು ನೇರವಾಗಿ ಪ್ರವೇಶಿಸುತ್ತಿದೆ.

ಕೊರಗ ಗಂಡಸರು ಮತ್ತು ಹೆಂಗಸರು ಸೊಂಟದಿಂದ ಕೆಳಕ್ಕೆ ಕೇವಲ ಸೊಪ್ಪು ಕಟ್ಟಿಕೊಂಡು ಜೀವಿಸಬೇಕೆಂಬ ನಿರ್ಬಂಧವನ್ನು ಮೇಲ್ಜಾತಿಯವರು ಹೇರಿದರು ಎನ್ನುವ ಕಥೆಯೊಂದನ್ನು ಉಳ್ಳಾಲ ರಾಘವೇಂದ್ರರಾವ್ ದಾಖಲಿಸಿದ್ದಾರೆ. ಆ ಪ್ರಕಾರ ಕೊರಗರು ಆಳುವ ವರ್ಗವಾಗಿ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಕೊರಗನೊಬ್ಬನು ಮೇಲು ವರ್ಗದ ಹೆಣ್ಣೊಬ್ಬಳನ್ನು ಬಯಸಿದನು. ಆಗ ಕೊರಗನ ಬೇಡಿಕೆಯಿಂದ ಕುಪಿತರಾದ ಮೇಲ್ವರ್ಗದವರು ಕೊರಗರ ರಾಜಕೀಯ ಪ್ರಾಬಲ್ಯ ಅಳಿಯುವವರೆಗೂ ತೆಪ್ಪಗಿದ್ದು ನಂತರ ಕೊರಗ ಹೆಂಗಸರು ಯಾವ ಬಗೆಯ ವಸ್ತ್ರವನ್ನೂ ತೊಡದಿರುವಂತೆ ನಿಷೇಧ ವಿಧಿಸಿದರು. ಆಗ ಆ ನತದೃಷ್ಟ ಕೊರಗ ಮಹಿಳೆಯರು ಮಾನ ಸಂರಕ್ಷಣೆಗಾಗಿ ಸೊಪ್ಪು ಕಟ್ಟಿಕೊಳ್ಳುವುದಕ್ಕೆ ತೊಡಗಿದರು. ಕೊರಗರನ್ನು ರಾಜಕೀಯ ಮತ್ತು ಸಾಂಸ್ಕೃತಿಕ ಸೇಡಿನಿಂದಾಗಿ ವಿವಸ್ತ್ರಗೊಳಿಸಲಾಯಿತು ಎನ್ನುವುದಕ್ಕೆ ಇದು ಒಂದು ಪ್ರಮುಖ ಆಧಾರವಾಗುತ್ತದೆ. ಕಾಲಾನುಕ್ರಮದಲ್ಲಿ ಸೊಪ್ಪಿನಿಂದ ದೇಹ ಮುಚ್ಚಿಕೊಳ್ಳುವುದೇ ದೇವರು ನಮಗೆ ದಯಪಾಲಿಸಿದ ವರ ಎಂದು ಕೊರಗರು ನಂಬುವಂತಾಯಿತು ಎನ್ನುವುದನ್ನೂ ಉಳ್ಳಾಲ ರಾಘವೇಂದ್ರರಾವ್ ಹೇಳಿದ್ದಾರೆ.

ಕೊರಗರು ಕೇವಲ ಸೊಪ್ಪಿನ ವಸ್ತ್ರವನ್ನು ಸೊಂಟದಿಂದ ಕೆಳಕ್ಕೆ ತೊಡುವುದನ್ನು ಅವರನ್ನು ಅತ್ಯಂತ ಹೀನಾಯ ಸ್ಥಿತಿಗಿಳಿಸಿದುದರ ದ್ಯೋತಕವೆಂದೇ ವಾಲೆಹೌಸ್ ಪರಿಗಣಿಸಿದ್ದಾನೆ. ಹಿಂದೆ ಕೊರಗ ಮಹಿಳೆಯರು ಇತರರಂತೆ ವಸ್ತ್ರ ತೊಡುವುದೂ ಮತ್ತು ಸೆರಗು ಹೊದೆಯುವುದೂ ಅಪಶಕುನದ್ದು, ಅಮಂಗಳಕರವಾದುದೆಂದು ನಂಬಿದ್ದರು.

ಕೊರಗರ ವೇಷಭೂಷಣಗಳ ಬಗೆಗೆ ಹೆಚ್.ವಿ. ಸ್ಟೂವರ್ಟ್ **Manual of theSouth Kanara District** ನಲ್ಲಿ ಹೀಗೆ ಬರೆದಿದ್ದಾರೆ:

ಕೊರಗರು ಸೊಂಟದಿಂದ ಕೆಳಕ್ಕೆ ಕಪ್ಪುವಸ್ತ್ರವೊಂದನ್ನೂ ಸೊಂಟದಿಂದ ಮೇಲಕ್ಕೆ ಬಿಳಿ ವಸ್ತ್ರವೊಂದನ್ನು ಕಟ್ಟಿಕೊಳ್ಳುತ್ತಿದ್ದರು. ಅವರು ತಲೆಗೆ ಅಡಿಕೆ ಹಾಳೆಯಿಂದ ಮಾಡಿದ ಟೊಪ್ಪಿಗೆ ಧರಿಸುವರು. ಈ ಟೊಪ್ಪಿಗೆ ಹೊಲೆಯರು ಧರಿಸುವ ಟೊಪ್ಪಿಗೆಯನ್ನೇ ಹೋಲುವುದು. ಕಿವಿಗೆ ಹಿತ್ತಾಳೆಯ ಬೆಂಡೋಲೆಗಳನ್ನು, ಕೈಗಳಿಗೆ ಕಬ್ಬಿಣದ ಬಳೆಯನ್ನೂ, ಸೊಂಟಕ್ಕೆ ಉಡಿದಾರವನ್ನೂ ಅವರು ಧರಿಸುವರು. ಉಡುಪಿಯಲ್ಲಿ ಕೊರಗನೊಬ್ಬನು ಧರಿಸಿದ್ದ ಉಡಿದಾರವನ್ನು ಗೂಬೆಗಳ ಮೂಳೆಗಳಿಂದ ತಯಾರಿಸಲಾಗಿದ್ದುದನ್ನು ನಾನು ಕಂಡೆ. ಇಂಥ ದೀನ ಹೀನ ಸ್ಥಿತಿಯಲ್ಲಿ ಇಂದು ಕೊರಗರಿಲ್ಲ.

2-2- ಕೊರಗರ ಒಳಪಂಗಡಗಳು ಮತ್ತು ಬಳಿ ಪದ್ಧತಿ:

'ಕೊರಗ' ಎನ್ನುವ ಒಂದು ಜನಾಂಗದಲ್ಲಿಯೇ ಒಳ ಪಂಗಡಗಳಿವೆ. ಈ ಒಳ ಪಂಗಡಗಳನ್ನು-

ಸೊಪ್ಪು ಕೊರಗರು.
ಚಿಪ್ಪೆ ಕೊರಗರು.
ಅಂಡೆ ಕೊರಗರು.
ಮುಂಡು ಕೊರಗರು.
ಬಾಕುಡೆ ಕೊರಗರು.

ಎಂದು ಗುರುತಿಸಲಾಗುತ್ತದೆ. ಈ ಹೆಸರುಗಳೆಲ್ಲ ಅಂಕಿತನಾಮಗಳು ಎನ್ನುವದು

ಸ್ಪಷ್ಟ. ಈ ಹೆಸರುಗಳು ಅವರ ಒಂದೊಂದು ವಿಶೇಷ ಲಕ್ಷಣಗಳನ್ನು ಗುರುತಿಸಿ ಕರೆದಿದ್ದಾರೆ.

ಸೊಪ್ಪು ಕೊರಗರು ಎಂದರೆ: ಇವರು ಮೈಗೆ ಬಟ್ಟೆಯನ್ನು ತೊಡದೆ, ಗಿಡ ಮರಗಳ ಎಲೆಯನ್ನೇ ಬಳಸಿ, ದೇಹವನ್ನು ಮುಚ್ಚಿಕೊಂಡು ಬದುಕುವವರು. ಇವರಿಗೆ ತಪ್ಪು ಕೂರಗರು, ತಪ್ಪಲು ಕೊರಗರು ಎಂಬ ಪರ್ಯಾಯ ನಾಮ ಗಳಿಂದಲೂ ಗುರುತಿಸುತ್ತಾರೆ. ಈ ಸೊಪ್ಪು ಕೊರಗರು 1940ರಿಂದ ಬಟ್ಟೆಯನ್ನು ತೊಡಲು ಪ್ರಾರಂಭಿಸಿದರು ಎನ್ನುವ ಹೇಳಿಕೆಗಳು ಇವೆ.

ಮುಂಡು ಕೊರಗರು ಎಂದರೆ; ಇವರು ಮೊಣಕಾಲಿನವರೆಗೆ ಮುಂಡು (ಪಂಚೆ) ತೊಡುತ್ತಾರೆ. ಹೆಂಗಸರೂ ಕೂಡ ಸೊಂಟದಿಂದ ಮೊಣ ಕಾಲಿನವರೆಗೆ ಮಾತ್ರ ಮುಂಡು ಸುತ್ತಿಕೊಳ್ಳುತ್ತಾರೆ. ಇವರಿಗೆ ಕುಂಬು ಕೊರಗರು (ಕುಂಬು-ಬಟ್ಟೆ) ಎಂದೂ ಕರೆಯುತ್ತಾರೆ. ಸೊಪ್ಪು ಕೊರಗರು 1940ರಲ್ಲಿ ಬಟ್ಟೆ ತೊಡಲು ಪ್ರಾರಂಭಿಸಿದರು ಇವರಿಗಿಂತ ಭಿನ್ನವಾಗಿಲ್ಲ. ಆದರೆ ವರ್ಷಕ್ಕೊಂದೂ ಬಾರಿ ಸೊಪ್ಪು ಕೊರಗಲು ತಮ್ಮ ಮೂಲದ ವೇಷ ಹಾಕಿ ನವರಾತ್ರಿಯ ಹಬ್ಬದಲ್ಲಿ ಕುಣಿಯುತ್ತಾರೆ. ಬೀದಿ ಬೀದಿಗೆ ತಿರುಗುತ್ತಾರೆ.

ಅಂಡೆ ಕೊರಗರು ಎಂದರೆ: ಇವರು ಕೊರಳಿಗೆ ಅಂಡೆಯನ್ನು ಕಟ್ಟಿಕೊಂಡು ತಿರುಗುವಂಥವರು. ಅಂಡೆ ಎಂದರೆ ಬಿದಿರಿನಲ್ಲಿ ತಯಾರಿಸಿದ ಒಂದು ಕೊಳವೆ (ಕೆಕ್ಕಿಲ ಕಾಳಾಂಜಿ) ಅದಕ್ಕೆ ದಾರವನ್ನು ಕಟ್ಟಿ ಕೊರಳಿಗೆ ಹಾಕಿ ಕೊಳ್ಳು ತ್ತಾರೆ. ತಮ್ಮ ಬಾಯಿಯಲ್ಲಿ ಉಗುಳು ಬಂದಾಗ, ಅದನ್ನು ನೆಲಕ್ಕೆ ಉಗಿಯದೆ ಆ ಅಂಡೆಯಲ್ಲಿ ಉಗಿದು ಕೊಳ್ಳಬೇಕು ಇದೊಂದು ಸಾಮಾಜಿಕ ವಿಧಿ. ಅನಂತರ ಅಂಡೆಯಲ್ಲಿಯ ಉಗುಳನ್ನು ತಿಪ್ಪೆಯಲ್ಲಿ ಹೊಯ್ಯುತ್ತಿದ್ದರು. ಈ ಪದ್ಧತಿ 1950 ರ ವರೆಗೆ ವಿರಳವಾಗಿ ಬಳಕೆಯಲ್ಲಿತ್ತು. ಈಗ ಕಣ್ಮರೆಯಾಗಿ ಹೋದದ್ದು ಒಂದು ಒಳ್ಳೆಯ ಲಕ್ಷಣ, (ಈ ವಿಷಯದ ಕುರಿತು 'ಆಹಾರ ಪದ್ಧತಿ' ಎಂಬ ಭಾಗದಲ್ಲಿ ವಿಶೇಷವಾಗಿ ಚರ್ಚಿಸಲಾಗಿದೆ ಗಮನಿಸಿ)

ಚಿಪ್ಪೆ ಕೊರಗರು ಎಂದರೆ: ತೆಂಗಿನ ಚಿಪ್ಪೆಗೆ ದಪ್ಪನೆಯ ದಾರದಿಂದ ಕಟ್ಟಿ ಬಗಲಿಗೆ ಅಥವಾ ಕುತ್ತಿಗೆಗೆ ಹಾಕಿಕೊಂಡಿರುತ್ತಿದ್ದರು. ಆಗ ಈ ಚಿಪ್ಪೆ ಬೆನ್ನಿನ

ಹಿಂದೆ ಜೋತಾಡುತ್ತಿರುತ್ತದೆ. ಈ ಚಿಪ್ಪೆಯನ್ನು ಇವರು ನೀರು ಕುಡಿಯುವ ಪಕ್ಕಾಗಿ ಬಳಸುತ್ತಿದ್ದರು. ಇವರು ಬೊಗಸೆಯಿಂದ ನೀರು ಕುಡಿಯುತ್ತಿರಲಿಲ್ಲವೆ? ಎಂದು ಪ್ರಶ್ನಿಸಿದರೆ ನಮಗೆ ತಕ್ಷಣ ದೊರೆಯುವ ಉತ್ತರ ಮತ್ತೆ ಎಂಜಲಿನ ವಿಚಾರ. ಹಾಗೂ ಉಗುಳಿನ ವಿಚಾರ. ಅವರು ನೀರು ಕುಡಿಯುವಾಗ ಹನಿಗಳು ನೆಲಕ್ಕೆ ಬೀಳಬಹುದು ಎಂದು, ಅದನ್ನು ತಡೆಯುವುದಕ್ಕಾಗಿ ಈ ತೆಂಗಿನ ಚಿಪ್ಪೆಯನ್ನು ಬಳಸುತ್ತಿದ್ದರು. (ಚಿಪ್ಪೆಯನ್ನು ಪಾತ್ರೆಯನ್ನಾಗಿಸಿಕೊಂಡು ಊಟ ಮಾಡುವುದಕ್ಕೂ ಬಳಸುತ್ತಿರಬೇಕು 'ಏಕೆಂದರೆ ಕೊರಗ ತನಿಯನ ಪಾಡ್ದನದಲ್ಲಿ ಕೊರಗ ತನಿಯನ ಸಾಕುತಾಯಿ ಈತನಿಗೆ ಚಿಪ್ಪಿನಲ್ಲಿ ಅನ್ನ, ಕೈಯಲ್ಲಿ ತಪ್ಪು ನೀಡಿ ಸಾಕಿದಳು. ಎಂದು ಉಲ್ಲೇಖ ಬರುತ್ತದೆ. ಅದ್ದರಿಂದ ಚಿಪ್ಪೆಯನ್ನು ಇವರು ಊಟಕ್ಕೆ ಬಳಸುತ್ತಿದ್ದಾರೆಂದು ಗುರುತಿಸಬಹುದು.) ಇವರಿಗೆ ಚಿಪ್ಪಿ ಕೊರಗ ಅಥವಾ ಗೆರೆಟೆ ಕೊರಗ ಎಂದು ಕರೆಯುವ ವಾಡಿಕೆಯೂ ಇದೆ.

ಬಾಕುಡೆ ಕೊರಗರು ಎಂದರೆ: ಇವರ ಮೂಲತ: ಭಂಗಿ ವೃತ್ತಿಯನ್ನು ಮಾಡುವವರು ಎಂದು ಹೇಳಲಾಗುತ್ತದೆ. ಮೊದಲು ಕೊರಗರ್ಯಾರೂ ಭಂಗಿಯತ್ತ ವೃತ್ತಿಯನ್ನು ಮಾಡುತ್ತಿರಲಿಲ್ಲ. ನಗರಪಾಲಿಕೆಯ ವತಿಯಿಂದ ಕೊರಗರಿಗೆ ಕೆಲಸ ಸಿಕ್ಕ ನಂತರದಲ್ಲಿ ಕೊರಗರೂ ಭಂಗಿ ಕೆಲಸ ಮಾಡಬೇಕಾಗಿ ಬಂತು. ಈ ಮೊದಲು ಭಂಗಿ ಕೆಲಸವನ್ನು ಮಾಡುವ 'ಬಾಕುಡ' ಜನಾಂಗದೊಂದಿಗೆ ರಕ್ತ ಸಂಬಂಧವಾಗಲಿ, ದೈಹಿಕ ಸಂಬಂಧವಾಗಲಿ ಇರಲಿಲ್ಲ. ಆದರೆ ನಗರಪಾಲಿಕೆಯ ಕೆಲಸದಿಂದಾಗಿ ಪರಸ್ಪರ ಒಂದೇ ಉದ್ಯೋಗವಾಗಿ ಹೋಗಿದ್ದರಿಂದ ಬಾಕುಡರ ಜೊತೆಗೆ ಕೊರಗರ ರಕ್ತ ಸಂಬಂಧಗಳು ಪ್ರಾರಂಭವಾಗಿವೆ. ಆದರೆ ಎಲ್ಲ ಕೊರಗರೂ ಈ ಸಂಬಂಧವನ್ನು ಈಗಲೂ ಒಪ್ಪಿಕೊಳ್ಳುವುದಿಲ್ಲ.

ಕೊರಗರಲ್ಲಿಯೂ ಬಳಿ ಪದ್ಧತಿಯು ಬಳಕೆ ಇದೆ. ಕ್ಷೇತ್ರ ಕಾರ್ಯದಲ್ಲಿ ನಮಗೆ ಲಭ್ಯವಾದ ಬಳಿಗಳು ನಾಲ್ಕು:-

ಕುಂದನ್ನಾಯ.
ಸಾಲೆತ್ತನ್ನಾಯ.
ಮುಂಜೆತ್ತೆನ್ನಾಯ.
ಬಂಗೇರ(ಅಯಕಲೆ)

ಆದರೆ ಬೇರೆ ಕೃತಿಗಳಲ್ಲಿ ಸಿಗುವ ಕೊರಗರ ಬಳಗಗಳೆಂದರೆ-

ಮುಂಕೆಣಾಯ.
ತಿರ್ಗೆನ್ನಾಯ (ಸಿರ್ಗೆನ್ನಾಯ).
ತಡ್ಜೆನ್ನಾಯ.
ಸೋಮಣ್ಣಾಯ (ಕೊರಗ ತನಿಯ ದೈವದ ಬಳಿ)

ಇಂಥ ಬಳಿಗಳು ಕೊರಗರಲ್ಲಿ ಲಭ್ಯವಾಗುತ್ತಿದ್ದು. ಒಂದು ಬಳಿಯಿಂದ ಇನ್ನೊಂದು ಬಳಿಗೆ ಸಲಿಸಾಗಿ ಕೊಂಡು ಕೊಳ್ಳುವ ಸಂಪ್ರದಾಯಗಳು ನಡೆಯುತ್ತವೆ. ಆದರೆ ಬಂಟರಲ್ಲಿ, ಬಿಲ್ಲವರಲ್ಲಿ ಒಂದು ಬಳಿಯಿಂದ ಇನ್ನೊಂದು ಬಳಿಗೆ ಮದುವೆಯಾಗ ಬಾರದು ಎನ್ನುವ ನಿಷೇಧ ಇರುವಂತೆ ಇಲ್ಲಿ ಇಲ್ಲ. ಆದರೆ ಒಂದೇ ಬಳಿಯಲ್ಲಿ ಹೆಣ್ಣು, ಗಂಡುಗಳನ್ನೂ ಕೊಂಡು ಕೊಳ್ಳುವ ವ್ಯವಹಾರ ಇವರಲ್ಲಿಯೂ ನಡೆಯುವುದಿಲ್ಲ. ಬಳಿಗಳಲ್ಲಿಯೇ ಶ್ರೇಷ್ಠ, ಉತ್ತಮ ಎಂಬ ಹಾಯಗಾರಿಕೆ ಮೂಡಿ ನೋಡುವ ಲಕ್ಷಣಗಳು ಕಂಡು ಬರುತ್ತವೆ.

2-3. ಕೊರಗರ ಜನನ—ಮರಣ ಸಂಸ್ಕಾರಗಳು:

ಕೊರಗರು ಅನುಸರಿಸುವ ಜನನ—ಮರಣ ಸಂಸ್ಕಾರಗಳು ಇತರೇ ದಲಿತ ಮತ್ತು ಶೂದ್ರ ವರ್ಗಗಳ ಆಚರಣೆಗಳನ್ನೇ ಹೋಲುವುವು. ಕೊರಗರ ಸಂಪ್ರದಾಯಗಳು ಮತ್ತು ಆಚರಣೆಗಳು ಬಹಳ ಸರಳವಾದುವು.

ಮಗು ಜನನವಾದಾಗ ಸೋದರತ್ತೆಯು ಸೂತಕ ಕಳೆದ ನಂತರ ನಾಮ ಕರಣದ ದಿನ ಮಗುವಿನ ಹೆಸರಿಟ್ಟು ತೊಟ್ಟಿಲು ತೂಗುವಳು. ತೊಟ್ಟಿಲನ್ನು ಕಾಡು ಹೂಗಳಿಂದ ಸಿಂಗರಿಸಲಾಗುವುದು. ನೆರೆದ ಎಲ್ಲ ಸಂಬಂಧಿಗಳಿಗೂ ಹಾಗು ಗುರಿಕಾರನ ಪರಿವಾರದವರಿಗೂ ಸಂತೃಪ್ತವಾಗುವಂತೆ ಊಟ ಬಡಿಸ ಲಾಗುವುದು. ಕೆಲವೊಮ್ಮೆ ಗುರಿಕಾರನೇ ಮಗುವನ್ನು ತೊಟ್ಟಿಲಿಗೆ ಹೆಸರಿಟ್ಟು ಹಾಕುವುದುಂಟು. ಹೆರಿಗೆಯ ನಂತರದ ಸೂತಕದ 12 ದಿನಗಳಲ್ಲಿ ಬಾಣಂತಿ ಮತ್ತು ಮಗುವಿನ ಸೋದರತ್ತೆ ಹೊರತುಪಡಿಸಿ ಉಳಿದವರು ಮನೆಯಲ್ಲಿ ನಿಲ್ಲುತ್ತಿರಲಿಲ್ಲ. ಈಗ ಈ ಆಚರಣೆಯನ್ನು ಕೊರಗರು ತೊರೆದಿದ್ದಾರೆ ಸೂತಕ 12 ದಿನಗಳು. ಮಗುವಿಗೆ ಉಡಿದಾರವನ್ನು ತಾಯಿ ಕಟ್ಟುವಳು.

ಕೊರಗರು ತಮ್ಮ ತಮ್ಮ ಮಕ್ಕಳಿಗೆ ವಾರಪ್ರೊಂದರ 'ಏಳು ದಿನಗಳ ಹೆಸರುಗಳನ್ನು ಇಡುವುದು ಬಹುಮಟ್ಟಿಗೆ ಇಂದಿಗೂ ವಾಡಿಕೆಯಲ್ಲಿದೆ. ಈ ಕ್ರಮದ ವಿವರಗಳು ಹೀಗಿವೆ.

ದಿನದ ಹೆಸರುಗಳು	ಗಂಡು ಮಗು	ಹೆಣ್ಣು ಮಗು
ಆದಿತ್ಯವಾರ	ಐತ	ಐತು
ಸೋಮವಾರ	ತೋಮ	ತೋಮು
ಮಂಗಳವಾರ	ಅಂಗಾರೆ	ಅಂಗಾರು
ಬುಧವಾರ	ಬೂದ	ಬೂಬು
ಗುರುವಾರ	ಗುರುವ	ಗುರುಬಿ
ಶುಕ್ರವಾರ	ತುಕ್ರ	ತುಕ್ರಿ
ಶನಿವಾರ	ತನಿಯ	ತನ್ಯಾರು

ಈ ಬಗೆಯ ನಾಮಕರಣ ಕ್ರಮವು ಇತರೆ ದಲಿತ ಮತ್ತು ಶೂದ್ರ ವರ್ಗಗಳಲ್ಲೂ ಆಚರಣೆಯಲ್ಲಿರುವುದನ್ನು ಕಾಣಬಹುದು. ಈ ಆಧಾರದಲ್ಲಿ ಇಂಥ ಆಚರಣೆ ಹಿಂದೂಗಳು ನಂಬುವ ನವಗ್ರಹಗಳ ಪರಂಪರೆಯನ್ನೂ ಹಾಗು ದ್ರಾವಿಡ ಸಂಸ್ಕಾರವನ್ನೂ ತೋರಿಸುವುದು.

ಕೊರಗರು ವಿಚಿತ್ರವಾದ ಬೇರೆ ಬೇರೆ ಬಗೆಯ ಹೆಸರುಗಳನ್ನೂ ತಮ್ಮ ಸಂತಾನಕ್ಕೆ ಇಡುತ್ತಾರೆ. ಉದಾ: ಗಂಡು ಮಕ್ಕಳಿಗೆ ಪ್ರಾಣಿ, ನಿಸರ್ಗ ಸಂಕುಲವನ್ನು ಆಧರಿಸಿ ಹೆಸರಿಡುವ ಕ್ರಮವು ಕೊರಗರಲ್ಲಿದೆ. ಗಂಡು ಮಕ್ಕಳಿಗೆ ಅವರು ಇಡುವ ಹೆಸರುಗಳೆಂದರೆ-ನಕ್ಕುರ, (ಎರೆಹುಳ) ಬೆಜಕ್ಕುರ (ತರಗೆಲೆ) ತಬುರ (ಕೆಂಪಿರುವೆ). ಬೊಳುಂಬ (ಒಂದು ಬಗೆಯ ಮೀನು), ಮೊಣ್ಪ (ಮಿಂಚುಳ್ಳಿ), ಬೊಗ್ಗುರ (ಗಂಡುನಾಯಿ), ಪಿಜಿನ (ಇರುವೆ), ಚಲ್ಲ, ಕಟ್ಟಣ, ಕುಂಡೆ, ಚಪ್ಪರೆ, ಕರಿಯ, ಕಾಳ, ಬೊಲ್ಲು, 'ಒಡಿ, ಮಂಗು, ನಂಗು, ನಂದು

ಮಾಂಕು ಇತ್ಯಾದಿ. ಹೆಣ್ಣು ಮಕ್ಕಳಿಗೆ ನೆಚ್ಯಾರು, ಜಾಗಿ, ಅಮಾಸೆ, ತಂಡ್ರೆ, ಬಿಡಗು, ಪೀಂಜಲು ಎಂಬ ಹೆಸರುಗಳನ್ನೂ ಇಡುವರು. ಇತ್ತೀಚೆಗೆ ಪೇಟೆಪಟ್ಟಣಗಳ ಸಂಪರ್ಕಕ್ಕೆ ಬಂದಿರುವ ಕೊರಗರು ಇತರೇ ಹಿಂದೂಗಳಂತೆ ರಮೇಶ, ಸುರೇಶ, ಬಾಬು, ಸುಂದರ, ರಾಮು, ಕೃಷ್ಣ, ಪಾರ್ವತಿ, ಸುಂದರಿ ಮುಂತಾದ ಹೆಸರುಗಳನ್ನಿಡುವುದೂ ಬಳಕೆಗೆ ಬರುತ್ತಿದೆ.

ಕೊರಗರು ಸತ್ತವರನ್ನು ಹೂಳುತ್ತಾರೆ. ಸಾವಿನ ಸೂತಕ 13 ದಿನಗಳವರೆಗೆ ಇರುವುದು. ಚಿಕ್ಕ ಮಕ್ಕಳಿಗೆ ಮೂರು ದಿನಗಳ ಸೂತಕ, ಸತ್ತವರಿಗೆ ಸಂಸ್ಕಾರ ಪ್ರಾರಂಭಿಸುವುದಕ್ಕೆ ಮುಂಚೆ ಸಾಮಾನ್ಯವಾಗಿ ಗುರಿಕಾರನನ್ನು ಕರೆತಂದು ಆವನ ನೇತೃತ್ವದಲ್ಲಿ ಎಲ್ಲಾ ಆಚರಣೆಗಳು ನಡೆಯುವುವು. ಒಂದು ವೇಳೆ ಗುರಿಕಾರ ಸಿಗದಿದ್ದರೆ ಅವನು ಬರುವವರೆಗೆ ಕಾಯಬೇಕೆಂಬ ಕ್ರಮವೇನೂ ಕೊರಗರಲ್ಲಿಲ್ಲ. ಸೂತಕ ಕಳೆಯುವುದಕ್ಕಾಗಿ 13ನೆಯ ದಿನ ತಿಥಿ ಮಾಡಲಾಗುವುದು. ತಂದೆಗೆ ಜ್ಯೇಷ್ಠ ಪುತ್ರನೂ, ತಾಯಿಗೆ ಕಿರಿಯ ಮಗನೂ ತಲೆ ಬೋಳಿಸಿಕೊಳ್ಳುವ ಕ್ರಮವಿದೆ. ಸಮಾಧಿಯ ಬಳಿ ಅಂದಿನ ಅಡಿಗೆಯ ಪದಾರ್ಥಗಳನ್ನು ಎಡೆ ಇಕ್ಕುತ್ತಾರೆ. ಮಡಿಕೆಗೆ ವಿಭೂತಿ ಕುಂಕುಮವಿರಿಸಿ ತೆಂಗಿನ ಹೂ ಇರಿಸಿ ನೀರು ತುಂಬಿ ಮಗನ ತಲೆ ಮೇಲೆ ಹೊರಿಸಿ ಸಮಾಧಿಗೆ ಮೂರು ಸುತ್ತು ಪ್ರದಕ್ಷಿಣೆ ಬರಲಾಗುವುದು. ಈ ಎಲ್ಲಾ ಆಚರಣೆಗಳು ಬಹುಮಟ್ಟಿಗೆ ಇತರೇ ಹಿಂದೂಗಳಲ್ಲೂ ಇವೆ.

ಶತಶತಮಾನಗಳ ಹಿಂದೆ ಕೊರಗರು ಮತ್ತು ಇತರೇ ಗುಲಾಮ ಜಾತಿಗಳಲ್ಲಿ ಶವಗಳನ್ನು ಸುಡುವ ಪದ್ಧತಿ ಇತ್ತು. ಸಿಡುಬು ರೋಗಕ್ಕೆ ಬಲಿಯಾಗಿ ಸತ್ತವರನ್ನು ಮಾತ್ರವೇ ಹೂಳಲಾಗುತ್ತಿತ್ತು ಎಂದೂ ವಾಲ್‌ಹೌಸೆ ಅಭಿಪ್ರಾಯ ಪಡುವರು. ಹಿಂದೆ ಕೊರಗರು ಜನನ ಮರಣಗಳ ಸಂದರ್ಭದಲ್ಲಿ ಸಮಾರಂಭಗಳನ್ನು ನಡೆಸಲು ತಮ್ಮ ಧಣಿಗಳ ಒಪ್ಪಿಗೆ ಪಡೆಯ ಬೇಕಾಗಿತ್ತು. ಸತ್ತವನ ಸಮಾಧಿಯ ಬಳಿ ನಾಲ್ಕು ಅನ್ನದ ಉಂಡೆಗಳನ್ನು ಪ್ರೇತದ ತೃಪ್ತಿಗಾಗಿ ಇಡಲಾಗುತ್ತಿತ್ತು. ಶವವನ್ನು ಹೂಳಿದ 16ನೆಯ ದಿನ ಒಂದು ಹಿಡಿ ಮಣ್ಣನ್ನು ತೆಗೆಯಲಾಗುವುದು. ಸಮಾಧಿಯ ಬಳಿ ಸತ್ತವನ ನೆನಪಿಗೆಂದು ಕಲ್ಲೊಂದನ್ನು ನೆಡಲಾಗುವುದಲ್ಲದೆ ಅದರ ಮೇಲೆ ಸ್ವಲ್ಪ ಅನ್ನ ಮತ್ತು ಹೆಂಡವನ್ನು ಸುರಿಯು

ಲಾಗುವುದು. ಅದನ್ನುಂಡು ಸತ್ತವರ ಆತ್ಮವು ಅಂದಿನಿಂದ ತಮ್ಮ ಪೂರ್ವ ಜನರನ್ನು ಸೇರುವುದೆಂಬುದು ಕೊರಗರ ನಂಬಿಕೆ.

ಅಂದರೆ ಎಲ್ಲಾ ಹಿಂದೂಗಳಂತೆ ಕೊರಗರು ಆತ್ಮ, ಪ್ರೇತ ಮತ್ತು ಭೂತ ಗಳನ್ನು ನಂಬುತ್ತಾರೆ. ಹಾಗೂ ಸತ್ತ ಪೂರ್ವಜರನ್ನು ಎಲ್ಲಾ ಜನಾಂಗಗಳಂತೆ ಸದ್ಗತಿ ಕಾಣಿಸಲು ಮುಂದಾಗುತ್ತಾರೆ.

2.4—ಕೊರಗರ ಆಹಾರದ ವಿಧಿ-ನಿಷೇದಗಳು:

ಕೊರಗರು ಅರೆ ಅಲೆಮಾರಿ ಜನಾಂಗದ ಸಾಲಿನಲ್ಲಿ ಸೇರುತ್ತಾರೆ. ಮೂಲದಲ್ಲಿ ಆಹಾರ ಸಂಗ್ರಹಿಸಿಡುವುದು ಇವರಲ್ಲಿ ನಿಷೇಧವಿತ್ತು ಎನ್ನುವ ವಿಚಾರ ತಿಳಿದು ಬರುತ್ತದೆ. ಅರೆ ಅಲೆಮಾರಿಗಳಾದ ಇವರು ಒಂದೆಡೆ ನೆಲೆ ನಿಂತಾಗ ಮೂಲದ ಈ ನಿಯಮ ಕಾಲಾಂತರದಲ್ಲಿ ಮೂಲೆಗುಂಪಾಗಿದೆ.

ಕೊರಗರು 'ಎಂಜಲು ಅನ್ನವನ್ನು ತಿನ್ನುವರು' ಎನ್ನುವ ಕಾರಣದಿಂದ, ಇತ್ತೀಚಿನ ದಿನಗಳಲ್ಲಿ ಸಮಾಜ ಸುಧಾರಕರ, ಚಿಂತಕರ ಗಮನವನ್ನು ಸೆಳೆದಿದ್ದಾರೆ. ನೀವು ಎಂಜಲು ಅನ್ನವನ್ನು ಏಕೆ ತಿನ್ನುತ್ತೀರಿ? ಎಂದು ಪ್ರಶ್ನಿಸಿದರೆ ಅದಕ್ಕೊಂದು ಪೌರಾಣಿಕ ಕಥೆಯನ್ನೇ ಹೇಳುತ್ತಾರೆ. ಈ ಹಿಂದೆ ಕೊರಗರ ಮೂಲದ ಕುರಿತು ಪ್ರಸ್ತಾಪಿಸುವಾಗ ಅಣ್ಣ-ತಂಗಿಯರ ಕಥೆಯನ್ನು ಗಮನಿಸಿದ್ದೆವು. ಆ ಕಥಾ ಭಾಗವೇ ಮುಂದುವರೆದು, ಎಂಜಲು ಅನ್ನವನ್ನು ತಿನ್ನುವುದರ ಕುರಿತು ಪ್ರಸ್ತಾಪಿಸುತ್ತದೆ.

ಅಣ್ಣ-ತಂಗಿಯರು ಪರಸ್ಪರ ಕೂಡಬಾರದಾಗಿತ್ತು. ಹೀಗೆ ಕೂಡಿದ್ದ ರಿಂದಾಗಿ 'ಪಾಪ' ಬಂದಿದೆ. ಈ ಪಾಪದ ಪರಿಹಾರಕ್ಕಾಗಿ ತಂಗಿ ಪರಿತಪಿಸ ತೊಡಗಿದಳು. ಅಕ್ಕನ ಸಂತಾನದಿಂದ ಬಂದವರ (ಬ್ರಾಹ್ಮಣರು) ತಂಗಿಯನ್ನು ಮತ್ತು ತಂಗಿಯ ಸಂತಾನದವರನ್ನು ಹಂಗಿಸತೊಡಗಿದರು. ಇದಕ್ಕೆ ಪರಿಹಾರವೇನು? ಎಂದು ನಾರಾಯಣ ದೇವರಿಗೆ ಕೇಳಲಾಗಿ: ನಾರಾಯಣನು, ಅಕ್ಕನ ಸಂತಾನದವರು ಹೇಳಿದ ಕೆಲಸವನ್ನು ಮಾಡುತ್ತಾ ಅವರು ತಿಂದು ಬಿಟ್ಟ ಎಂಜಲನ್ನು ತಿಂದರೆ ನೀವು ಮಾಡಿದ ಪಾಪ ಪರಿಹಾರವಾಗುತ್ತದೆ-ಎಂದು

ಹೇಳಿದನಂತೆ. ಈ ಕಾರಣಕ್ಕಾಗಿ ಪಾಪದ ಸಂತಾನಕ್ಕೆ ಮೂಲಳಾದ ತಂಗಿಯೂ ಅದಕ್ಕೆ ಬದ್ಧಿ ಅಕ್ಕನ ಮಕ್ಕಳಾದರೇನಂತೆ? ಅವರೂ ನನ್ನ ಸಂತಾನದವರಲ್ಲವೆ? ಅವರೂ ನನ್ನ ಮಕ್ಕಳಲ್ಲವೆ? ಮಕ್ಕಳು ತಿಂದು ಬಿಟ್ಟದ್ದು ತಾಯಿ ತಿನ್ನಬೇಕಲ್ಲವೆ? ಹಾಗೆ ನನ್ನ ಮಕ್ಕಳ ಎಂಜಲು ನಾನು ತಿಂದರೆ ತಪ್ಪೇನು? ಎಂದು ತನ್ನ ಪಾಪ ಕಳೆದುಕೊಳ್ಳುವುದಕ್ಕಾಗಿ ಎಂಜಲು ತಿನ್ನುವ ಕೆಲಸ ಪ್ರಾರಂಭಿಸಿದಳು. ಆ ಎಂಜಲು ಅನ್ನವನ್ನು ತಿನ್ನಲು ಪ್ರಾರಂಭಿಸಿದ ತಂಗಿಯ ಸಂತಾನದವರೇ ನಾವು(ಕೊರಗರು) ಅದಕ್ಕಾಗಿ ನಾವು ಎಂಜಲು ಅನ್ನವನ್ನು ತಿನ್ನುತ್ತೇವೆ ಎಂದು ಕೊರಗರು ಹೇಳಿ ಕೊಳ್ಳುತ್ತಾರೆ.

ಈ ಎಂಜಲು ಅನ್ನಕ್ಕೆ ಸಂಬಂಧಿಸಿದಂತೆ ಇನ್ನೊಂದು ನಂಬಿಕೆಯೂ ಇದೆ ಬ್ರಾಹ್ಮಣರ ಎಂಜಲನ್ನು ತಿಂದರೆ ಮುಂದಿನ ಜನ್ಮದಲ್ಲಿ ನಾವು ಅಕ್ಕನ ಮಕ್ಕಳಾಗಿ (ಬ್ರಾಹ್ಮಣರಾಗಿ) ಹುಟ್ಟುತ್ತೇವೆ ಎನ್ನುವುದೇ ಆ ನಂಬಿಕೆ.

ಚಾರಿತ್ರಿಕ ಹಿನ್ನೆಲೆಯಲ್ಲಿ ಕೊರಗರ ಮೂಲದ ವಿಷಯ ಪ್ರಸ್ತಾಪಿಸುವಾಗ ಬ್ರಾಹ್ಮಣರ ಸಂಬಂಧ ಎಂತಹದಿತ್ತು ಎಂಬುದನ್ನು ಗಮನಿಸಿದ್ದೇವೆ. ಆ ಪೌರಾಣಿಕ ಕಥೆಯ ಮುಂದುವರೆದ ಭಾಗದಲ್ಲಿ ಒಡೆದು ಕಾಣುವ ವಿಚಾರವೆಂದರೆ ಯಜಮಾನಿಕೆಯ ಪ್ರವೃತ್ತಿ ಮತ್ತು ಜೀತಗಾರಿಕೆಯ ಪ್ರವೃತ್ತಿಯನ್ನು ಕಾಣುತ್ತೇವೆ. ಈ ಕಥೆಯಲ್ಲಿ ಮತ್ತು ವಾಸ್ತವದಲ್ಲಿ ತಮ್ಮ ಜೀತ ಪ್ರವೃತ್ತಿಯಿಂದ-ಹಾಗೂ ತಂಗಿ ಸಂತಾನದಿಂದ (ಪಾಪ ಸಂತಾನದಿಂದ) ಬಿಡುಗಡೆ ಪಡೆಯಲು ಹಾತೊರೆಯುವದನ್ನು ಕಾಣುತ್ತೇವೆ. ಇಲ್ಲಿ ಕರ್ಮ ಸಿದ್ಧಾಂತದ ಹೇರಿಕೆ ಯಾವ ರೀತಿಯಲ್ಲಿದೆ ಎಂದು ಗುರುತಿಸಿಕೊಳ್ಳಬಹುದು.

ಈ ಕಥೆಯ ಮೇಲಿನಿಂದ, ಎಂಜಲದ ಕುರಿತಾಗಿ ಕೊರಗರಲ್ಲಿ ಎಂತಹ ಪವಿತ್ರವಾದ ಭಾವನೆ ಇದೆ ಎನ್ನುವದು ತಿಳಿದು ಬರುತ್ತದೆ. ಆದರೆ ಕೊರಗರ ಎಂಜಲು ಸವರ್ಣೀಯರಿಗೆ ವಿಷವಾಗಿ ಪರಿಣಮಿಸಿದೆ ಎನ್ನುವ ವಿಷಯ ಕೆಲವು ಆಚರಣೆಗಳ ಮೂಲಕ ತಿಳಿದು ಬರುತ್ತದೆ. ಕೊರಗರಲ್ಲಿ ಬರುವ ಅಂಡೆ ಕೊರಗರು ಬದಿರಿನ ಕೊಳವೆಯನ್ನು (ಅಂಡೆ) ಉಗಿಯುವುದಕ್ಕಾಗಿ ಕೊರಳಲ್ಲಿ ಕಟ್ಟಿಕೊಳ್ಳುತ್ತಿದ್ದರು ಎನ್ನುವ ವಿಷಯ ಈ ಹಿಂದೆಯೇ ಗಮನಿಸಿದ್ದೇವೆ. ಇಲ್ಲಿ ಕೊರಗರ ಉಗುಳು ನೆಲಕ್ಕೆ ಬೀಳಬಾರದು ಬಿದ್ದರೆ ಅದರಿಂದ ಸವರ್ಣೀಯರಿಗೆ

ಕೆಡಕುಂಟಾಗುತ್ತದೆ ಎಂದು ತಿಳಿಯಲಾಗುತ್ತದೆ. ಅಲ್ಲದೆ ಊರಲ್ಲಿ ಬರುವಾಗ ಕೊರಗರು ದಂಡವನ್ನು ನೆಲಕ್ಕೆ ಬಡಿದು ಸದ್ದು ಮಾಡುತ್ತ ಬರಬೇಕು ಎನ್ನುವ ನಿಯಮವಿದೆ. 'ನಾನು ಬಂದೆ' ಎಂದು ಎಚ್ಚರಿಕೆ ಕೊಡುವುದಕ್ಕಾಗಿಯೇ ಈ ಸದ್ದಿನ ಸೂಚನೆ ಇರಬೇಕು. ಅಂದರೆ ಇವರಿಂದ ಬರಬಹುದಾದ ಕೆಡಕುಗಳಿಂದ ಬಿಡುಗಡೆ ಹೊಂದುವುದಕ್ಕಾಗಿ ಈ ಕಟ್ಟಳೆಯನ್ನು ಹೇರಿರುವದು ತಿಳಿದು ಬರುತ್ತದೆ. ಕೊರಗರು ಬಾಯಿಯಲ್ಲಿಯ ಉಗುಳು ನೆಲಕ್ಕೆ ಉಗಿಯುವುದರಿಂದ ಅದನ್ನು ನಾವು (ಶುದ್ಧಜನ) ದಾಟಿದರೆ ಅಥವಾ ತುಳಿದರೆ ರೋಗಕ್ಕೆ ತುತ್ತಾಗಿ ಸಾಯುತ್ತೇವೆ ಎನ್ನುವ ನಂಬಿಕೆ ಇದೆ. ಇಲ್ಲಿ ಕೊರಗರ ಎಂಜಲು ಕೊರಗರಿಗೆ ವಿಷವಾಗಿ ಬ್ರಾಹ್ಮಣರ ಎಂಜಲು ಕೊರಗರಿಗೆ ಅಮೃತವಾಗಿರುವ ಬಗೆಯನ್ನು ನೋಡುತ್ತೇವೆ.

ಇನ್ನು ಕೊರಗ-ಕೊರಗರಲ್ಲಿಯೇ ಎಂಜಲದ ಕುರಿತು ಇರುವ ವಿಧಿ-ನಿಷೇಧ ಗಳು ಇನ್ನೂ ಕುತೂಹಲಕಾರಿಯಾಗಿವೆ. ಸಾಮೂಹಿಕವಾದ ಊಟದ ಸಂದರ್ಭದಲ್ಲಿ, ಊಟ ಮಾಡುವಾಗ ಅಚಾತುರ್ಯದಿಂದ ಅನ್ನದ ಅಗುಳು ನೆಲಕ್ಕೆ ಬಿದ್ದರೆ ಅಥವಾ ಇನ್ನೊಬ್ಬನ ತಟ್ಟೆಯಲ್ಲಿ ಬಿದ್ದರೆ ಮತ್ತೆ ಅಂತಹ ಸಾಮೂಹಿಕ ಊಟವನ್ನು ಹಾಕಿಸುವುದಲ್ಲದೆ ತಮ್ಮ ದಂಡವನ್ನು ಕೊಡಬೇಕು ಎನ್ನುವ ನಿಯಮಗಳಿವೆ. ಇಲ್ಲಿ ಕೊರಗ ಮತ್ತು ಬ್ರಾಹ್ಮಣರ ನಡುವಿನ ಸಂಬಂಧದ ನಿಯಮಗಳನ್ನೇ ತಮ್ಮ ಒಳಪಂಗಡಕ್ಕೆ ಅನ್ವಯಿಸಿಕೊಂಡಿರುವುದು ಕಂಡುಬರುತ್ತವೆ. ಇಂಥವು ಬೇರೆ ಬೇರೆ ಉದಾಹರಣೆಗಳನ್ನು ನೋಡಬಹುದು.

"ಕಳ್ಳು" ಕುಡಿತ ಅವಮಾನಕರವೆಂದು ಈ ಜನಾಂಗದವರು ಭಾವಿಸು ವುದಿಲ್ಲ. ಅದನ್ನು ಅಷ್ಟೇ ಪವಿತ್ರತೆಯ ಹಿನ್ನೆಲೆಯಲ್ಲಿಯೇ ನೋಡುತ್ತಾರೆ. ಶುಭ ಅಶುಭದ ಯಾವುದೇ ಬಗೆಯ ಕಾರ್ಯಕ್ರಮವಿದ್ದರೂ ಕಳ್ಳು ಬೇಕೇ ಬೇಕು. ಸಾಮೂಹಿಕವಾದ ಕಾರ್ಯಕ್ರಮದಲ್ಲಿ ಕಳ್ಳನ್ನು ಕುಡಿಯುವಾಗ, ನೆಲಕ್ಕೆ ಒಂದು ಹನಿ ಬಿದ್ದರೆ ಸಾಕು ಅದಕ್ಕೆ ತಪ್ಪು ದಂಡ ವಿಧಿಸುತ್ತಾರೆ ಇಲ್ಲವೆ ಅಂಥಹದೇ ಒಂದು ಸಮಾರಂಭವನ್ನು ಮಾಡಿಗೆ ತಪ್ಪದೆ ಒಪ್ಪಿಸಬೇಕು ಎನ್ನುವ ನಿಯಮ ಗಳಿವೆ. ಬಡವರಾಗಿದ್ದಲ್ಲಿ ಖರ್ಚು ಕಡಿಮೆ ಮಾಡಿಸಿ ಆಚರಿಸುವ ಸಂಪ್ರದಾಯ ಗಳೂ ಇವೆ

ಕೊರಗರ ಒಳಪಂಗಡಗಳಲ್ಲಿಯು ವಿಧಿ ನಿಷೇಧಗಳು ವಿಶಿಷ್ಟವಾದ ಗುಣಗಳನ್ನು ಹೊಂದಿವೆ. ಈ ಗುಣಗಳೇ ದಲಿತ ಸಂಸ್ಕೃತಿಯ ಮೌಲ್ಯಗಳಾಗಿ ನಿಲ್ಲುತ್ತವೆ(?). ಕಾಲಾಂತರದಲ್ಲಿ ಇಂಥ ವ್ಯವಸ್ಥೆಗಳಲ್ಲಿ ಬದಲಾವಣೆಯಾಗಿರುವುದು ಕಂಡು ಬರುತ್ತದೆ. 'ಅಂಡೆ' ಕೊರಗರು ಇನ್ನೊಬ್ಬ ಕೊರಗನ ಅಂಗಳದಲ್ಲಿ ಅಥವಾ ಸಂಮುಖದಲ್ಲಿ ಉಗಿಯಬಾರದು ಎಂಬ ಸಾಂಪ್ರದಾಯಿಕ ನಿಯಮಗಳಿವೆ. ಕೊರಗರ ಮತ್ತು ಬ್ರಾಹ್ಮಣರ ಕುರಿತು ಬರುವ ಎಂಜಲಿನ ನಿಷೇಧಗಳು ಹೇಗೆ ಇವೆಯೋ ಅದೇ ರೀತಿ ಕೊರಗ ಕೊರಗರಲ್ಲಿಯೂ ಎಂಜಲ ಕುರಿತು ಅಪವಿತ್ರತೆಯ ಭಾವನೆ ಇರುವುದು (ದ. ಕ.) ಒಡೆದು ಕಾಣುತ್ತದೆ. ಪವಿತ್ರ ಮತ್ತು ಅಪವಿತ್ರ ಎಂಬ ಎರಡೂ ಬಗೆಯ ಆಶಯಗಳಲ್ಲಿ ಎಂಜಲಿನ ಸುತ್ತ ಕಂಡು ಬರುತ್ತದೆ ಮೂಲದ ಕತೆಯಲ್ಲಿ ಬರುವ 'ಎಂಜಲು' ಗೌರವ ಭಾವನೆಯ ವಿಚಾರ. ಈಗ ಅವರಲ್ಲಿಯೇ ಕಡಿಮೆಯಾಗುತ್ತಿದೆ. ಎಂಜಲು ಪವಿತ್ರ ಎಂಬ ವಿಚಾರ ಮೂಲದಲ್ಲಿ ಸಾರ್ವತ್ರಿಕವಾಗಿರಬೇಕು. ಅನಂತರದಲ್ಲಿ ಅಪವಿತ್ರ ಎಂಬ ವಿಚಾರ ಸೇರಿಕೊಂಡಿರಬೇಕು. ಮೇಲು ಜಾತಿಯವರ ಮಕ್ಕಳಿಗೆ ಮೊಲೆಯುಣಿಸಿ 'ಕೊರೆತ' ಅಥವಾ 'ಕೊರತಳು' ಎಂದು ಹೆಸರಿಡುವ ಸಂಪ್ರದಾಯ ಗಮನಿಸಿದರೆ ಇಲ್ಲಿಯೂ 'ಪವಿತ್ರತೆ'ಯ ವಿಚಾರವನ್ನು ಕಂಡುಕೊಳ್ಳುತ್ತೇವೆ. ಈ ಸಂಪ್ರದಾಯ ಇವತ್ತಿನ ದಿನಗಳಲ್ಲಿಯೂ ಬಳಕೆಯಲ್ಲಿರುವುದು ಕಾಣಬಹುದಾಗಿದೆ. ಆದರೆ ಮೊಲೆಯುಣಿಸುವ ಸಂಪ್ರದಾಯ ಗೌರವ ಭಾವನೆಗಾಗಿ ಮತ್ತು ತಮ್ಮ ಅಸಹನೀಯ ಕೃತ್ಯಕ್ಕೆ ಪರ್ಯಾಯವಾಗಿ ನೀಡುವ ಅಥವಾ ಒಳಗೊಳ್ಳುವ ಕ್ರಿಯೆ ಎಂದೂ ಹೇಳಲಾಗುತ್ತದೆ. ಆದರೆ ಕೊರಪಳು ಮೊಲೆಯುಣಿಸುವುದರಿಂದ, ಮಗು ರೋಗದಿಂದ ಪಾರಾಗುತ್ತದೆ ಎಂದು ನಂಬುತ್ತಾರೆ.

ಅಣ್ಣನ ಹೆಂಡತಿ ಮೈದುನನಾದವನಿಗೆ ಊಟಕ್ಕೆ ಬಡಿಸಬಾರದು ಎಂಬುದೊಂದು ನಿಯಮ. ಕೊರಗರು ಸತ್ತ ಪ್ರಾಣಿಗಳನ್ನು ಎಳೆದೊಯ್ಯುವುದಲ್ಲದೆ, ಅವುಗಳ ಮಾಂಸವನ್ನು ತಿನ್ನುತ್ತಾರೆ. ಇದಲ್ಲದೆ ಮೇಲು ವರ್ಗದ ಜನರ ಸಭೆ-ಸಮಾರಂಭಗಳಲ್ಲಿ ಹಾಜರಿದ್ದು ಅವರು ಕೊಟ್ಟ ಅನ್ನವನ್ನೂ, ಮಾಂಸದ ತುಂಡುಗಳನ್ನೂ ತಂದು, ತಿಂದು ಉಳಿದದ್ದು, ತೊಳೆದು ಒಣಗಿಸಿ ಕಾದಿಟ್ಟು ತಿನ್ನುವ ಸಂಪ್ರದಾಯ ಹಿಂದೆ ಬಳಕೆಯಲ್ಲಿತ್ತು, ಈಗಲೂ ಗುಡ್ಡ

ಗಾಡು ಪ್ರದೇಶದಲ್ಲಿರುವ ಕೊರಗರು ಈ ಕ್ರಮ ಮುಂದುವರೆಸಿಕೊಂಡು ಬಂದಿದ್ದಾರೆ. ಈ ಪದ್ಧತಿಯಲ್ಲಿ ಕೊರಗರು ಆಹಾರ ಸಂಗ್ರಹಿಸುವುದರಿಂದ ಇವರಿಗೆ ಅಡಿಗೆ ಮಾಡಿಕೊಂಡು ತಿನ್ನಲೂ ಬರುತ್ತಿರಲಿಲ್ಲ. ಎಂದು ಹೇಳಲಾಗುತ್ತದೆ. ಆದರೆ ಈ ಬಗೆಯ ಆಹಾರ ಸೇವನೆಯಿಂದ ಬರಿದ ಜನ ಇವರ ಎಂಜಲು ಅಪವಿತ್ರವಾದುದು ಎಂಬ ಭಾವನೆ ತಂದಿರುವ ಸಾಧ್ಯತೆಗಳಿವೆ. ಜೊತೆಗೆ ಪವಿತ್ರತೆಯ ಮೆರಗು ಸಿಕ್ಕಿರುವ ಸಾಧ್ಯತೆಗಳೂ ಇದೆ. ಹೇಗೆಂದರೆ ಈ ಬಗೆಯಲ್ಲಿ ಒಣಗಿಸಿ ಆಹಾರವನ್ನು ಕಾಲಾಂತರದಲ್ಲಿ ತಿಂದೂ ಸದೃಢಕಾಯ ರಾಗಿರುವ ಮತ್ತು ಆರೋಗ್ಯವಂತರಾಗಿರುವ, ಕಲ್ಲನ್ನೂ ತಿಂದು ಅರಗಿಸಿ ಕೊಳ್ಳುವ ಗುಣ ಹೊಂದಿದ, ಇದನ್ನು ನೋಡಿ ಮೇಲು ಜಾತಿಯವರಲ್ಲಿ ಮನೋಭಾವ ತಂದಿರುವ ಸಾಧ್ಯತೆಗಳಿವೆ. ಪುರಾಣದ ಕಥೆಯಲ್ಲಿ ಬರುವ ತಾಯಿಯ ಅಂದರೆ ಮೂಲದ ನಿವಾಸಿಗಳು ಎನ್ನುವ ಹಿನ್ನೆಲೆಯಲ್ಲಿಯೂ ಈ ಬಗೆಯ ಗೌರವ ಭಾವನೆ ಸೇರಿರುವ ಸಾಧ್ಯತೆಗಳಿವೆ.

ಬೇಡಿ ತಿನ್ನುವ ಪ್ರವೃತ್ತಿಯವರಾದ ಕೊರಗರಲ್ಲಿಯೂ ಸಾಕಷ್ಟು ವ್ಯವಸ್ಥಿತ ವಾದ ನಿಯಮಾಚಾರಗಳಿವೆ ಒಂದೊಂದು ಕೊರಗ ಮನೆತನದವರೂ ಹಳ್ಳಿಯ ಒಂದೊಂದು ಭಾಗಗಳನ್ನು ಗುತ್ತಿಗೆಯಂತೆ, ತಾವು ಬೇಡಿ ತಿನ್ನುವ ಸ್ಥಳಗಳನ್ನು ನಿಗದಿ ಮಾಡಿಕೊಂಡಿರುತ್ತಾರೆ. ಒಂದು ವೇಳೆ ಒಬ್ಬ ಕೊರಗ ತನ್ನ ಭಾಗದ ಸೀಮೆಯನ್ನು ಮೀರಿ ಬೇರೊಬ್ಬರ ಭಾಗದ ಸೀಮೆಯಲ್ಲಿ ಬೇಡುತ್ತಿದ್ದರೆ ಅದಕ್ಕಾಗಿಯೇ ಕಲಹಗಳಾಗುತ್ತವೆ. ಇದು ಭೂಮಾಲಿಕರು ಗ್ರಾಮಗಳಲ್ಲಿ ತಮ್ಮ ಗದ್ದೆಗಳ ಕೆಲಸಕ್ಕೆ ಕೆಲಸಗಾರರನ್ನು ಹಂಚಿಕೊಳ್ಳುವ ಪದ್ಧತಿಯಂತೆ, ಕೊರಗರೂ ಒಂದು ಹಳ್ಳಿಯನ್ನು ಒಡೆದು ತಮ್ಮತಮ್ಮಲ್ಲಿಯೇ ಹಂಚಿಕೊಳ್ಳು ತ್ತಾರೆ. ಇದೂ ಕೂಡ ಅನುಕರಣೆಯ ಒಂದು ಗುಣವೆಂದೇ ಹೇಳಬಹುದು.

2.5. ಕೊರಗರ ಹಬ್ಬ-ಹರಿದಿನಗಳು ಮತ್ತು ಆರಾಧನೆ:

ನಿಸರ್ಗದ ಮಡಿಲಿನಲ್ಲಿ ವಾಸಿಸುವ ಕೊರಗರು ಮುಖ್ಯವಾಗಿ 'ಸೂರ್ಯ'ನ ಆರಾಧಕರು. ವೃಕ್ಷ ಮತ್ತು ಜಲಾರಾಧನೆಯೂ ಇದರೊಂದಿಗೆ ಸೇರಿಕೊಂಡಿದೆ. ಈ ಮೂರು ಶಕ್ತಿಗಳನ್ನು ಸಮೀಕರಿಸಿ ಆರಾಧಿಸುವ ಪದ್ಧತಿ ಇದೆ. ಬೆಳಗಿನ ಜಾವದಲ್ಲಿ ಎದ್ದು, ಗಿಡದಡಿಗೆ ಬಂದು ನೀರು ಹಾಕಿ, ನಂತರ ತಾನು ಮುಖ ತೊಳೆದು ಸೂರ್ಯ ದೇವನಿಗೆ ನಮಿಸುವ ವಾಡಿಕೆ ಇದೆ.

ಕೊರಗತನಿಯ ದೈವದ ಆರಾಧಕರಾದ ಇವರು ಇತ್ತೀಚಿನ ದಿನಗಳಲ್ಲಿ ಪಿಲಿಚಾಮುಂಡಿ, ಮಹಾಕಾಳಿ. ಜುಮಾದಿ ಗುಳಿಗ ಇಂಥವುಗಳನ್ನು ಆರಾಧಿಸುತ್ತಾರೆ. ಆದರೆ ಇವುಗಳ ಆರಾಧನೆ ಕೊರಗತನಿಯನ ಸಂಭ್ರಮಕ್ಕೆ 'ಏರುವದಿಲ್ಲ' ಧರ್ಮಸ್ಥಳ, ಸುಬ್ರಹ್ಮಣ್ಯ ದೇವರುಗಳ ಪ್ರಭಾವದಿಂದಲೂ ಇವರಿಗೆ ತಪ್ಪಿಸಿಕೊಳ್ಳಲಾಗಿಲ್ಲ. ಇವರಲ್ಲಿ ವಾರದ ದಿನಗಳಿಗೆ ಹೆಚ್ಚಿನ ಪ್ರಾಧ್ಯತೆ ಇದೆ. ತಮ್ಮ ಮಕ್ಕಳಿಗೆ ಹೆಸರಿಡುವಾಗ ವಾರದ ದಿನಗಳನ್ನೆ ಇಡುತ್ತಾರೆ. ಆರಾಧನೆಯಲ್ಲಿಯೂ ವಾರದ ದಿನಗಳಿಗೆ ಆಧ್ಯತೆ ಸಿಗುವುದು ಕಂಡುಬರುತ್ತದೆ. ಆದಿತ್ಯವಾರ ಮತ್ತು ಶುಕ್ರವಾರಗಳನ್ನು 'ಶುಭ' ದಿನಗಳೆಂದು ತಿಳಿಯುತ್ತಾರೆ.

ಇಂಥವುಗಳನ್ನು ಹೊರತು ಪಡಿಸಿದರೆ ಇವರಿಗೆ ತಮ್ಮದೇ ಆದ ಸ್ವತಂತ್ರ ಹಬ್ಬಗಳು ಇಲ್ಲ. ಕೊಟ್ಟ ಅನ್ನವನ್ನು ತಿಂದು ಬದುಕನ್ನು ಕಳೆವ ಇವರು ಹಿಂದೂಗಳನ್ನೇ ಅನುಕರಿಸಿದ್ದಾರೆ. ಬ್ರಾಹ್ಮಣರ ಹಬ್ಬದ ಅಥವ ಉತ್ಸವದ ದಿನದಂದು ಅವರು ತಿಂದು ಬಿಟ್ಟ ಸಿಹಿಯೂಟವೇ, ಕೊರಗರಿಗೂ ಅದೇ ಹಬ್ಬದ ಸಿಹಿಯೂಟ. ಹೀಗಾಗಿ ಬ್ರಾಹ್ಮಣರ ಹಬ್ಬದ ದಿನಗಳೇ ಇವರಿಗೂ ವಿಶೇಷ ದಿನಗಳಾಗಿರುವುದರಲ್ಲಿ ಆಶ್ಚರ್ಯವೇನಿಲ್ಲ. ಇದಲ್ಲದೆ ಮಗುವಿನ ಹುಟ್ಟು, ಹೆಣ್ಣು ರುತುಮತಿಯಾದ ದಿನ ಇಂಥವುಗಳನ್ನು ಸಂಭ್ರಮದಿಂದ ಆಚರಿಸುತ್ತಾರೆ. ಇವು ಸಾಂಪ್ರದಾಯಿಕ ವೆನಿಸಿದರೂ ಉತ್ಸವದ ಮಟ್ಟ ಮುಟ್ಟದಿದ್ದರೂ, ಇಂಥ ಸಂದರ್ಭಗಳು ಉತ್ಸವದ ಕೊರತೆಯನ್ನು ನೀಗಿಸಿವೆ.

ಬರಹಗಾರರು ಚರ್ಚಿಸಿದಂತೆ ಗೋಕುಲ ಅಷ್ಟಮಿ ಮತ್ತು ಚೌತಿಯ ಹಬ್ಬಗಳನ್ನು ಆಚರಿಸುತ್ತಾರೆ. ಇವರ ಅಣ್ಣ-ತಂಗಿಯರ ಕಥೆಯಲ್ಲಿ ಬರುವ ನಾರಾಯಣ ದೇವರ ವಿಚಾರವನ್ನು ಗಮನಿಸಿದರೆ ಮತ್ತುಇಲ್ಲಿ ಅನುಕರಣೆ ಮಾಡಿರುವ ಪದ್ಧತಿಗಳನ್ನು ಗಮನಿಸಿದರೆ ಬ್ರಾಹ್ಮಣರ ಸಂಪ್ರದಾಯಗಳಿಂದ ಹೆಚ್ಚು ಪ್ರಭಾವಿತರಾಗಿರುವುದು ಕಂಡು ಬರುತ್ತದೆ. ಬ್ರಾಹ್ಮಣರೆಂದರೆ ಸಾಕು ಹೆದರುತ್ತಾರೆ. ಅವರಲ್ಲಿ ಭಕ್ತಿ-ಭಯ ಎರಡನ್ನೂ ಹೊಂದಿದವರಾಗಿದ್ದಾರೆ.

'ಬಲಿ' ಪದ್ಧತಿಗೆ ಇವರಲ್ಲಿ ವಿಶಿಷ್ಟವಾದ ಸ್ಥಾನವಿದೆ. ಆಡು, ಕೋಳಿ, ಹಂದಿಗಳನ್ನೂ ಬಲಿ ಕೊಡುತ್ತಾರೆ ಹಿಂದೆ ಗೂಬೆ ಮತ್ತು ಎಮ್ಮೆಗಳನ್ನೂ

ಬಲಿ ಕೊಡುತ್ತಿದ್ದ ವಿವರಗಳು ತಿಳಿದು ಬರುತ್ತವೆ. ಬಲಿ ಕೊಡುವ ಸಂದರ್ಭದಲ್ಲಿ ಒಂದೇ ಹೊಡೆತಕ್ಕೆ ರುಂಡ-ಮುಂಡ ಬೇರೆ ಬೇರೆಯಾಗಬೇಕು ಎನ್ನುವ ನಂಬಿಕೆ ಇದೆ. 'ಬಲಿ'ಯನ್ನು ತೆಗೆದು ಕೊಳ್ಳುವವನಿಗೆ 'ಅಸಾದಿ' ಎಂದು ಕರೆಯುತ್ತಾರೆ.

ಕೊರಗ ತನಿಯ ಭೂತದ ಆರಾಧನೆ (ಇದರ ಹೆಚ್ಚಿನ ವಿವರಕ್ಕಾಗಿ ಅಮೃತ ಸೋಮೇಶ್ವರ ಅವರ ಕೃತಿಯನ್ನು ನೋಡಿರಿ) ಕೊರಗ ಜನಾಂಗದಲ್ಲಿ ಹಿರಿಯದು.

'ಕೊರಗ ತನಿಯ'ನಿಗೆ 'ಕೊರಗ ಜನಿಯ' ಎಂದು ಕರೆಯುವ ವಾಡಿಕೆ ಇದ್ದರೂ, ಅದು ಕಡಿಮೆ. ಈತನ ಕುರಿತು ಸಾಕಷ್ಟು ಪಾಡ್ದನಗಳು ಲಭ್ಯವಾಗುತ್ತವೆ. ಈತನ ತಂದೆ ಕುರವನ ಕೋಡಿ. ತಾಯಿ ಕೊರಪ ತನಿಯರು ಬಾಲ್ಯದಲ್ಲಿಯೇ ಇವರನ್ನೂ ಕಳೆದುಕೊಂಡು, ತಾಯಿ ಬೈರಕ್ಕೆ ಬೈದಲೆಯ ಆಶ್ರಯವನ್ನು' ಪಡೆದು ಬೆಳೆಯುತ್ತಾನೆ. ಈತ ಬೆಳೆದ ಸ್ಥಳ ಎಣಸೂರು ಬಾಳಿಕೆ ಇಲ್ಲಿ ನೇಮ ನಡೆಯುವಾಗ ತೆಂಗಿನ ಎಳೆಯ ಗರಿ, ಬಾಳೆಯ ದಿಂಡು 'ಎಳೇಳು ಹೊರೆಗಳನ್ನು ತಂದು ಹಾಕಲು ತನಿಯನಿಗೆ ಹೇಳಿದರೆ ಆತ' ಎಳರ ಅಂಕಿಯ ಬದಲಾಗಿ ಎಪ್ಪತ್ತರಷ್ಟು ತಂದು ಹಾಕುತ್ತಾನೆ.

ಇಷ್ಟೆಲ್ಲಾ ಕೆಲಸವಾದ ನಂತರ ನೇಮದ ಜನ ತನಿಯನಿಗೆ 'ಮಾಡ'ದ ಬಳಿಗೆ ಬರಬಾರದೆಂದು ಹೇಳುತ್ತಾರೆ. 'ನಾನು ತಂದ ತಿರಿ ಬಾಳೆ ಆದೀತು. ನಾನು ಮಾತ್ರ ಮಾಡದ ಸಮೀಪ ಬರಬಾರದೆ?' ಎಂದು ಹತ್ತಿರಕ್ಕೆ ಹೋಗುತ್ತಾನೆ. ಮಾಡದ ಸಮೀಪವೇ ನಾರಂಗದ ಮರವೊಂದರಲ್ಲಿ ಇರುವ ಕಾಯಿಗಳನ್ನು ನೋಡಿ ನಾನು ಬರುವಾಗ ಮನೆಯಲ್ಲಿ ಉಪ್ಪಿನಕಾಯಿ ಮುಗಿದಿದೆ. ಎಂದು ತಾಯಿ ಹೇಳಿದ್ದಳು. 'ಇಲ್ಲಿಂದ ನಾರಂಗದ ಹುಳಿಯನ್ನು ಒಯ್ಯುತ್ತೇನೆ' ಎಂದು ಮಾಡದ ಮಾಡಿಗೆ ಹತ್ತಿ ಕೊಯ್ಯುವಾಗ ಮೈಸಂದಾಯ ಮತ್ತು ಕಿನಿ ಕೊಡೆಂಗೆನಾರ ದೈವಗಳು ಕಡೆಗಣ್ಣಿನಿಂದ ನೋಡಿ ಕೊರಗ ತನಿಯನನ್ನು ಮಾಯ ಸ್ವರೂಪ ಮಾಡಿ ಬಿಡುತ್ತವೆ.

ಹೀಗೆ ಪಾಡ್ದನಗಳಲ್ಲಿ ಬರುವ ಕೊರಗ ತನಿಯನ ಕಥೆ ಸಾಹಸದ ಘಟನೆಗಳಿಂದ, ಅಮಾನುಷ ಶಕ್ತಿಯನ್ನು ಹೊಂದಿದವನಾಗಿ, ಪರೋಪಕಾರಿಯಾಗಿ

ತಿಂಡಿಬಾಕನಾಗಿ, ಶ್ರಮ ಜೀವಿಯಾಗಿ ಈತನ ವ್ಯಕ್ತಿತ್ವ ವ್ಯಕ್ತವಾಗಿದೆ. ಕೊರಗ ತನಿಯು ಮರದಿಂದ ಬಿದ್ದು ಸತ್ತ ಎನ್ನುವದಾಗಲಿ ಭೂತಗಳು ಮಾಯ ಮಾಡಿದವು ಎನ್ನುವುದಾಗಲಿ, ಇವು ತನಿಯುನ ಸಾವಿನ ಕುರಿತು ಸಾಕಷ್ಟು ಸಂದೇಹ ಗಳನ್ನು ತಂದೊಡ್ಡುತ್ತವೆ. ಮಾಡದ ಹತ್ತಿರ ಹೋಗುವದು ಕೊರಗ ತನಿಯುನಿಗೆ ನಿಷೇಧ. ನಿಷೇಧವಿರುವುದನ್ನು ಹೇಳಿ ಎಚ್ಚರಿಸಿದ್ದಾಗಲೂ, ಮಾಡದ ಮಾಡದಲ್ಲಿ ಕಾಲಿಟ್ಟು ಕಾಯಿಯನ್ನು ಕೀಳುವ ಸಾಹಸಕ್ಕೆ ಕೈ, ಹಾಕಿದ್ದು ಅಸ್ಪೃಶ್ಯತನದ ಬಗ್ಗೆ ಪ್ರಶ್ನೆ ಮಾಡಿದ್ದು, ದೈವಗಳು ಕಣ್ಣು ಕೆಂಪು ಮಾಡಿದ್ದು ಇವೆಲ್ಲಾ ಗಮನಿಸಿದರೆ 'ಮಾಯೆ' ಎನ್ನುವ ಶಬ್ದದ ಹಿಂದೆ ಕೊರಗತನಿಯುನ 'ಕೊಲೆ' ನಡೆದಿದೆ ಎನ್ನುವದು ಸ್ಪಷ್ಟ. ಮೇಲುವರ್ಗದವರಿಗೆ ಇರುವ ಸವಲತ್ತುಗಳನ್ನು ಪಡೆದು ಕೊಳ್ಳುವುದಕ್ಕಾಗಿ ಹಂಬಲಿಸುವ ಒಬ್ಬ ಕೆಳವರ್ಗದವನ ಸ್ಥಿತಿ ಇಲ್ಲಿ ಯಾವ ಮಟ್ಟಕ್ಕೆ ಬಂದಿದೆ ಎಂದರೆ ತನಿಯುನನ್ನು ದೈಹಿಕವಾಗಿಯೇ ಇಲ್ಲದಾಗಿಸುವ ಕ್ರಿಯೆ ನಡೆದಿರು ವುದನ್ನು ಅದು ಹೇಳುತ್ತದೆ. ಇದು ಸಾಮಾಜಿಕ ವ್ಯವಸ್ಥೆಯ ಪ್ರತೀಕವೆನ್ನು ವುದರಲ್ಲಿ ಸಂದೇಹವಿಲ್ಲ.

ತನಿಯುನ ಸಾಹಸದ ಗುಣಗಳಿಗೆ ಅನುಗುಣವಾಗಿ ಮತ್ತು ಸಮಾನ ಅವಕಾಶಗಳಿಗಾಗಿ ಹಾತೊರೆಯುವ, ಅಸ್ಪೃಶ್ಯತನದ ಸಮಸ್ಯೆಯನ್ನೇ ಅನುಭವಿಸಿ ಪ್ರತಿಭಟಿಸಿದ ಒಬ್ಬ ಸಾಂಸ್ಕೃತಿಕ ನಾಯಕನಿಗೆ ಈ ಬಗೆಯ ರೂಪ ಸಿಕ್ಕಿದೆ. ಆದರೆ ಇಂದಿನ ಸ್ಥಿತಿ-ಗತಿಗಳಲ್ಲಿ ಕೆಳಜಾತಿಯ 'ಕೊರಗ ತನಿಯು' ಭೂತವನ್ನು ಎಲ್ಲರೂ ಆರಾಧಿಸುತಿರುವುದು ಒಂದು ವಿಶೇಶ ಎಂದೆನಿಸಬಹುದು ಆದರೆ ಆ ವಿಶೇಷತೆ ಕೇವಲ ಕೊರಗ ತನಿಯು ನಂತಹ ದೈವಗಳಿಗೆ ಮಾತ್ರ ಅನ್ವಯಿಸುತ್ತದೆ. ಎಂದಿಲ್ಲ. ಕೆಳಜಾತಿಯ ಎಲ್ಲ ಹೆಸರುವಾಸಿ ಭೂತಗಳಗೆ ಈ ವಿಶೇಷತೆ ಅನ್ವಯಿಸುತ್ತದೆ. ಇದು ಜನಪದದ ವಿಶಿಷ್ಟ ಲಕ್ಷಣವೆಂದೇ ಹೇಳಬೇಕಾ ಗುತ್ತದೆ. ಇದು 'ಸಾಂಸ್ಕೃತೀಕರಣಗೊಳಿಸುವ ಒಂದು ಕ್ರಿಯೆ'ಯಾಗಿದೆ.

ಜನಪದದಲ್ಲಿ ಕಾಣುವ ಸಾಮಾನ್ಯ ಲಕ್ಷಣವೆಂದರೆ ಕೆಳಜಾತಿಯ ನಾಯಕನ ಸಾವು ಆದಾಗಲೂ, ವಿಜಯದ ಸಂಕೇತವಾಗಿ ಆ ನಾಯಕನನ್ನೇ (ಅಥವಾ ನಾಯಕಿಯನ್ನೇ ಕೇಂದ್ರ ಬಿಂದುವಾಗಿ ಆರಾಧಿಸುವ ಪದ್ಧತಿ ಇದೆ ಉದಾ: ಮಾರಿಕಾಂಬೆ, ಎಲ್ಲಮ್ಮ, ಜೋಕುಮಾರ ಮುಂತಾದವು) ಆ

ಆರಾಧನೆಯಲ್ಲಿ ನಾಯಕ ಅಥವಾ ನಾಯಕಿ ಪ್ರಬುದ್ಧವಾದ ಶಕ್ತಿಯಾಗಿ ಬೆಳೆದಾಗ ಆ ಶಕ್ತಿಯನ್ನು ಮೇಲುವರ್ಗದ ಜನ ತಮ್ಮ ದೇವತೆಯ ಅಥವಾ ದೈವದ ಶಕ್ತಿಗೆ ಸಂಬಂಧ ಹೇಳಿಕೊಳ್ಳುವುದು. ನಂಬಿಕೆ ಸಂಪ್ರದಾಯಗಳನ್ನು ಬೆಳೆಸುವುದು ಕಂಡು ಬರುತ್ತದೆ. ಕಾಲಾಂತರದಲ್ಲಿ ನಡೆಯುವ ಈ ಕ್ರಿಯೆ ಮೂಲದ ಘಟನೆಗಳನ್ನು ಮರೆಯಿಸಿ ಬಿಡುತ್ತವೆ. (ಕೆಲವು ಸಲ ದುಃಖ ಸೂಚಕವಾದ ಆಚರಣೆ ಇದ್ದಾಗಲೂ, ಸಂಭ್ರಮದಿಂದ ಆಚರಿಸುವ ಪದ್ಧತಿ ಬೆಳೆದು ಕೊಂಡು ಬಿಡುತ್ತವೆ. ಇಸ್ಲಾಂರಲ್ಲಿಯ ಮೋಹರಂ ಹಬ್ಬ ಇದಕ್ಕೊಂದು ಒಳ್ಳೆಯ ಉದಾಹರಣೆ) ಕೆಳವರ್ಗದ ದೇವತೆ ಅಥವಾ ದೈವ ಮೇಲೂ ವರ್ಗದ ದೇವತೆಗಳೊಂದಿಗೆ ಅಥವಾ ನಂಬಿಕೆ ಸಂಪ್ರದಾಯಗಳೊಂದಿಗೆ ಸಂಬಂಧ ಪಡೆದುಕೊಂಡಾಗ ಮತ್ತು ಹಿಂದಿನ ಚರಿತ್ರೆಯ ಸ್ಪಷ್ಟವಾದ ಅರಿವು ಇಲ್ಲದೆ ಹೋದಾಗ ಕೆಳವರ್ಗದವರು, ಅದನ್ನು ಮನ್ನಿಸಿ ಸ್ವಾಗತಿಸುತ್ತಾರೆ ಇದರಿಂದ ತಮ್ಮ 'ಶಕ್ತಿ'ಗೂ ವಿಶಿಷ್ಟವಾದ ಗೌರವ ಎಂದು ತಿಳಿಯುತ್ತಾರೆ. ವಿಶೇಷ ಶಕ್ತಿಗಳಲ್ಲಿ ಕಂಡುಬರುವ ಈ ಲಕ್ಷಣಕ್ಕಿಂತ ಕೊರಗ ತನಿಯ ಭೂತವೇನು ಭಿನ್ನವಾಗಿಲ್ಲ. ಕೊರಗ ತನಿಯನ ಹಿಂದಿರುವ ನಂಬಿಕೆ ಸಂಪ್ರದಾಯಗಳೊಂದಿಗೆ ಇರುವ ಸಂಬಂಧದಿಂದ ಈ ವಿಚಾರ ಗುರುತಿಸಿಕೊಳ್ಳಬಹುದು.

ಹೀಗೆ ಒಂದು ಭೂತ, ದೈವ ಅಥವಾ ದೇವರು, ಕೆಳವರ್ಗದಿಂದ ಮೇಲು ವರ್ಗಕ್ಕೆ ಸಾಂಸ್ಕೃತೀಕರಣಗೊಳ್ಳಲು ಮುಖ್ಯವಾಗಿ ಎರಡು ಕಾರಣಗಳು. ಒಂದು ಕೆಳವರ್ಗದ ದೇವರಿಗೆ ವಿಶಿಷ್ಟ ಶಕ್ತಿ ಪ್ರಾಪ್ತವಾಗಬೇಕಾದರೆ ನಮ್ಮ ಸಂಪ್ರದಾಯ-ನಂಬಿಕೆ- ದೇವರುಗಳೇ ಕಾರಣ ಎಂದು ಹೇಳಿ ಹೆಮ್ಮೆಪಟ್ಟು ಕೊಳ್ಳುವುದು. ಎರಡನೆದಾಗಿ ಆರಾಧನೆಯನ್ನು ಮಾಡುವ ಕೆಳವರ್ಗದ ಜನಗಳನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳುವ ಉದ್ದೇಶವೂ ಇದರಿಂದ ಸಾಧಿತವಾಗುತ್ತದೆ. ಕೊರಗತನಿಯನ ಹಿನ್ನೆಲೆಯಲ್ಲಿ ನೋಡಿದರೆ ಇಂತಹ ಸಾಧನೆಗಳು ಸ್ಪಷ್ಟವಾಗಿ ಗೋಚರವಾಗುತ್ತದೆ. 'ಮಾಯಕ'ದಂತಹ ಶಕ್ತ ಶೈಲಿಗಳು ಕೆಳಜಾತಿಯವರಲ್ಲಿ (ವರ್ಗ) ಅನುಕರಣೆ ಅಥವ ಹೇರಿಕೆಯ ಸ್ವರೂಪದಿಂದ ಬಂದವುಗಳಾಗಿವೆ.

ದಲಿತ ದೈವಗಳನ್ನು ಅಧ್ಯಯನ ಮಾಡುತ್ತ ಹೋದರೆ ಮೇಲುವರ್ಗದವರ

ದಬ್ಬಾಳಿಕೆ ಮತ್ತು ದಲಿತರು ಅದಕ್ಕೆ ನೀಡಿರುವ ಪ್ರತಿಭಟನೆ ಸ್ಪಷ್ಟವಾಗುತ್ತದೆ ತುಳು ಜಾನಪದ ಸಾಹಿತ್ಯ ಕ್ಷೇತ್ರದಲ್ಲಿ ದಲಿತರ ಪ್ರತಿಭಟನಾ ಸ್ವರೂಪ ಇದರಷ್ಟು ಕಟುವಾಗಿ ಮತ್ತು ನೇರವಾಗಿ ಹೇಳುವ ಬಗೆ ಕನ್ನಡದ ಜಾನಪದ ಸಾಹಿತ್ಯ ದಲ್ಲಿಯೂ ದೊರೆಯುವುದಿಲ್ಲ ಬಹುಶಃ ಅನ್ಯಭಾಷಾ ಸಾಹಿತ್ಯದಲ್ಲಿಯೂ ಇಂತಹ ಪ್ರತಿಭಟನಾತ್ಮಕ ರೂಪಗಳು ದೊರೆಯಲಿಕ್ಕಿಲ್ಲ, ದಲಿತೀಯತೆಯ ಹಿನ್ನೆಲೆಯಲ್ಲಿ ದಲಿತ ಪಾಡ್ದನಗಳಿಗೆ ಒಂದು ವಿಶಿಷ್ಟವಾದಸ್ಥಾನ ದೊರೆಯುತ್ತದೆ.

2.6. ಕೊರಗರ ನಂಬಿಕೆ ಸಂಪ್ರದಾಯಗಳು:

ಜನಪದದಲ್ಲಿಯೇ ಆಗಲಿ ಆದಿ ವಾಸಿಗಳಲ್ಲಿಯೇ ಆಗಲಿ ಅವರಲ್ಲಿರುವ ನಂಬಿಕೆ ಮತ್ತು ಸಂಪ್ರದಾಯಗಳು ಎರಡು ರೀತಿಯ ಪರಿಣಾಮಗಳನ್ನುಂಟು ಮಾಡುತ್ತದೆ. ನಂಬಿಕೆ ಸಂಪ್ರದಾಯಗಳನ್ನು ಆಚರಿಸುವವರಿಗೆ ರಕ್ಷಣೆ ಒಂದಾದರೆ ಇನ್ನೊಂದೆಡೆಗೆ ಅವರನ್ನು ಮೇಲಕ್ಕೇಳದಂತೆ ಹತ್ತಿಕ್ಕುವ ಕೆಲಸವನ್ನು ಮಾಡುತ್ತದೆ ಹತ್ತಿಕ್ಕುವ ಕೆಲಸವನ್ನು ಮಾಡುವಂತಹ ನಂಬಿಕೆ ಮತ್ತು ಸಂಪ್ರದಾಯಗಳು ಮೇಲುವರ್ಗದ ವರಿಗೆ ಪೂರಕವಾಗಿರುತ್ತದೆ. ಇಂತಹ ನಂಬಿಕೆಗಳು ಮೇಲು ವರ್ಗದವರು ಕೆಳ ವರ್ಗದವರ ಮೇಲೆ ಹೇರಿದ್ದಾರೆ

ಉದಾ;
- △ ಕೊರಗರು ನೆಲದ ಮೇಲೆ ಉಗಿಯಬಾರದು.
- △ ಕೊರಗರ ಹೆಸರು ರಾತ್ರಿ ಎತ್ತಬಾರದು.
- △ ಕೊರಗರು ಊರಲ್ಲಿ ಬರುವಾಗ ದಂಡವನ್ನು ಕುಟ್ಟುತ್ತ ಬರಬೇಕು.
- △ ಬ್ರಾಹ್ಮಣರ ಎಂಜಲು ತಿಂದರೆ ಮುಂದಿನ ಜನ್ಮದಲ್ಲಿ ಬ್ರಾಹ್ಮಣರಾಗಿ ಹುಟ್ಟುತ್ತಾರೆ.
- △ ನವರಾತ್ರಿಯಲ್ಲಿ ಕೊರಗ ವೇಷ ಹಾಕದಿದ್ದರೆ ಅವರಿಗೆ ಕಾಡಿಗೆ ಇದೆ,
- △ ಬಟ್ಟೆ ತೊಡಬಾರದು.
- △ ಅನ್ನ ಸಂಗ್ರಹಿಸಬಾರದು.
- △ ಕೊರಗರ ಶವ ಯಾರ ಕಣ್ಣಿಗೂ ಬೀಳದ ಹಾಗೆ ತೆಗೆದು ಕೊಂಡು ಹೋಗಬೇಕು.

△ ಮನೆಯಲ್ಲಿ ಸೂತಕ, ಗ್ರಹಚಾರ ಇದ್ದರೆ ಕೊರಗರಿಗೆ ಅನ್ನ ದಾನ ಮಾಡಬೇಕು.

△ ಬುಟ್ಟಿಗಳನ್ನು ಹೆಣೆದು ಕೊಡುವ ಕೆಲಸ ನಾರಾಯಣನೇ ಹೇಳಿದ್ದು.

ಇನ್ನೂ ಕೆಲವು ನಂಬಿಕೆಗಳು ಕೊರಗರ ಆಂತರಿಕ ವಲಯಕ್ಕೆ ಸಂಬಂಧಿಸಿದವು. ಇವು ಅವರ ಆಚಾರ-ವಿಚಾರ ಹೇಳುವಂತಹವಾಗಿದ್ದರೂ, ಪ್ರಗತಿಪರ ವಿಚಾರದ ಹಿನ್ನಲೆಯಲ್ಲಿ ನೋಡಿದಾಗ ಅವು ಕೊರಗರಿಗೆ ಪೂರಕವೆನಿಸಿದರೂ ಅವರದ್ದೇ ಆದ ಸಾಮಾಜಿಕ ಬಂಧವನ್ನು ಸುರಕ್ಷಿತವಾಗಿಡಲು ಬಂದವುಗಳಾಗಿವೆ. ಇವು ಕುಟುಂಬ ಮತ್ತು ಸಾಮೂಹಿಕ ಐಕ್ಯತೆಯ ಭಾವನೆಯನ್ನು ಕೆಡಕದಿರಲಿ ಎನ್ನುವ ಕಾರಣಕ್ಕಾಗಿ ಬಂದವುಗಳಾಗಿವೆ.

— ಅಣ್ಣನ ಮಡದಿಯಾದವಳು ಮೈದುನನಿಗೆ ಊಟಕ್ಕೆ ಬಡಿಸಬಾರದು
— ಚಿಕ್ಕ ಮಕ್ಕಳಿಗೆ ಕಳ್ಳು ಕುಡಿಸಿದರೆ ರೋಗ-ರುಜಿನಗಳು ಬರುವುದಿಲ್ಲ
— ಕನ್ನೆಯಾದವಳು ಪ್ರಾರ್ಥನೆ ಮಾಡಿದರೆ ದೇವರು ಬೇಗನೆ 'ಒ' ಎನ್ನುತ್ತಾನೆ.
— ಒಂದೇ ಬಳಿಯಲ್ಲಿ ರಕ್ತ ಸಂಬಂಧ ಬೆಳೆಸಬಾರದು.

ಹೀಗೆ ಕೊರಗರಲ್ಲಿಯ ನಂಬಿಕೆಗಳನ್ನು ಎರಡೂ ಮುಖದಿಂದಲೂ ನೋಡಲು ಸಾಧ್ಯವಾಗುತ್ತವೆ. ಮೊದಲ ಭಾಗದ ನಂಬಿಕೆಗಳು ಕೊರಗ ಜನಾಂಗಕ್ಕೆ ಮಾರಕವಾದವು. ಮತ್ತು ಕೊರಗರ ಬೆಳವಣಿಗೆಯನ್ನು ಹತ್ತಿಕ್ಕುವಂತಹವು. ಆದರೆ ಕೊರಗರು ಈ ಬಗೆಯ ನಂಬಿಕೆಗಳನ್ನು ಬಿಟ್ಟು ಕೊಡಲು ಸಿದ್ಧರಿಲ್ಲ. ಎರಡನೆಯ ಭಾಗದ ನಂಬಿಕೆಗಳು ಅವರ ಸಾಮಾಜಿಕ ಬಂಧದ ಬಿಗಿವು ಮತ್ತು ಕೌಟುಂಬಿಕ ಸಂಬಂಧಗಳ ಬಿಗುವಿನ ಕುರಿತು ತಿಳಿಸುತ್ತವೆ.

ಇವರ ನ್ಯಾಯ ಪದ್ಧತಿಯೂ ವಿಶಿಷ್ಟವಾಗಿರುವುದರಿಂದ ಅದನ್ನು ಪ್ರತ್ಯೇಕವಾಗಿಯೇ ನೋಡಲಾಗಿದೆ. ಇವರ ನ್ಯಾಯ ಪದ್ಧತಿ ವಿಶಿಷ್ಟವಾದ ನಂಬಿಕೆಗಳ ಮೇಲೆ ನಿಂತಿರುವುದರಿಂದ, ಇದು ದಿವ್ಯದ ಇನ್ನೊಂದು ಸ್ವರೂಪವೆಂದೇ ಹೇಳಬಹುದು.

ಮದುವೆ, ಮೊದಲು ಋತುಮತಿಯ ದಿನ, ಜನನ—ಮರಣ, ದೈವ ಭಕ್ತಿ, ಆರಾಧನೆ ಇವೆಲ್ಲವುಗಳ ಹಿಂದೆ ತಮ್ಮದೇ ಆದ ವಿಶಿಷ್ಟ ಬಗೆಯ ಆಚರಣೆಗಳಿವೆ. ಇವೆಲ್ಲ ಅವರ ಬದುಕಿನ ಅಲೆಮಾರಿತನದ ಹಿನ್ನೆಲೆಯಲ್ಲಿ ಕಂಡು ಬರುವಂಥವುಗಳಾಗಿವೆ. ಕೊರಗತನಿಯನ ಸುತ್ತ ಇರುವ ಕೆಲ ನಂಬಿಕೆಗಳನ್ನು ಗಮನಿಸಿ.

- △ ಕೊರಗತನಿಯ ನಂಬಿದವರ ಕೈ ಬಿಡುವುದಿಲ್ಲ.
- △ ಒಂದು ಗುಡಾಣದಲ್ಲಿ ಕಳ್ಳು ತುಂಬಿ 'ಬಾ' ಎಂದು ಕರೆದರೆ ಸಾಕು, ಕೊರಗತನಿಯ ಪ್ರತ್ಯಕ್ಷನಾಗುತ್ತಾನೆ.
- △ ಕೊರಗತನಿಯ ಬರುವಾಗ ಎಲ್ಲಿಯೂ ದೀಪವಿರಬಾರದು.
- △ ಸ್ತ್ರೀಯರು ತನಿಯನ ಕೋಲವನ್ನು ನೋಡಬಾರದು.
- △ ಕಾಡಿನಲ್ಲಿ ರಾತ್ರಿ ದಾರಿ ತಪ್ಪಿದವರಿಗೆ ಕೊರಗತನಿಯ ಪ್ರತ್ಯಕ್ಷನಾಗಿ ದಾರಿ ತೋರಿಸುತ್ತಾನೆ

ಕೊರಗರ ವಾದ್ಯ, ವೃತ್ತಿ ನಾಟಿ ವೈದ್ಯತನದ ಹಿನ್ನೆಲೆಯಲ್ಲಿ ಇಂಥವೆಲ್ಲವೂ ನಂಬಿಕೆ ಮತ್ತು ಸಂಪ್ರದಾಯಗಳಿಂದ ಬಂಧಿಸಲ್ಪಟ್ಟಿದೆ. ನಂಬಿಕೆ—ಸಂಪ್ರದಾಯ—ಆಚರಣೆಗಳನ್ನು ಬಿಟ್ಟು ಇವರ ಬದುಕೇ ಇಲ್ಲವೇನೊ ಎನ್ನುವಂತೆ ಅವುಗಳು ಕೊರಗರ ಬದುಕಿನಲ್ಲಿ ಹಾಸುಹೊಕ್ಕಿವೆ.

2.7.—ಕೊರಗರ ವಿವಾಹ ಪದ್ಧತಿ:

ಕೊರಗರದು ಸರಳ ವಿವಾಹ ಪದ್ಧತಿ. ಕೊರಗ ಜಾತಿಯ ಹಿರಿಯ ಗುರಿಕಾರರಿಬ್ಬರು ಸೇರಿ ಗಂಡು ಹೆಣ್ಣಿನವರ ಆಶಯ ಅಭಿಪ್ರಾಯದ ಮೇರೆಗೆ ವಿವಾಹ ನಿರ್ಣಯ ಮಾಡುತ್ತಾರೆ. ಕೊರಗರಲ್ಲಿ ಹೆಣ್ಣು ಋತುಮತಿಯಾದ ನಂತರವೇ ವಿವಾಹ ಮಾಡುವುದು ರೂಢಿಯಲ್ಲಿದೆ. ಅಂದರೆ ಕೊರಗರಲ್ಲಿ ಬಾಲ್ಯ ವಿವಾಹ ಪದ್ಧತಿ ಇಲ್ಲ. ಪುಷ್ಪವತಿಯಾದ ಹೆಣ್ಣು ಮಾತ್ರವೇ ವಿವಾಹ ಯೋಗ್ಯಳು ಎನ್ನುವ ಪರಿಕಲ್ಪನೆ ಕೊರಗರ ದಲಿತ ಸಂಸ್ಕೃತಿಯ ಹೆಗ್ಗಳಿಕೆ ಆಗಿದೆ. ಹಾಗು ಕೊರಗರಲ್ಲಿ ವಿವಾಹವೇರ್ಪಡಿಸುವುದಕ್ಕೆ ಮುಂಚೆ ಗಂಡು ಹೆಣ್ಣಿನ ಒಪ್ಪಿಗೆ ಕೇಳಿಯೇ ಸಂಬಂಧ ಏರ್ಪಡಿಸಲಾಗುವುದು. ಹೆಣ್ಣು ಗಂಡಿನ ಪೈಕಿ

ಯೂರಾದರೊಬ್ಬರಿಗೂ ವಿವಾಹ ಒಪ್ಪಿಗೆಯಿಲ್ಲದಿದ್ದಲ್ಲಿ ಅಂಥ ವಿವಾಹವನ್ನು ಮಾಡುವುದಿಲ್ಲ. ಇಲ್ಲಿ ಕೊರಗ ಹೆಣ್ಣು-ಗಂಡಿಗೆ ವಿವಾಹದಂಥ ಗುರುತರವಾದ ಕಾರ್ಯದಲ್ಲಿ ಆಯ್ಕೆ ಸ್ವಾತಂತ್ರ್ಯವಿರುವುದು ಆಶ್ಚರ್ಯತರುವುದು. ಇದು ಕೊರಗರ ದಲಿತ ಸಂಸ್ಕೃತಿಯು ಬೆಳಕಾಗಿದೆ. ಈ ಅರ್ಥದಲ್ಲಿ ಕೊರಗರು ಪ್ರತಿನಿಧಿಸುವ ವಿವಾಹ ಸಂಸ್ಕೃತಿ, ವೈದಿಕ ವಿವಾಹ ಸಂಸ್ಕಾರಕ್ಕಿಂತಲೂ ಭಿನ್ನವೂ, ಪ್ರಗತಿಪರವೂ ಆಗಿರುವುದನ್ನು ಕಾಣಬಹುದು.

ಕೊರಗರ ಸಮಾಜದಲ್ಲಿ ಕನ್ಯೆಗೆ ಬಹಳ ಮಹತ್ವವಿದೆ. ಕನ್ಯೆಯೇ ದೇವರ ಪೂಜೆಗೆ ಮುಂದಾಳು. ಈ ಅಂಶ ಕೊರಗ ಸಮಾಜದಲ್ಲಿ ಹೆಣ್ಣಿಗಿರುವ ಪ್ರಾಧಾನ್ಯತೆಯನ್ನು ಸೂಚಿಸುವುದು.

ಕೊರಗರು ತಮ್ಮ ಮಕ್ಕಳ ವಿವಾಹವೇರ್ಪಡಿಸುವುದಕ್ಕೂ ಹಿಂದಿನ ಕಾಲದಲ್ಲಿ ತಮ್ಮ ಧಣಿಗಳ ಒಪ್ಪಿಗೆ ಪಡೆಯಬೇಕಾಗಿತ್ತು. ಈ ನಿರ್ಬಂಧ ಕೊರಗರು ಗುಲಾಮ ಸ್ಥಿತಿಗಿಳಿದಿದ್ದರಿಂದ ಹುಟ್ಟಿಕೊಂಡುದಾಗಿದೆ.

ವಿವಾಹಕ್ಕೆ ಕೊರಗರಿಗೆ ಆದಿತ್ಯವಾರವೇ ಬಹಳ ಪ್ರಶಸ್ತವಾದುದು. ಇತರೇ ಗುಲಾಮ ಜಾತಿಗಳಿಗೆ ವಿವಾಹಕ್ಕೆ ಸೋಮವಾರ ಶುಭ ದಿನ. ವಿವಾಹವು ಸಾಮಾನ್ಯವಾಗಿ ಹೆಣ್ಣಿನ ಮನೆಯಲ್ಲಿ ನಡೆಯುವುದು ರೂಢಿ. ವಿವಾಹ ದಿನದಂದು ಗಂಡು ಹೆಣ್ಣಿಗೆ ಮಂಗಳ ಸ್ನಾನ ಮಾಡಿಸಿ ಚಾಪೆಯ ಮೇಲೆ ಈರ್ವರನ್ನೂ ಜೋಡಿಯಾಗಿ ಕೂರಿಸುತ್ತಾರೆ. ಮದುಮಗರ ಮುಂದೆ ತಟ್ಟೆಯಲ್ಲಿ ಅಕ್ಕಿ ಇರಿಸುವರು. ಕೊರಗರ ವಿವಾಹ ಸಮಾರಂಭದ ನೇತೃತ್ವವನ್ನು ಹಿರಿಯ ಕೊರಗನೊಬ್ಬನು ವಹಿಸುವನು. ಆತನು ವಧೂವರರ ತಲೆಯ ಮೇಲೆ ಅಕ್ಕಿ ಕಾಳನ್ನು ಹಾಕಿ ಆಶೀರ್ವದಿಸುವನು. ಆ ನಂತರ ಗಂಡಸರು ಆಮೇಲೆ ಹೆಂಗಸರು ವಧೂವರರನ್ನು ಆಶೀರ್ವದಿಸುವರು. ಆಗ ವರನು ತನ್ನ ವಧುವಿಗೆ ಎರಡು ಬೆಳ್ಳಿಯ ನಾಣ್ಯಗಳನ್ನು ನೀಡುವನು, ತನ್ನ ಸಮಾಜ ಬಾಂಧವರಿಗೆ ಆರು ಊಟ ಗಳನ್ನು ನೀಡುವನು. ಇದು ಹಿಂದೆ ನಡೆದು ಬರುತ್ತಿದ್ದ ಕೊರಗರ ವಿವಾಹ ಕ್ರಮ.

ಕೊರಗರಲ್ಲಿ ವಿವಾಹ ಒಪ್ಪಂದವಾದ ಮೇಲೆ ಹೆಣ್ಣಿಗೆ ತಾಮ್ರುಮುಂಗುರ ತೊಡಿಸುವ ಕ್ರಮ ಉಂಟು. ಹೆಣ್ಣಿಗೆ ವಿವಾಹದಲ್ಲಿ ಗಂಡು 1 ರೂ. ತೆರ

ಕೊಡುತ್ತಾನೆ. ಕೊರಗರಿಗೆ ವಿವಾಹಕ್ಕೆ ಶುಕ್ರವಾರವೂ ಪ್ರಶಸ್ತ ದಿನವೆಂದು ಪರಿಗಣಿಸುವರು. ಕೊರಗರಲ್ಲಿ ಹೆಣ್ಣು–ಗಂಡುಗಳು ಜನಿಸಿದ ದಿನಗಳಂದು ವಿವಾಹ ಮಾಡುವುದಿಲ್ಲ. ಗಂಡು ವಿವಾಹದಂದು ಹೆಣ್ಣಿಗೆ ಮಣಿಸರ ತೊಡಿಸುತ್ತಾನೆ. ಇದು ಕರಿಮಣಿ ಅಲ್ಲ. ಬದಲಿಗೆ ಬಣ್ಣಬಣ್ಣದ ಮಣಿಗಳ ಸರ ಅದರಲ್ಲಿ ತಾಳಿ ಇರುವುದಿಲ್ಲ. ಹೆಚ್ಚು ಹೆಚ್ಚು ಮಣಿಸರಗಳುಳ್ಳ ಕೊರಗರೇ ಶ್ರೀಮಂತರು ಎಂಬ ನಂಬಿಕೆ ಕೂಡಾ ಅವರಲ್ಲುಂಟು.

ಒಂದೇ ಬಳಿಗೆ ಸೇರಿದವರು ಕೊರಗರಲ್ಲೂ ಇತರರಂತೆ ವಿವಾಹವಾಗುವುದಿಲ್ಲ. ಅವರು ಸೋದರ ಸಂಬಂಧಿಗಳಾದ್ದರಿಂದ ಅಂಥ ವಿವಾಹ ನಿಷಿದ್ಧ. ಮದುವೆ ಸಂದರ್ಭದ ಊಟೋಪಚಾರಗಳಲ್ಲಿ ಕಿಂಚಿತ್ತೂ ಲೋಪವಾದರೂ ಕೊರಗರು ಸಹಿಸುವುದಿಲ್ಲ. ಅದನ್ನು ಗಂಭೀರ ಪ್ರಮಾದವೆಂದೇ ಪರಿಗಣಿಸಿ ದಂಡ ವಿಧಿಸುವುದೂ ಉಂಟು. ಈ ಊಟೋಪಚಾರಗಳಲ್ಲಿ ಕೊರಗರು ತಿನ್ನುವುದರಲ್ಲಿ ಕುಡಿಯುವುದರಲ್ಲಿ ಪರಸ್ಪರ ಸ್ಪರ್ಧಿಸುವುದೂ ಉಂಟು. ಅದು ಅವರ ಸಂತೋಷ ಕೂಟದ ಅವಿಚ್ಛಿನ್ನ ಭಾಗವಾಗಿರುವುದು.

ಇತರೇ ಗುಲಾಮ ಜಾತಿಗಳಲ್ಲಿ ಗಂಡು ಹೆಣ್ಣಿಗೆ ವಿವಾಹ ವಿಚ್ಛೇದನ ಸುಲಭವಾಗಿ ದಕ್ಕುವುದು. ಅಂಥ ವಿಚ್ಛೇದನಕ್ಕೆ ತಮ್ಮ ಸಮಾಜದ ಒಪ್ಪಿಗೆ ಸಿಕ್ಕರೆ ಸಾಕು. ಅಂಥ ಮಹಿಳೆಯರು ಮರು ವಿವಾಹವಾಗಲು ಅವಕಾಶವುಂಟು ಆದರೆ ಕೂರಗರಲ್ಲಿ ಕೇವಲ ಸಣ್ಣ ಪುಟ್ಟ ಕಾರಣಗಳಿಗಾಗಿ ಹುಟ್ಟಿಕೊಳ್ಳುವ ಭಿನ್ನಾಭಿಪ್ರಾಯಗಳಿಗಾಗಿ ವಿವಾಹ ವಿಚ್ಛೇದನ ದೊರಕುವುದಿಲ್ಲ. ಒಂದು ಗಂಡು–ಒಂದು ಹೆಣ್ಣಿನ ಸಂಬಂಧವೆ ಪವಿತ್ರವೆಂದು ಕೊರಗರು ನಂಬುವರು. ಆದ್ದರಿಂದ ಕೊರಗರಲ್ಲಿ ಮೊದಲ ಹೆಂಡತಿ ಗಟ್ಟಿಮುಟ್ಟಾಗಿ ಆರೋಗ್ಯವಿರುವಾಗಲೇ ಗಂಡು ಮರುಮದುವೆಯಾಗುವುದು ಸಾಧ್ಯವಿಲ್ಲ. ಆದರೆ ವಿಧುರ, ವಿದವೆಯೊಬ್ಬಳು ಮರು ಮದುವೆಯಾಗಬಹುದು. ಮರುಮದುವೆಯಲ್ಲಿ ಧಾರೆಯೆರೆಯುವುದು ಕೊರಗರಲ್ಲಿಲ್ಲ.

ಕೊರಗರ ವಿವಾಹ ಸಂಪ್ರಾದಾಯಗಳಲ್ಲಿ ವ್ಯಕ್ತಿ ಸ್ವಾತಂತ್ರ್ಯ, ನೈತಿಕತೆ, ಕೌಟುಂಬಿಕ ಭದ್ರತೆ, ಸರಳತೆಗೆ ಪ್ರಮುಖ ಸ್ಥಾನವಿದೆ. ಈ ದೃಷ್ಟಿಯಿಂದ ಕೊರಗರ ವಿವಾಹ ಸಂಪ್ರದಾಯ ದಲಿತ ಸಂಸ್ಕೃತಿಯ ಪ್ರಗತಿಪರತೆಯ

ಪ್ರಮುಖ ಲಕ್ಷಣವಾಗಿದೆ.

2.8—ಕೊರಗರ ನ್ಯಾಯ ಪದ್ಧತಿ:

ಕೊರಗ ಜನಾಂಗದವರು ತಮ್ಮದೇ ಆದ ವಿಶಿಷ್ಟ ನ್ಯಾಯದಾನ ವ್ಯವಸೆ ಹೊಂದಿದ್ದಾರೆ. ವಿವಿಧ ಬಗೆಯ ತಪ್ಪುಗಳಿಗೆ ನ್ಯಾಯಕ್ಕೆ ಕೂಡುವುದು ಎಲ್ಲಾ ಕೆಳವರ್ಗಗಳಲ್ಲಿ ನಡೆದು ಬಂದಿದೆ. ದೇವರ ಉತ್ಸವ, ಭೂತ ಕೋಲ, ಮದುವೆ ಸಂದರ್ಭಗಳಲ್ಲಿ ಕೂರಗರು ಒಂದೆಡೆ ಸೆರೆದಾಗ ಹಿಂದಿನ ಸಮಸ್ಯೆಗಳನ್ನು ಎತ್ತಿಕೊಂಡು ನ್ಯಾಯದಾನ ವಿಚಾರಣೆ ನಡೆಸುವದು ಕೂರಗರಲ್ಲಿ ವಾಡಿಕೆಯಾಗಿವೆ. ನ್ಯಾಯ ವಿಚಾರಣೆಯ ನೇತೃತ್ವವನ್ನು ಕೊರಗರ ಗುರಿಕಾರರು, ಹಿರಿಯರು ವಹಿಸುವುದು ರೂಢಿಯಲ್ಲಿದೆ.

ಕೊರಗರು ಸ್ವಭಾವತಃ ಬಹಳ ನಾಜೂಕಿನ ಸೂಕ್ಷ್ಮ ಜನ. ಅವರು ಚಿಕ್ಕ ಪುಟ್ಟ ತಪ್ಪುಗಳನ್ನು ಗಂಭೀರವಾಗಿ ತೆಗೆದುಕೊಳ್ಳುವುದುಂಟು. ಕೊರಗರ ನ್ಯಾಯಲಯದಲ್ಲಿ ವಿಚಾರಣೆಗೊಳಪಡುವ ತಪ್ಪುಗಳ ಮಾದರಿಗಳೆಂದರೆ:

1. ಹಬ್ಬ ಹರಿದಿನಗಳಲ್ಲಿ ಒಬ್ಬರ ಎಲೆಯ ಅನ್ನದ ಅಗುಳು ಇನ್ನೊಬ್ಬನ ಎಲೆಗೆ ಬೀಳುವುದು.
2. ಸೇಂದಿ ಸುರಿಯುವವನು ಅದನ್ನು ನೆಲಕ್ಕೆ ಕೈ ತಪ್ಪಿ ಚೆಲ್ಲುವುದ.
3. ಹೆಂಡತಿಯ ಒಪ್ಪಿಗೆಯಿಲ್ಲದೆ ಗಂಡನು ಮರು ವಿವಾಹವಾಗುವುದು.
4. ಹೆಣ್ಣು ವ್ಯಭಿಚಾರದಲ್ಲಿ ತೊಡಗುವುದು.
5. ಕೊರಗತನಿಯ ದೈವದ ಆರಾಧನೆಯನ್ನು ನಡೆಸದಿರುವುದು.
6. ಸಮೂಹ ನೃತ್ಯದಲ್ಲಿ ಪಾಲ್ಗೊಳ್ಳದಿರುವುದು.
7, ಕೊರಗರು ಭಿಕ್ಷೆಗಾಗಿ ಮೇಲ್ವರ್ಗದವರ ಮನೆಗಳನ್ನು ತಮ್ಮ ತಮ್ಮಲ್ಲಿಯೇ ಹಂಚಿಕೊಂಡಿರುತ್ತಾರೆ. ಈ ಕ್ರಮದ ಉಲ್ಲಂಘನೆಯೂ ತಪ್ಪಾಗುವುದು.

8. ಕೊರಗರು ಕೊಳಲು ಬಾರಿಸಲು ಬೇರೆ ಬೇರೆ ಸ್ಥಳಗಳಿಗೆ ಹೋಗುವ ಅವಕಾಶ ಮತ್ತು ಜವಾಬ್ದಾರಿಯನ್ನು ಅವರ ಗುರಿಕಾರ ತೀರ್ಮಾನಿಸಿ ನಿರ್ಣಯಿಸುವನು. ಆ ಪ್ರಕಾರ ಕೊರಗನು ನಡೆದುಕೊಳ್ಳದಿದ್ದರೆ ಗುರಿಕಾರನು ತಪ್ಪಿತಸ್ಥ ಕೊರಗನಿಗೆ ದಂಡ ವಿಧಿಸಬಹುದು. ದಂಡವನ್ನು ಹಣದ ರೂಪದಲ್ಲಿ ಅಥವಾ ಕೊರಗ ಸಮಾಜದ ಬಾಂಧವರಿಗೆ ಊಟ ಹಾಕುವ ಮೂಲಕ ಸಂದಾಯಿಸಬೇಕು.

ವ್ಯಭಿಚಾರ ಮಾಡಿದ ಹೆಣ್ಣೊಬ್ಬಳನ್ನು ವಿಚಾರಣೆಗೊಳಪಡಿಸಿ ದಂಡಿಸುವ ಕ್ರಮ ಈ ರೀತಿ ಇದೆ: ಹೆಣ್ಣು ದೇಹ ಸಂಬಂಧ ಹೊಂದಿದ ಗಂಡು ಅವಳಂತೆ ಕೆಳವರ್ಗಕ್ಕೆ ಸೇರಿದವನಾಗಿದ್ದರೆ ಆತನು ಆಕೆಯ ವಿವಾಹವಾಗಬೇಕು ಅಂಥ ಸಂದರ್ಭದಲ್ಲಿ ಹೆಣ್ಣನ್ನು ಶುದ್ಧೀಕರಣಗೊಳಿಸಲಾಗುವುದು ಆ ಕಾರ್ಯಕ್ಕಾಗಿ ಗಂಡು ತನ್ನ ಸ್ವಂತ ಖರ್ಚಿನಲ್ಲಿ ಗುಡಿಸಲನ್ನು ಕಟ್ಟಿ ಅವಳನ್ನು ಅದರೊಳಗಿರಿಸಬೇಕು. ಆಗ ಆ ಗುಡಿಸಲಿಗೆ ಬೆಂಕಿ ಹಚ್ಚಲಾಗುವುದು. ಆ ಹೆಣ್ಣು ಅಲ್ಲಿಂದ ತಪ್ಪಿಸಿಕೊಂಡು ಬೇರೆ ಸ್ಥಳಕ್ಕೆ ಓಡಿ ಹೋಗುವಳು. ಅಲ್ಲಿಯೂ ಅದೇ ರೀತಿ ಮಾಡಲಾಗುವುದು. ಹೀಗೆ ಏಳು ಸಲ ಹೆಣ್ಣನ್ನು ಶುದ್ಧೀಕರಿಸಲಾಗುವುದು. ಆಗ ಮಾತ್ರ ಆ ಹೆಣ್ಣು ಪ್ರಾಮಾಣಿಕಳೆಂದೂ ಮತ್ತು ವಿವಾಹ ಯೋಗ್ಯಳೆಂದೂ ಕೊರಗರು ಭಾವಿಸುತ್ತಾರೆ. ವಾಲ್‌ಹೌಸ್‌ನ ಪ್ರಕಾರ ತಪ್ಪಿತಸ್ಥ ಹೆಣ್ಣನ್ನು ನದಿಯ ದಡದಲ್ಲಿ ಉದ್ದಕ್ಕೆ ಸಾಲಾಗಿ ಕಟ್ಟಿದ ಏಳು ಗುಡಿಸಲುಗಳೊಳಗೆ ಹೊಗಲು ಬಿಡಲಾಗುವುದು. ಆಮೇಲೆ ಅವುಗಳಿಗೆ ಬೆಂಕಿ ಹಚ್ಚಲಾಗುವುದು. ಆಗ ಆ ಹೆಣ್ಣು ಜೋಂಬುಗಳನ್ನು ಹಿಡಿದುಕೊಂಡು ಅಲ್ಲಿಂದ ಜೀವಂತ ತಪ್ಪಿಸಿಕೊಳ್ಳಬೇಕು. ಆಗ ಆಕೆಯು ಪರಿಶುದ್ಧಳಾದಂತೆ.

ಶುದ್ಧೀಕರಣಕ್ಕೆ, ಪವಿತ್ರ ಕಾರ್ಯಗಳಿಗೆ ಅಗ್ನಿಯನ್ನು ಆರ್ಯರು ಮತ್ತು ದ್ರಾವಿಡರು ಇಬ್ಬರೂ ಬಳಸುವರು. ಆರ್ಯರು ಅಗ್ನಿಕುಂಡಕ್ಕೆ ಹಾಕಿ ತುಪ್ಪ ಎರೆದು ಜ್ವಾಲೆ ಎಬ್ಬಿಸಿ ಅಗ್ನಿದೇವನನ್ನು ಆರಾಧಿಸುವರು. ಕೊರಗರೂ ಸೇರಿದಂತೆ ದ್ರಾವಿಡರು ಅಗ್ನಿಯನ್ನು ಕೆಂಡದ ರೂಪದಲ್ಲಿ (ಕೊಂಡ ಹಾಯುವುದು) ಆರಾಧಿಸುತ್ತಾರೆ. ದ್ರಾವಿಡರು ಕೆಂಡದ ಬೂದಿ ಅರಿಶಿನ ಮೈಗೆ ಹಚ್ಚಿಕೊಂಡು ಶುದ್ಧರಾಗುವರು. ಈ ಕ್ರಮ ಆರ್ಯರಲ್ಲಿಲ್ಲ. ಹೀಗೆ ಕೊರಗರ

ಶುದ್ಧೀಕರಣ ಕ್ರಿಯೆಯು ದ್ರಾವಿಡ ಪರಂಪರೆಗೆ ಸೇರಿದ್ದು ತನ್ನದೇ ಆದ ವಿಶಿಷ್ಟತೆ ಪಡೆದಿದೆ. ಹೆಣ್ಣನ್ನು ಶುದ್ಧಿಕರಣಗೊಳಿಸುವುದು ಕುಟುಂಬ ವ್ಯವಸ್ಥೆಯಲ್ಲಿ ಶೀಲಕ್ಕಿರುವ ಪಾವಿತ್ರ್ಯತೆಯನ್ನು ಸಾರುವುದು. ಈ ಅರ್ಥದಲ್ಲಿ ಕೊರಗರದ್ದೂ ಹಿಂದೂ ಸಂಸ್ಕಾರವೇ.

ಕೊರಗರಲ್ಲಿ ತೀರಾ ಇತ್ತೀಚಿನವರೆಗೂ ಅವಿಭಕ್ತ ಕುಟುಂಬ ವ್ಯವಸ್ಥೆ ಗಟ್ಟಿಯಾಗಿ ಬೇರೂರಿತ್ತು. ಈ ಕಾರಣದಿಂದಾಗಿ ಆಯಾಯ ಅವಿಭಕ್ತ ಕುಟುಂಬ ಪರಂಪರೆಯ ಹಿರಿಯನೆ ಎಲ್ಲಾ ಬಗೆಯ ವಿಚಾರಗಳಲ್ಲೂ ತೀರ್ಮಾನ ನಿರ್ಣಯ ತೆಗೆದುಕೊಳ್ಳುವವನು. ಆತನ ಕುಟುಂಬದ ಇತರ ಸದಸ್ಯರಿಗೆ ಅವರು ಬುದ್ಧಿವಂತರಾಗಿದ್ದರೂ ನ್ಯಾಯ ವಿಚಾರಣೆಯಲ್ಲಿ ಕುಟುಂಬದ ಕಲಹಗಳು ಹಾಗೂ ಆಗು—ಹೋಗುಗಳಲ್ಲಿ ತೀರ್ಮಾನ ತೆಗೆದುಕೊಳ್ಳುವ ಹಕ್ಕು ಇರುವುದಿಲ್ಲ.

ತಪ್ಪಿತಸ್ಥನು ದಂಡ ತೆರುವ ಸ್ಥಿತಿಯಲ್ಲಿಲ್ಲದಿದ್ದರೆ ಅವನಿಗೆ ಹೆಚ್ಚಿನ ಕಾಲಾವಕಾಶ ಕೊಡಲಾಗುವುದು. ಅಥವಾ ತಪ್ಪಿತಸ್ಥನ ಪರವಾಗಿ ಆತನ ಧಣಿಯಾಗಲಿ, ನೆಂಟರಿಷ್ಟರಾಗಲಿ ದಂಡ ತೆರುವುದಕ್ಕೂ ಕೊರಗರಲ್ಲಿ ಅವಕಾಶವಿದೆ ಎಲ್ಲಾ ಸಾಂಪ್ರದಾಯಿಕ ನ್ಯಾಯ ವ್ಯವಸ್ಥೆಗಳು ಆಧುನಿಕತೆಯ ದಾಳಿಗೆ ಸಿಕ್ಕು ಕುಸಿಯುತ್ತಿರುವಂತೆ ಇಂದು ಕೊರಗರ ನ್ಯಾಯ ಪದ್ಧತಿಯೂ ಬಿರುಕು ಬಿಟ್ಟು ಕುಸಿಯುತ್ತಿದೆ

2.9.- ಕೊರಗರ ಮನರಂಜನೆ ಮತ್ತು ಸಂಗೀತ

ಕೊರಗರಲ್ಲಿ ತಮ್ಮದೇ ಆದ ವಿಶಿಷ್ಟ ವಾದ್ಯಗಳಿವೆ. 'ಡೋಲು' ಎಂಬುದು ಚರ್ಮದ ವಾದ್ಯ. ಇದರೊಂದಿಗೆ 'ಕರಂಡೆ' ಎಂಬುದು ಇನ್ನೊಂದು ವಾದ್ಯ. ಈ ಎರಡು ವಾದ್ಯಗಳಲ್ಲಿ ಡೋಲು ಇಮ್ಮುಖ ಚರ್ಮದ ವಾದ್ಯವಾಗಿದ್ದು, ಒಂದೆಡೆ ಗುಣಿಯಿಂದ (ಕೋಲು) ಇನ್ನೊಂದೆಡೆ ಕೈಯನ್ನು ಬಳಸಿ ನುಡಿಸುತ್ತಾರೆ. ಕರಂಡೆ ಏಕಮುಖ ಚರ್ಮದ ವಾದ್ಯ. ಇದನ್ನು ಗುಣಿಗಳಿಂದ ಬಾರಿಸಲಾಗುತ್ತದೆ. ಇವುಗಳಲ್ಲಿ ಸೇರುವ, ಅತ್ಯಂತ ಪ್ರಿಯ ವಾದ್ಯ ಕೊಳಲು ಇದು ಅಡ್ಡ ಕೊಳಲು. ಇವರಲ್ಲಿ ಕೊಳಲಿನ ತುದಿಯನ್ನು ಬಾಯಿಯಲ್ಲಿ ಹಿಡಿದು ಊದುವ

ಕೊಳಲು ಇಲ್ಲ. ತಮಗೆ ಇಂತಹದೇ ಅಡ್ಡ ಕೊಳಲೇ ಆಗಬೇಕು. ಎಂದು ಹೇಳಿ ಕಥೆಯೊಂದಿಗೆ ಕೊರಗತನಿಯನಿಗೆ ತಳಕು ಹಾಕುತ್ತಾರೆ. ಇತ್ತೀಚಿನ ದಿನಗಳಲ್ಲಿ ಕೈ ತಾಳಗಳನ್ನೂ ಈ ವಾದ್ಯಗಳೊಂದಿಗೆ ಬಳಸುವದು ಕಂಡು ಬರುತ್ತದೆ.

ಶುಭ ಮತ್ತು ಅಶುಭ, ಈ ಎರಡೂ ಬಗೆಯ ಕಾರ್ಯಕ್ರಮಗಳಲ್ಲಿ ಇವರ ಸಂಗೀತ ವಾದ್ಯಗಳು ಮೊಳಗುತ್ತವೆ. ಅಂದರೆ. ಹಬ್ಬ – ಹರಿದಿನಗಳಲ್ಲಿ ತನಿಯನ ಕೋಲದ ಸಂದರ್ಭದಲ್ಲಿ, ಯಾರಾದರೂ ಸತ್ತಾಗ – ಈ ವಾದ್ಯಗಳನ್ನೂ ನುಡಿಸಲಾಗುತ್ತದೆ. ಶುಭ ಸಂದರ್ಭದಲ್ಲಿ ನುಡಿಸುವ ಗತ್ತುಗಳು ಬೇರೆ, ದು:ಖದ ಸಂದರ್ಭದಲ್ಲಿ ಸೂಚಿಸುವ ಗತ್ತುಗಳು ಬೇರೆಯಾಗಿವೆ.

ಊರಿನ ಸಾಮೂಹಿಕವಾದ ಕಾರ್ಯಕ್ರಮಗಳಲ್ಲಿಯೂ ಇವರು ಭಾಗವಹಿಸುತ್ತಾರೆ. ಕಂಬಳದಂತಹ ಸಂದರ್ಭದಲ್ಲಿ ಇವರ ವಾದ್ಯಗಳ ನಾದ ಹರಿಯುತ್ತದೆ. ಆದರೆ ಆ ಸಂಭ್ರಮದ ಕೇಕೆಯ ಬಣ್ಣದಲ್ಲಿ ಇವರ ವಾದ್ಯಗಳ ನಾದ ಯೂರ ಕಿವಿಗೂ ಬೀಳುವುದಿಲ್ಲ. ಕಂಬಳದ ಗದ್ದೆಯಲ್ಲಿ ಜನರಿಲ್ಲದ ಯಾವುದೋ ಒಂದು ಮೂಲೆಯಲ್ಲಿ ಕುಳಿತು ಇವರು ವಾದ್ಯಗಳನ್ನು ನುಡಿಸುತ್ತಾರೆ. ಇಂತಹದೆ ಇನ್ನೊಂದು ಸಂದರ್ಭ ಭೂತಾರಾಧನೆಯಲ್ಲಿ ನೋಡಬಹುದು. ನೇಮದ ಸಂದರ್ಭದಲ್ಲಿ ಇವರು ಭೂತಾರಾಧನೆಯ ಗಡಿಪ್ರದೇಶದ ಒಂದು ಮೂಲೆಯಲ್ಲಿ ಕುಳಿತು ಅಥವಾ ಮರದಡಿಯಲ್ಲಿ ಕೂತು ವಾದ್ಯವನ್ನು ನುಡಿಸುತ್ತಾರೆ. ಭೂತಾರಾದನೆಯ ಸಂದರ್ಭದಲ್ಲಿ 'ಪುರುಷರು' (ಜೋಗಿಗಳು) ಭೂತಗಳ ನೃತ್ಯಕ್ಕೆ, ವಾದ್ಯಗಳನ್ನು ಹಿಮ್ಮೇಳವಾಗಿ ಒದಗಿಸುತ್ತಾರೆ. ಈ ಪುರುಷರು ವಾದ್ಯ ನುಡಿಸಲು ಪ್ರಾರಂಭಿಸಿದರೆ ದೂರದ ಗಡಿಯಲ್ಲಿ ಕುಳಿತ ಕೊರಗರೂ ಅವರ ಧ್ವನಿಯೊಂದಿಗೆ ವಾದ್ಯಗಳನ್ನು ನುಡಿಸುತ್ತಾರೆ. ಬೇರೆ ಪುರುಷರು ನಿಲ್ಲಿಸಿದಾಕ್ಷಣ ಇವರೂ ನಿಲ್ಲಿಸುತ್ತಾರೆ. ಸುಮಾರು ದೂರದಲ್ಲಿ ಕುಳಿತು ನುಡಿಸುವ ಇವರ ವಾದ್ಯಗಳ ನಾದ ಯಾರಿಗೂ ಕೇಳುವುದಿಲ್ಲ. ತಮ್ಮ ಸಂತೃಪ್ತಿಗಾಗಿಯೇ ಇವರು ನುಡಿಸುತ್ತಾರೆ. ಇವರ ಈ ಸಂಗೀತಕ್ಕೆ ಸಾರ್ವಜನಿಕ ಅಪೇಕ್ಷೆ ಕಡಿಮೆ ಎನ್ನುವುದಕ್ಕಿಂತ, ಇವರ ಸಂಗೀತಕ್ಕೆ ಬೆಲೆಯೇ ಇಲ್ಲವಂತೆ ಚಪ್ಪಾಳೆ ತಟ್ಟಿ ನಕ್ಕು ಬಿಡುತ್ತಾರೆ. ಕಂಬಳದ ಸಂದರ್ಭದಲ್ಲಿಯೂ ಇದೆ ಸ್ಥಿತಿ.

ಸಂಗೀತಗಾರರು ಯಾವುದೇ ಕಾರ್ಯಕ್ರಮಕ್ಕೆ ಹೋಗಬೇಕಾದರೆ ಕೊರಗರ ಗುರಿಕಾರನೇ ಸಂಗೀತಗಾರರನ್ನು ಆಯ್ಕೆ ಮಾಡಿ ಕಳುಹಿಸುತ್ತಾನೆ. ಯಾವ ಮನೆಯ ಹೆಣ್ಣಿಗೆ ಸೂತಕ ವಿರುತ್ತದೆಯೋ ಆ ಮನೆಯ ಸಂಗೀತಗಾರನನ್ನು ಯಾವುದೇ ಕಾರ್ಯಕ್ರಮಕ್ಕೆ ಕಳುಹಿಸುವುದಿಲ್ಲ. ಸೂತಕದ ಹೆಣ್ಣಿಗೆ ನೇರ ಸಂಬಂಧ ಹೊಂದಿದವರು ಆರಾಧನೆಯಲ್ಲಿ ವಾದ್ಯ ನುಡಿಸಬಾರದು ಎನ್ನುವ ನಂಬಿಕೆಯೂ ಇದೆ.

ಕೊರಗರ ಸಂಗೀತ ಕೀಳುಮಟ್ಟದ್ದೇನಲ್ಲ ಮತ್ತು ಬೇತಾಳದ ಸೂರಿನವರು ಎಂದಿಲ್ಲ. ಶಾಸ್ತ್ರೀಯವಾದ ಸಂಗೀತ ಅಲ್ಲದೆ ಹೋದರೂ ಅವರಿಗೆ ಅವರದೇ ಆದ ಸಂಗೀತದ ಗತ್ತುಗಳಿವೆ. ಒಂದೊಂದು ಸಂದರ್ಭಕ್ಕೆ ಒಂದೊಂದು ಬಗೆಯ ಗತ್ತು (ತಾಳ)ಗಳನ್ನು ನುಡಿಸುವುದು ಗಮನಿಸಿದರೆ ಅವರ ಪರಂಪರೆಯಲ್ಲಿಯ ತರಬೇತಿ ಎಷ್ಟು ಎನ್ನುವುದು ಗೊತ್ತಾಗುತ್ತದೆ. ಕೆಲವೆಡೆ ಇವರನ್ನು ಕರೆಯಿಸಿ ವಾದ್ಯ ನುಡಿಸಲು ಹೇಳಿದರೆ ಇನ್ನು ಕೆಲವೆಡೆ ಇವರು ತಾವಾಗಿಯೇ ಹೋಗಿ ವಾದ್ಯ ನುಡಿಸುತ್ತಾರೆ. 'ಅದು ನಮ್ಮ ಕರ್ತವ್ಯ' ಎಂದು ಅವರು ಭಾವಿಸುತ್ತಾರೆ. ಆ ಕೆಲಸ ನಾವು ಮಾಡದೆ ಹೋದರೆ 'ದೈವಗಳು ಮುನಿಯುತ್ತವೆ' ಎಂದು ಹೆದರುತ್ತಾರೆ. ಕರೆಯದಿದ್ದರೂ ಹೋಗಿ ವಾದ್ಯ ನುಡಿಸುವ ಸಂಪ್ರದಾಯವನ್ನು ಗಮನಕ್ಕೆ ತಂದು ಕೊಂಡರೆ, ಮೊದಲು ಆಯಾ ಸ್ಥಳದಲ್ಲಿ ಇವರೇ ವಾದ್ಯ ನುಡಿಸುತ್ತಿರಬೇಕು ಅಶುಬದ ಲಕ್ಷಣಗಳು ಇವರಿಗೆ ಆರೋಪವಾದ ನಂತರದ ಘಟ್ಟದಲ್ಲಿ ಇವರನ್ನು ಆ ಕೆಲಸದಿಂದ ತೆಗೆದು ಹಾಕಿರಬೇಕು. ಎಂಬ ಸಂದೇಹಗಳು ಬರುತ್ತವೆ. ಪುರುಷರು ಮೂಲತ: ಇಲ್ಲಿಯವರಲ್ಲ. ವಲಸೆ ಬಂದು ಅವರ ಸ್ಥಾನವನ್ನು ಆಕ್ರಮಿಸಿಕೊಂಡಿದ್ದಾರೆ.

ಈ ಕಾರಣಗಳಿಂದಾಗಿ ಪರಂಪರಾಗತವಾಗಿ ಬಂದ ಅವರ ಆ ಸಂಗೀತಕ್ಕೆ ಪ್ರೋತ್ಸಾಹ ಸಿಕ್ಕದೆ ಕ್ಷೀಣಿಸಿರ ಬೇಕು. ಸಂಗೀತಕ್ಕೆ ಭೇದ-ಭಾವವಿಲ್ಲ ಕುಲೀನನಾದರೂ ಅವನನ್ನು ಮೇಲಕ್ಕೆ ಎತ್ತುತ್ತದೆ.

ಉತ್ತರ ಕರ್ನಾಟಕದಲ್ಲಿ ಕೊರವರು ಎನ್ನುವ ಒಂದು ಜನಾಂಗವಿದ್ದು ಅವರೂ ವಾದ್ಯಗಳನ್ನು ನುಡಿಸುತ್ತಾರೆ. ಮತ್ತು ಬುಟ್ಟಿಗಳನ್ನು ಹೆಣೆಯುವ

ಕೆಲಸವನ್ನೇ ಮಾಡುತ್ತಾರೆ. ಮೊದಲು ಇವರು ಪರಂಪರೆಯ ವಾದ್ಯಗಳನ್ನು ನುಡಿಸುತ್ತಿದ್ದರು. ಅವುಗಳಿಗೆ ಬೆಲೆ ಸಿಕ್ಕದೇ ಹೋದಾಗ ತಮ್ಮ ವಾದ್ಯಗಳಲ್ಲಿ ಬದಲಾವಣೆಯನ್ನು ತಂದುಕೊಂಡರು. ಊರ ಎಲ್ಲ ಜನತೆಯ ಕಾರ್ಯಕ್ರಮದಲ್ಲಿ ಇವರು ಭಾಗವಹಿಸುತ್ತಾರೆ. ಜಾತಿಯಿಂದ ಕೀಳಾದರೂ ಸಂಗೀತದಿಂದ ಅವರಿಗೆ ಸಿಕ್ಕ ಸ್ಥಾನ ದೊಡ್ಡದು. ಕೊರವರಿಗೂ – ಕೊರಗರಿಗೂ ಹೆಚ್ಚಿನ ಸಾಮ್ಯತೆಗಳು ಕಂಡು ಬರುತ್ತವೆ. ಆದರೆ ಇಲ್ಲಿಯು ಕೊರಗರು ಸಂಗೀತ ಪರಂಪರೆಯಲ್ಲಿ ಮೇಲು ವರ್ಗದವರಿಂದ ವಂಚಿತರಾಗಿದ್ದಾರೆ. ಇವರಿಗೆ ಆಧುನಿಕ ವಾದ್ಯಗಳ ಸೌಕರ್ಯ ವನ್ನು ಒದಗಿಸಿ ಕೊಟ್ಟು ಮೇಲೆತ್ತಲೂ ಮತ್ತು ಸಮಾಜದಲ್ಲಿ ಹೆಚ್ಚಿನ ಸ್ಥಾನ-ಮಾನ ದೊರಕಿಸಿ ಕೊಡಲು ಸಾಧ್ಯವಿದೆ. ಈ ಹಿನ್ನೆಲೆಯಲ್ಲಿ ಪ್ರಯತ್ನಗಳು ನಡೆದರೆ ಅವರು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಎರಡೂ ದೆಸೆಗಳಿಂದ ತೀವ್ರತರವಾದ ಬೆಳವಣಿಗೆ ಹೊಂದಲು ಸಾಧ್ಯವಿದೆ.

ಕೊರಗರು ಮನರಂಜನೆಗೆ ಸಂಗೀತವನ್ನೂ ಬಳಸಿಕೊಳ್ಳುತ್ತಾರೆ. ಕೆಲ ಸಂದರ್ಭಗಳಲ್ಲಿ ಮೋಜಿಗಾಗಿ ಅನ್ಯಜಾತಿಯವರೂ ಇವರ ಸಂಗೀತ ಕೇಳುವುದಕ್ಕಾಗಿ ಕರೆಯಿಸುತ್ತಾರೆ. ಆದರೆ ಅಲ್ಲಿ ಗಂಭೀರತೆ ಕಡಿಮೆ. ಇವರಲ್ಲಿ ಪ್ರತ್ಯೇಕವಾಗಿ ಮನರಂಜನೆಯ ಪರಿಕರಗಳು ಇರುವುದು ಕಡಿಮೆ. ಮೋಜಿನ ಮತ್ತು ಬಲಿಯ ಸಮಸ್ಯೆಯ ಆಟಗಳು ಇವರಲ್ಲಿ ಬಳಕೆಯಲ್ಲಿವೆ. ಇದಲ್ಲದೆ ಚೌಕಾಬಾರ ಆಟದ ಮನೆಗಳನ್ನು ಬರೆದು ಆಡುವ ರೀತಿಯೂ ಇವರಲ್ಲಿ ಕಂಡು ಬರುತ್ತದೆ. ಡೋಲಿನೊಂದಿಗೆ ಇವರ ಮಕ್ಕಳು ಹಾಡಿ ಕುಣಿಯುವ ಬಗೆ ಹೆಚ್ಚು ಬಳಕೆಯಲ್ಲಿದೆ. ಈಗಾಲೇ ಎಲ್ಲ ಬರಹಗಾರರೂ ಈ ವಿಷಯವನ್ನು ಗುರುತಿಸಿದ್ದಾರೆ

2.10 ಕೊರಗರ ಭಾಷೆ:

ಕೊರಗ ಜನಾಂಗದವರು ತಮ್ಮ ತಮ್ಮ ಮನೆಗಳಲ್ಲಿ ಮಾತನಾಡುವ ಭಾಷೆಯನ್ನು ಆ ಜನಾಂಗದ ಹೆಸರಿನಿಂದಲೇ 'ಕೊರಗ' ಎಂದು ಕರೆಯಲಾಗುತ್ತದೆ. ಕೊರಗ ಭಾಷೆಯು ದ್ರಾವಿಡ ಭಾಷಾ ವರ್ಗಕ್ಕೆ ಸೇರಿದುದಾಗಿದೆ. ಸರ್ವೇ ಸಾಮಾನ್ಯವಾಗಿ ಕೊರಗರು ದ್ವಿಭಾಷಿಗಳು ಹಾಗೂ ಮೂಡು ಕೊರಗರು ಮಾತ್ರ ಬಹು ಭಾಷಿಗಳಾಗಿದ್ದಾರೆ. ಅಂದರೆ ಕೊರಗರು ವ್ಯಾವಹಾರಿಕ ಜೀವನದಲ್ಲಿ ಹೊರಗೆ ತುಳು, ಕನ್ನಡವನ್ನು ಬಳಸುವರು, ಮನೆಯಲ್ಲಿ ತಮ್ಮದೇ ಆದ ಕೊರಗ

ಭಾಷೆಯನ್ನು ಮಾತನಾಡುವರು ತಮ್ಮ ಕೊರಗ ಭಾಷೆಯು ತುಳು, ತಮಿಳು, ಕನ್ನಡ ಮತ್ತು ಮಲಯಾಳ ಮುಂತಾದ ದ್ರಾವಿಡ ಭಾಷೆಗಳ ಸಂಮಿಶ್ರಣದಿಂದಾದುದಾಗಿದೆ ಎಂದು ನಂಬುತ್ತಾರೆ

ಕೊರಗರು ತಮ್ಮ ಭಾಷೆಯನ್ನು ಇತರರಿಗೆ ಕಲಿಸುವುದಿಲ್ಲ. ಇತರರು ಕೊರಗರೊಂದಿಗೆ ಅವರು ದಲಿತರೆಂಬ ಕಾರಣಕ್ಕೆ ಬೆರೆಯುವುದಿಲ್ಲ. ಹೀಗಾಗಿ ಕೊರಗರು ಬೇರೆ ಜನಾಂಗದವರೆದುರಿಗೆ ತಮ್ಮ ಭಾಷೆಯನ್ನಾಡುವುದಿಲ್ಲ. ಈ ವಿಷಯದಲ್ಲಿ ಕೊರಗರು ಸಂಕೋಚ ಸ್ವಭಾವದವರು. ಕೊರಗರನ್ನು ಅವರ ಭಾಷೆಯ ಬಗೆಗೆ ವಿಚಾರಿಸಿದರೆ ಅವರಿಗೆ ಬಹಳ ಕೋಪ ಬರುವುದೆಂದು ವಾಲೆಹೌಸ್ ಒಂದು ಶತಮಾನದ ಹಿಂದೆಯೇ ಬರೆದಿದ್ದಾರೆ ಅಂಥ ಸಂದರ್ಭಗಳಲ್ಲಿ ಕೊರಗನೊಬ್ಬನು ಬಹಳ ವಿಚಿತ್ರವಾಗಿ ವರ್ತಿಸುವನು ಎನ್ನುವುದು ವಾಲೆಹೌಸ್‌ರವರ ಅನುಭವ. ಹೀಗಾಗಿ ತೀರಾ ಇತ್ತೀಚಿನವರೆಗೆ ಕೊರಗ ಭಾಷೆಯ ವೈಜ್ಞಾನಿಕ ಅಧ್ಯಯನ ಸಾಧ್ಯವಾಗಿರಲ್ಲಿಲ್ಲ.

ಕೊರಗ ಭಾಷೆಯನ್ನು ಮೊತ್ತ ಮೊದಲಿಗೆ ಗುರುತಿಸಿ ಅಧ್ಯಯನ ಮಾಡಲೆತ್ನಿಸಿದವರು ಬ್ರಿಟಿಷ್ ಅಧಿಕಾರಿಗಳು. 19ನೇ ಶತಮಾನದ ಕೊನೆಯ ಭಾಗದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸುಮಾರು ಒಂದು ಸಾವಿರದಷ್ಟು ಕೊರಗರು ಕೊರಗ ಭಾಷೆಯನ್ನಾಡುತ್ತಿದ್ದರು. ಜನಗಣತಿ ಅಧಿಕಾರಿಗಳು ಕ್ರಿ. ಶ. 1881 ರಿಂದಲೂ ಕೊರಗ ಭಾಷೆಯನ್ನು ತುಳು ಭಾಷೆಯ ಉಪಭಾಷೆಯ ರೂಪವೆಂದೇ ಪರಿಗಣಿಸುತ್ತಿದ್ದಾರೆ. ಆದರೆ ತೀರಾ ಇತ್ತೀಚೆಗೆ ಡಾ. ಡಿ. ಎಸ್. ಎನ್. ಭಟ್ (1971) ಎಂಬವರು ನಡೆಸಿದ ಕ್ಷೇತ್ರಕಾರ್ಯ ಆಧರಿಸಿದ ಅಧ್ಯಯನದಿಂದ ಮೇಲ್ಕಂಡ ಅಭಿಪ್ರಾಯವನ್ನು ಬದಲಾಯಿಸಬೇಕಾಗುವುದು. ಡಾ। ಭಟ್‌ರವರ ಅಧ್ಯಯನವು ಕೊರಗ ಭಾಷೆಯು ಸ್ವತಂತ್ರವಾದ ದ್ರಾವಿಡ ವರ್ಗದ ವಿಶಿಷ್ಟ ಭಾಷೆಯಾಗಿದ್ದು ಅದು ಮೂರು ಉಪಭಾಷಾ ಸ್ವರೂಪಗಳನ್ನು ತನ್ನ ಗರ್ಭದಲ್ಲಡಗಿಸಿಕೊಂಡಿದೆ; ಹಾಗು ಕೊರಗ ಭಾಷೆಯು ತುಳವಿನೊಂದಿಗೆ ಹೊಂದಿರುವ ಸಂಬಂಧವು ಅಲ್ಪಾವೂ ಮತ್ತು ದೂರ ಸ್ವರೂಪದ್ದೂ ಆಗಿದೆ ಎನ್ನುವುದನ್ನು ಪ್ರತಿಪಾದಿಸಿದೆ.

ಕೊರಗ ಭಾಷೆಗೆ ಸ್ವತಂತ್ರ ಅಸ್ತಿತ್ವವಿದೆ. ಅದು ದ್ರಾವಿಡ ಭಾಷಾ

ವರ್ಗಕ್ಕೆ ಸೇರಿದ ಪ್ರತ್ಯೇಕ ಲಿಪಿ ಇಲ್ಲದ ಭಾಷೆ. ಕೊರಗರಲ್ಲಿ ಸುಶಿಕ್ಷಿತರಿಲ್ಲವೇ ಇಲ್ಲದ ಕಾರಣ ಕೊರಗ ಭಾಷೆಯನ್ನು ಬರೆಯಲು ಬಳಸಲಾಗುತ್ತಿಲ್ಲ. ನಮಗೆ ತಿಳಿದು ಬಂದ ಪ್ರಕಾರ ಕೊರಗ ಜನಾಂಗದಲ್ಲೇ ಕೇವಲ ಇಬ್ಬರು ಮೂವರು ವಿದ್ಯಾವಂತರಿದ್ದಾರೆ. ಅವರು ಸಿಂಡಿಕೇಟ್ ಬ್ಯಾಂಕಿನಲ್ಲಿ ಮತ್ತು ಸರ್ಕಾರದ ಯೋಜನಾ ಇಲಾಖೆಯಲ್ಲಿದ್ದಾರೆ. ಹಾಗು ಉಡುಪಿ—ಪುತ್ತೂರಿನ ಹನುಮಂತನಗರದ ಒಬ್ಬ ಯುವಕ ಪದವಿ ತರಗತಿಯಲ್ಲಿ ಕಲಿಯುತ್ತಿದ್ದಾನೆ. ಹೀಗಾಗಿ ಕೊರಗರು ತಮ್ಮ ಭಾಷೆಯನ್ನು ಬರೆಯಲು ಕನ್ನಡ ಅಥವಾ ಬೇರೆ ಯಾವುದೇ ಭಾಷೆಯನ್ನು ಬಳಸುತ್ತಾರೆಯೇ ಎನ್ನುವುದನ್ನು ಭವಿಷ್ಯವೇ ಹೇಳಬೇಕು.

"ಕೊರಗ ಭಾಷೆ ಮತ್ತು ತುಳು ಭಾಷೆ ನಡುವಣ ಸಂಬಂಧವು ಬಹಳ ಕ್ಷೀಣವಾದದು. ಕೊರಗ ಭಾಷೆ ಮತ್ತು ಇತರೆ ದ್ರಾವಿಡ ಭಾಷೆಗಳ ನಡುವಣ ಸಂಬಂಧವು ಮೇಲ್ನೋಟಕ್ಕೆ ಎದ್ದು ಕಾಣುವಂಥ ಸಂಬಂಧವಾಗಿದೆ. ಆ ಸಂಬಂಧವು ತುಳು ಕನ್ನಡದೊಂದಿಗೆ ಅಥವಾ ಮಲಯಾಳ ಮತ್ತು ತಮಿಳು ನಡುವಣ ಸಂಬಂಧಗಳಿಗಿಂತ ಮಿಗಿಲಾದುದೇನಲ್ಲ. ಆದ್ದರಿಂದ ಕೊರಗ ಭಾಷೆಯನ್ನು ಒಂದು ಸ್ವತಂತ್ರ ದ್ರಾವಿಡ ಭಾಷೆಯಾಗಿಯೇ ಗುರುತಿಸುವುದು ಸೂಕ್ತ; ಅದನ್ನು ತುಳುವಿನ ಅಥವಾ ಇತರೆ ಯಾವುದೇ ಭಾಷೆಯ ಉಪಭಾಷೆಯಾಗಿ ಪರಿಗಣಿಸಬಾರದು." ಹೀಗೆ ಕ್ರಿ.ಶ 1881 ರಲ್ಲಿ ದಕ್ಷಿಣ ಕನ್ನಡದ ಜಿಲ್ಲಾಧಿಕಾರಿಯೂ ಮತ್ತು ಜನಗಣತಿ ಮುಖ್ಯಸ್ಥನೂ ಆಗಿದ್ದ ಬ್ರೂಡಿಯು ತನ್ನ ಮೇಲಾಧಿಕಾರಿ ಮದ್ರಾಸಿನಲ್ಲಿದ್ದ ಸ್ಟೂವರ್ಟ್‌ರವರಿಗೆ ಬರೆದು ತಿಳಿಸಿದ್ದಾನೆ. ಕೊರಗ ಭಾಷೆಯ ಬಗೆಗೆ ಆಸಕ್ತಿ ತಳೆದ ಸ್ಟೂವರ್ಟ್ ದಕ್ಷಿಣ ಕನ್ನಡದಿಂದ ಕೊರಗ ಭಾಷೆ ಕುರಿತು ಹೆಚ್ಚು ಹೆಚ್ಚು ವಿವರಗಳನ್ನು ತರಿಸಿಕೊಂಡು ಮುಂದೆ ಅವುಗಳನ್ನು ತಾನೇ ಸಂಪಾದಿಸಿ ಪ್ರಕಟಿಸಿದ ಮ್ಯಾನ್ಯುಯಲ್ ಅಫ್ ದಿ ಸೌತ್ ಕೆನರಾ ಡಿಸ್ಟ್ರಿಕ್ಟ್‌ನಲ್ಲಿ ದಾಖಲಿಸಿದ್ದಾನೆ. ಸ್ಟೂವರ್ಟ್‌ಗೆ ಕಳುಹಿಸಲಾದ ವರದಿಯಲ್ಲಿದ್ದ ಕೊರಗ ಭಾಷಾ ಪದ ಸಂಪತ್ತು ಅಪಾರವಾಗಿ ತುಳು ಪದ ಸಂಪತ್ತಿನಿಂದಲೇ ಕೂಡಿತ್ತು. ಹೀಗಾಗಿ ಸ್ಟೂವರ್ಟ್ ಕೊರಗ ಭಾಷೆಯು ತುಳುವಿನ ಉಪಭಾಷಾ ರೂಪವಾಗಿದ್ದು ಆದು ಭಾಷೆಯ ಸ್ತರದಲ್ಲೇ ಉಳಿದುಬಿಟ್ಟಿದೆ ಎಂದು ತಿಳಿಸಿದನು. ತಾನು ಈ ನಿರ್ಣಯಕ್ಕೆ ಬಹಳ ಅನುಮಾನದಿಂದಲೇ

ಬಂದಿದ್ದೇನೆ; ಆದರೆ ದ್ರಾವಿಡ ಭಾಷಾ ವರ್ಗಕ್ಕೆ ಇನ್ನೊಂದು ಹೊಸ ಭಾಷೆಯನ್ನು (ಕೊರಗ) ಸೇರ್ಪಡೆಗೊಳಿಸಲು ಇನ್ನೂ ಹೆಚ್ಚಿನ ಅಧ್ಯಯನ ಮತ್ತು ಕ್ಷೇತ್ರ ಅಗತ್ಯವಾಗಿದೆ ಎಂದೂ ಅಂದು ಸ್ಟೂವರ್ಟ್ ಬರೆದನು.

ಕೊರಗರ ಭಾಷೆಯನ್ನು ಅನೇಕ ಉಪಭಾಷೆಗಳಾಗಿ ವರ್ಗೀಕರಿಸುವ ಪ್ರಯತ್ನವನ್ನು ಭೌಗೋಳಿಕ ಮತ್ತು ಸಾಮಾಜಿಕ ಅಂಶಗಳ ಆಧಾರದಲ್ಲಿ ನಡೆಸಲಾಗಿದೆ. ಡಾ. ಡಿ. ಎಸ್. ಎನ್. ಭಟ್‌ರವರು ಪ್ರಕಟಿಸಿರುವ 'The Koraga Language' (1971) ಕೃತಿಯಲ್ಲಿ ಕೊರಗ ಭಾಷೆ ಮೂರು ಬಗೆಯ ಪ್ರಕಾರಗಳನ್ನು ಗುರುತಿಸಿ ಭಾಷಾಶಾಸ್ತ್ರದ ವೈಜ್ಞಾನಿಕ ನೆಲೆಯಲ್ಲಿ ಅಭ್ಯಸಿಸುವ ಪ್ರಯತ್ನ ನಡೆಸಿದ್ದಾರೆ. ಇದೊಂದೇ ಇದುವರೆಗೆ ನಡೆದಿರುವ ಕೊರಗ ಭಾಷೆ ಕುರಿತ ವೈಜ್ಞಾನಿಕ ಅಧ್ಯಯನ ಪ್ರಯತ್ನವಾಗಿದೆ. ಡಾ. ಭಟ್ ಗುರುತಿಸಿರುವ ಕೊರಗ ಉಪಭಾಷೆಗಳೆಂದರೆ-'ಒಂಟಿ ಕೊರಗ' 'ತಪ್ಪು ಕೊರಗ' ಮತ್ತು ಮೂಡು ಕೊರಗ-ಆಗಿವೆ. ಈ ಮೂರು ಬಗೆಯ ಕೊರಗ ಭಾಷೆಗಳನ್ನಾಡುವ ಕೊರಗರು ಉಡುಪಿ ತಾಲ್ಲೂಕು, ಹೆಬ್ರಿ ಮತ್ತು ಕುಂದಾಪುರ ತಾಲ್ಲೂಕಿನ ಹಳ್ಳಿಗಳಲ್ಲಿ ಈಗಲೂ ಇದ್ದಾರೆ, ಈ ಸ್ಥಳಗಳಿಂದಲೇ ಮಾಹಿತಿ ನೀಡಿದಾರರನ್ನೂ ಡಾ. ಭಟ್ ತಮ್ಮ ಅಧ್ಯಯನಕ್ಕೆ ಆಯ್ಕೆ ಮಾಡಿದ್ದಾರೆ. ಕುಂದಾಪುರ ತಾಲ್ಲೂಕಿನ ಉತ್ತರ ಭಾಗದ ಕಾಡುಗಳಲ್ಲಿ ಮತ್ತು ಕಣಿವೆಯಂಥ ಪ್ರದೇಶ ಬೆಟ್ಟಗುಡ್ಡಗಳ ಇಳಿಜಾರು ಪ್ರದೇಶಗಳಲ್ಲಿ ವಾಸಿಸಿರುವ ಕೊರಗರನ್ನು ಸಂಪರ್ಕಿಸಿ ಕ್ಷೇತ್ರ ಕಾರ್ಯ ನಡೆಸಿದರೆ ಕೊರಗ ಭಾಷೆಯ ಇನ್ನೂ ಬೇರೆ ಬೇರೆ ಬಗೆಗಳು ಕಂಡು ಬರಬಹುದಾಗಿದೆ.

ಡಾ. ಭಟ್ ತಮ್ಮ ಅಧ್ಯಯನದಿಂದ ಒಂಟಿ ಕೊರಗ ಮತ್ತು ತುಳು ಭಾಷಾ ಪ್ರಭೇದದ ನಡುವೆ ಹಾಗೂ ಮೂಡು ಕೊರಗ ಮತ್ತು ಕನ್ನಡ ಭಾಷೆಗಳ ನಡುವೆ ಹೆಚ್ಚಿನ ನಂಟು ಇರುವುದನ್ನು ಗುರುತಿಸಿದ್ದಾರೆ. ಈ ಸಂಬಂಧವು ಆಯಾಯ ಭಾಷೆಗಳ ಕೊಡು ಕೊಳ್ಳುವಿಕೆಯ ಅಂತರ್ಗತ ಶಕ್ತಿಯಿಂದ ಮೂಡಿದುದಲ್ಲ; ಬದಲಾಗಿ ಒಂಟಿ ಕೊರಗ ಮತ್ತು ಮೂಡು ಕೊರಗ ಭಾಷೆಗಳನ್ನಾಡುವ ಕೊರಗರು ದ್ವಿಭಾಷಿಗಳಾಗಿರುವುದರಿಂದ ಮೂಡಿ ಬಂದುದಾಗಿದೆ. ಎನ್ನುತ್ತಾರೆ. ಇದಕ್ಕೆ ಕಾರಣ ಒಂಟಿ ಕೊರಗ

ಭಾಷೆಯನ್ನಾಡುವ ಕೊರಗರು ವಾಸಿಸುವ ಉಡುಪಿ ತಾಲೂಕಿನಲ್ಲಿ ತುಳುವಿನದೇ ಮೇಲುಗೈ. ಮುಂಡು ಕೊರಗ ಭಾಷೆಯನ್ನಾಡುವ ಕೊರಗರಿರುವ ಕುಂದಾಪುರ ಪ್ರದೇಶದಲ್ಲಿ ಕನ್ನಡದ್ದೇ ಮೇಲುಗೈ. ತಾವು ವಾಸಿಸುವ ಸ್ಥಳದ ಜನ ಭಾಷೆಯನ್ನೇ ಇತರರೊಂದಿಗಿನ ವ್ಯವಹಾರಿಕ ಸಂಬಂಧಕ್ಕೆ ಕೊರಗರು ಅಳವಡಿಸಿ ಕೊಳ್ಳುತ್ತಾರೆ. ಪಾಮುಂಜೂರು, ಕಾರ್ಕಳ ಪೇಟೆ ಮತ್ತು ಮೂಡುಬಿದಿರೆಯ ಪೂಸ್ಸಿಕಟ್ಟೆಯ ಕೊರಗರನ್ನು ಅವರ ಭಾಷೆಯ ಬಗೆಗೆ ನಾವು ಕೇಳಿದಾಗ ತಾವು ತುಳು ಭಾಷಿಕರೆಂದೇ ಅವರು ಉತ್ತರಿಸಿದರು. ಕೊರಗರು ದ್ವಿಭಾಷಿಗಳಾಗಿ ಸಾವಿರಾರು ವರ್ಷಗಳಿಂದಲೇ ಉಳಿದು ಬೆಳೆದು ಬಂದಿದ್ದಾರೆ. ಹೀಗಾಗಿ ಮುಂಡು ಕೊರಗ ಭಾಷೆಯು ಕನ್ನಡದಿಂದಲೂ, ಒಂಟಿ ಕೊರಗ ಭಾಷೆಯು ತುಳುವಿನಿಂದಲೂ ಬೆಳೆದಿವೆ. ಆದ್ದರಿಂದ ಕೊರಗ ಭಾಷೆಯ ಉಪ ಬಗೆಗಳ ಮೇಲೆ ದ್ರಾವಿಡ ಭಾಷೆಗಳಾದ ಕನ್ನಡ ಮತ್ತು ತುಳುವಿನ ಪ್ರಭಾವ ಗಾಢವಾದುದಾಗಿದೆ. ಪರಿಣಾಮವಾಗಿ ಕೊರಗ ಭಾಷೆಯ ಪದಸಂಪತ್ತಿನಲ್ಲಿ ಯಾವುದು ಕೊರಗ, ಯಾವುದ ಕನ್ನಡ, ಯಾವುದು ತುಳು ಎಂದು ಗುರುತಿಸುವ ಕಾರ್ಯ ಬಹಳ ಸಂಕೀರ್ಣವಾದುದಾಗುವುದು. ಈ ಹಿನ್ನಲೆಯಲ್ಲಿ ಕೊರಗ ಭಾಷೆಯು ಭಾಷಾ ಪಂಡಿತರಿಗೆ, ಸಂಶೋಧನೆಗೆ ಒಳ್ಳೆಯ ವಸ್ತುವಾಗಬಲ್ಲುದಾಗಿದೆ.

ಹೀಗಾಗಿ ಕೊರಗ ಭಾಷೆ ಮತ್ತು ಇತರ ದ್ರಾವಿಡ ಭಾಷೆಗಳ ನಡುವಣ ಸ್ಪಷ್ಟ ಸಂಬಂಧವನ್ನು ಗ್ರಹಿಸುವುದೂ, ಗುರುತಿಸುವುದು ಕಷ್ಟ. ಈ ಬಗೆಯ ಸಮಸ್ಯೆಯು ಎಲ್ಲಾ ದ್ವಿಭಾಷಾ ಜನರ ಮೂಲಭಾಷೆಯ ಸಂದರ್ಭದಲ್ಲಿ ಸಾರ್ವತ್ರಿಕವಾಗಿ ಕಂಡು ಬರುವುದು.

ಕೊರಗ ಭಾಷೆಯು ಪದಸಂಪತ್ತಿನ ದೃಷ್ಟಿಯಿಂದ ದಕ್ಷಿಣ ಭಾರತದ ದ್ರಾವಿಡ ಭಾಷೆಗಳೊಂದಿಗೆ ಹೆಣೆದುಕೊಂಡಿದ್ದರೂ, ವ್ಯಾಕರಣದ ದೃಷ್ಟಿಯಿಂದ ಉತ್ತರ ದ್ರಾವಿಡ ಭಾಷಾ ವರ್ಗದೊಂದಿಗೆ—ಕುಡು, ಮಾಲ್ತೋ ಮತು ಬ್ರಾಹುಯಿ–ಹೆಣೆದುಕೊಂಡಿದೆ. ಈ ಅಂಶವು ವಿಲಕ್ಷಣವಾಗಿ ಎದ್ದು ತೋರುವುದು. ಕೊರಗ ಭಾಷೆಯ ಮೂರು ಒಳಬಗೆಗಳನ್ನು ಹೀಗೆ ವಿವರಿಸಬಹುದಾಗಿದೆ.

ಒಂಟಿ ಕೊರಗ (ONTY KORAGA)

ಕೊರಗ ಭಾಷೆಯ ಮೂರು ಪ್ರಮುಖ ಬಗೆಗಳಲ್ಲಿ "ಒಂಟಿ ಕೊರಗ" ಒಂದು. ಈ ಕೊರಗ ಭಾಷೆ ಉಡುಪಿಯ ಸುತ್ತಮುತ್ತ ವಾಸವಾಗಿರುವ ಕೊರಗರಲ್ಲಿ ಬಳಕೆಯಲ್ಲಿದೆ. ಈ ಭಾಷೆಯನ್ನಾಡುವ ಕೊರಗರೆಲ್ಲಾ ದ್ವಿಭಾಷಿಗಳಾಗಿದ್ದು, ಅವರು ತುಳುವಿನಲ್ಲಿ ಸಲೀಸಾಗಿ ಮಾತನಾಡುವವರಾಗಿದ್ದಾರೆ. ಈ ವಿಚಾರದ ಪ್ರಭಾವವನ್ನು ಒಂಟಿ ಕೊರಗ ಭಾಷೆಯಲ್ಲಿ ಸಮೃದ್ಧವಾಗಿ ಕಂಡು ಬರುವ ತುಳು ಪದಸಂಪತ್ತಿನಲ್ಲಿ ಗುರುತಿಸಬಹುದು.

1. ಭಾಷಾ ಪ್ರಯೋಗ:

1.1. ಭಾಷೆಯ ಆವಿಷ್ಕಾರ

ಸ್ವರಗಳು :	ವ್ಯಂಜನಗಳು :
ಐ. ಐ. ಐ. ಉ. ಊ	ಪ. ಟ .ಟ. ಕ. ಕ.
ಇ. ಇ. ಅ. ಅ. ಒ. ಒ.	ಬ ಡ ಡ. ಜ. ಗ.
	ಮ ನ. ರ. ವ. ರ. ಯ.

ವಿರುದ್ಧ ಪದಗಳು

ಸ್ವರಗಳು : ಉದ್ದ	ದ:ತಿ ನೆಗೆಯುವುದು, ದಾಟುವುದು.
ದಂತಿ ; ಬೆದರುವುದು.	
ತಿನಿ ; ತಿನ್ನುವುದು.	ತಿ : ರಿ ಮಾಡಲು ಸಾಧ್ಯವಾಗುವುದು.
ಕುಂಕು ; ಚಿವುಟುವುದು.	ತುಂ:ಕು : ಓಲಾಡು
ಗೆದ್ದು : ಗೆಲ್ಲುವುದು.	ಗೆ:ರ್‌ಪು ಎತ್ತುವುದು.
ದೊರಪು: ಕೆಳಗೆ ಸುರಿಯುವುದು	ಮೊ:ರ್‌ಪಿ : ಕಲಸು.

1.2 ಸ್ವರಗಳು : ಗುಣ

ಅರಿ: ಆಳುವುದು.	ಎರು : ನಿನ್ನೆ
ಇಕ್ಕಿ: ಹೀಗೆ	ಇಕ್ಕಿ ; ಹೇಗೆ
ಉಟ್ಟು : ಇದು	ಒತ್ತು : ಒತ್ತುವುದು
ಅದ್ದಿ : ಅವಳು	ಒಡ್ಡು : ಯೂವುದು

1.3 ವ್ಯಂಜನಗಳು

ಕಡಿ ; ಅರೆಯುವುದು	ಕಡ್ಡಿ :ಬೇಗನೆ ತೆಗೆ.
ಸೋರೆ : ಸೋರೆಕಾಯಿ	ಕೊರ್ರು: ಕೊಲ್ಲು.
ನಿಕಿಲಿ : ನೀವು	ಗೆಕ್ಕಿಲಿ: ಕುತ್ತಿಗೆ.
ಕಾಲಿ : ತೆಗೆ	ನಳ್ಳಿ: ಕುಳಿ.
ಪೋನ :ಹಿಂಡು	ಅನ್ನ: ನನ್ನ.
ಕಡೆ: ದನದ ಕೊಟ್ಟಿಗೆ.	ಕುಡ್ಡೆ ಕುಳ್ಳಗಿನ.

1.4 ವ್ಯಂಜನಗಳು ಧ್ವನಿಯ ಪರಿಮಿತ

ಕುರಿ: ಕುಸಿಯುವಿಕೆ.	ಗುರಿ: ಕುದಿಯುವುದು.
ತ: ನೆತಿ: ಹೊಡೆ.	ದ :ಂತಿ: ದಾಟು.
ಡೆಂಗಿ: ಬಚ್ಚಿಟ್ಟುಕೋ.	ಡೊಂಕಿ; ಒದೆಯುವುದು.
ಬೂತಾರಿ; ಬೀಳುವುದು.	ಪೊದಾರಿ: ಪೆಸರು.
ಒಟ್ಟು: ಒತ್ತಾಯಪಡಿಸು.	ಒಡ್ಡು: ಯೂವುದು.
ಕಟ್ಟಿ: ಕಟ್ಟಿಹಾಕು.	ಕಡ್ಡಿ: ಕತ್ತರಿಸು.

1.5—ವ್ಯಂಜನಗಳು ; ಇತರ ಲಕ್ಷಣಗಳು.

ಆಡ್ಡಿ ; ಅವಳು.	ಆಡ್ಡಿ : ಆಡಿಗೆ ಮಾಡುವುದು
ಕುಟ್ಟು : ಚುಚ್ಚುವುದು.	ಕುಟ್ಟು ; ಹೊಡೆಯುವುದು.
ಎ;ರ್ರಿ : ಯಾರು.	ಎ:ಳಿ : ಎಳು(7).
ತ:ಂಗೆ : ಕೆನ್ನೆ.	ದ:ಂಗಿ : ಬಾಗುವಿಕೆ.
ಕಂಕತಿ : ತಪ್ಪುಸ್ಥಿತಿ.	ಅಂಕೋದಿ ಎತ್ತಿಕೋ (ಹಾರಿಸುವುದು)
ನೆಯಿ : ಸೋಸಿದ ಬೆಣ್ಣೆ (ತುಪ್ಪ)·	ಮೆಯ: ದೇಹ.

ನಾಮಪದಗಳು: ನಾಮಪದಗಳನ್ನು ವೈಚಾರಿಕ ಮತ್ತು ಅವೈಚಾರಿಕ (ಕರಣ) ಎಂದು ಎರಡು ಉಪವರ್ಗಗಳಾಗಿ ವರ್ಗೀಕರಿಸಬಹುದು.

ಒಂಟಿ ಕೊರಗ ಭಾಷೆಯಲ್ಲಿ ಸ್ತ್ರೀಲಿಂಗವನ್ನು ಸೂಚಿಸಲು ಪುಲ್ಲಿಂಗದ ನಾಮಪದದ ಕೊನೆಗೆ 'ತಿ' ಎಂದು ಕೆಲವೊಮ್ಮೆ 'ದಿ' ಎಂದು ಅಂತ್ಯಗೊಳಿಸಲಾಗುವುದು. ಇದು 'ಏಕವಚನ ಪ್ರಯೋಗಕ್ಕೆ ಸಂಬಂಧಿಸಿದ್ದು.

ಕೊರಯಿ	ಗಂಡ	ಕೊರತಿ	ಹೆಂಡತಿ
ಪ :ರನೆ	ಬ್ರಾಹ್ಮಣ	ಪ : ರಂತಿ	ಬ್ರಾಹ್ಮಣಿ
ಕ :ರೆ	ಕ್ರಿಶ್ಚಿಯನ್	ಕ : ರೆದಿ	ಕ್ರಿಶ್ಚಿಯನ (ಹೆ)
ಕೆಲೆಸಿ	ಕ್ಷೌರಿಕ	ಕೆಲೆಸಿದಿ	ಕ್ಷೌರಿಕಗಿತ್ತಿ

ಬಹುವಚನ ರೂಪವನ್ನು ಸಂಬಂಧಿಸಿದ ರಕ್ತ ಸಂಬಂಧಿ ನಾಮಪದಕ್ಕೆ 'ಲ್ಲು' ಸೇರಿಸುವ ಹಾಗೂ ಇತರೇ ನಾಮಪದಗಳಿಗೆ 'ಲು' ಸೇರಿಸುವುದರಿಂದಲೂ ರಚಿಸಲಾಗುವುದು.

ಅಪ್ಪೆ	ತಾಯಿ	ಅಪ್ಪೆಲು	ತಾಯಂದಿರು
ಮಾಮೆ	ಮಾವು	ಮಾಮೆಲು	ಮಾವಂದಿರು.
ಕೆಲೆಸಿ	ಕ್ಷೌರಿಕ	ಕೆಲೆಸಿಲು	ಕ್ಷೌರಿಕರು.
ಬಿತ್ತೆದಿ	ಮುಸ್ಲಿಂ(ಹೆ)	ಬತ್ತೆದಿಲು	ಮುಸ್ಲಿಮರು (ಹೆ)
ಅಚಾರಿ	ಮರಗೆಲಸದವನು	ಅಡಾರ್ಲು	ಮರಗೆಲಸದವರು.
ಬಿನ್ನೆ	ಸಂಬಂಧಿ	ಬಿನ್ನೇರಿ	ಸಂಬಂಧಿಗಳು,

ತಪ್ಪು ಕೊರಗ:

ಹೆಬ್ರಿ ಬಳಿ ವಾಸಿಸುವ ಕೊರಗರು 'ತಪ್ಪು' ಎಂಬ ಕೊರಗ ಭಾಷೆಯನ್ನಾಡುವವರು. ಇವರು ಬಹುಮಟ್ಟಿಗೆ ಬಹುಭಾಷಿಕರು ಇವರು ತುಳು ಮತ್ತು ಕನ್ನಡವನ್ನೂ ಸರಾಗವಾಗಿ ಮಾತನಾಡುವವರು. ಈ ಉಪ ಭಾಷೆ ಬೇರೆ ಎರಡು ಕೊರಗ ಪ್ರಾಕಾರಗಳಿಗಿಂತಲೂ ತೀರಾ ಭಿನ್ನವಾದುದು.

ವಿರೋಧಿ ಪದಗಳು

(ಅ) ಸ್ವರಗಳು : ಉದ್ದ

ಹರಿ	ಕುಡಿ.	ಹತ್ರಿ	ಹಾರಾಡು
ಹುಗೆ	ಹೊಗೆ.	ಹು;ಸೆ	ಮೀನುಗಾರ.
ಕೋರಿ	ಕೊಲ್ಲು.	ಕೋ : ರಿ	ಹೊಡೆಯುವುದು.
ಇರು	ನಿನ್ನೆ	ಐ: ಕಡಿ	ಇತ್ತ ಕಡೆ.
		ನೆ: ವು	ಭಯ.

ಅ) ಸ್ವರಗಳು : ಗುಣ:

ಮೆಲಿ	ಅರೆಯುವುದು	ಇರು	ನಿನ್ನೆ.

ಅಡ್ಡಿ	ಅವಳು	ಇಡ್ಡಿ	ಯಾವುದು.
ಅರಿ	ಅಕ್ಕ	ಒರಿ	ನಿಲ್ಲುವುದು.
ಹುಡಿ	ಹಿಡಿದುಕೋ	ಹೊಡಿ	ಹುರಿಯುವುದು
ನಿಗರೆ	ನಿದ್ರೆ	ನೆಗಿ	ಹೇಳುವುದ

(ಇ) ವ್ಯಂಜನಗಳು : ದ್ವಿವರ್ಣಗಳು:

ನಕಲಿ	ಯಾರನ್ನಾದರೂ ನೋಡಲು	ಒಕ್ಕಾಲಿ	ಪ್ರತ್ಯುತ್ತರ ನೀಡುವುದು.
ಬಟಲಿ	ತಟ್ಟೆ	ಕತ್ತಾಲಿ	ಕಟ್ಟು
ಹುದರಿ	ಹೆಸರು	ಕಿದ್ದೇರಿ	ಮಕ್ಕಳು.
ನಡಿ	ನೆಡುವುದು	ನಡಿ	ಎರಡು.
ಹುಗೆ	ಹೊಗೆ	ಮೊಗ್ಗ	ಕಿರಿಯ ತಮ್ಮ
ಕೆಮಿ	ಕಿವಿ	ಕಮ್ಮಿ	ಮಲಗಿಕೊಳ್ಳು.
ನನಿ	ಒದ್ದೆಯಾಗುವುದು.	ನನ್ನಿ	ಅವನು
ಪಯಾಲಿ	ಮಗು.	ಉಯ್ಯಾಲಿ	ತಲೆಬಾಚು.

(ಈ) ವ್ಯಂಜನಗಳು:

ಕೋಗಿ :	ಕರೆಯುವುದು .	ಜೋಡಿ :	ಸೋರುವುದು.
ಕರಬು ;	ಕಣ್ಣು ಹುಬ್ಬು	ಗರ್ಬ :	ಕಬ್ಬಿಣ.
ಕೊತಾರಿ ;	ಜಾತಿ.	ಕೊಡಾರಿ	ಕೊಡಲಿ.
ಹೊರೆತು ;	ಸಮಯ.	ಎರಡು :	ಎತ್ತುಗಳು.
ಬುರೆಪಿ :	ಆಳುವುದು.	ಕರಬು ;	ಕಣ್ಣು ಹುಬ್ಬು

(ಉ) ವ್ಯಂಜನಗಳು : ಇತರ ಲಕ್ಷಣಗಳು.

ಉ : ಡಿ	ಹಾರಿಸುವುದು, ಧ್ವಂಸ ಮಾಡು.	ಬು : ಡಿ	ಕೆಳಗೆ ಬೀಳಿಸು.
ಹಟ್ಟೆ:	ಹತ್ತುವುದು.	ಕಟ್ಟಿ	ಕಟ್ಟು
ತೆರಿ :	ತಿಳಿದು ಕೋ	ತೆಲಿ	ನಗುವುದು.
ಕಲ್ಲಿ :	ಕಲ್ಲು	ಬಲ್ಲಿ	ಹಗ್ಗ
ನನ್ನೆ :	ನಾನು	ಮನ್ನೆ	ನಾನು ಮಾಡುತ್ತೇನೆ
ಕೋನಿ:	ನರ್ತಿಸು	ನನಿ	ಕಾಲುವೆ ತೋಡು.

ಕ್ರಿಯಾ ಪದಗಳು (ಮೂಲಗಳು)

ಕಮ್ಮಿ	ಮಲಗು, ಬಿದ್ದುಕೋ	ಜ : ವಿ	ಮಾತನಾಡು.
ನ : ವಿ	ಎದ್ದೇಳು	ಡ : ಂಗಿ	ಬಾಗು.
ಓ: ಂಕಿ	ಪ್ರಾರಂಭಿಸು	ತು: ಂಡಿ	ಉಟ್ಟುಕೋ
ಉಯ್ಯಾಲಿ	ತಲೆಬಾಚು	ಹು:ಜಿ	ತೊಳೆ.
ಅಡೆ	ಹುಡುಕು	ಉರಿ	ಉಗಿಯುವುದು.
ನೆಗಿ	ಹೇಳು	ಒಗಿ	ಸುರಿಯುವುದು.
ಪಿ :	ಕೊಡು	ಅಗಿ	ಎಳೆಯುವುದು.
ತೆರಪಿ	ಉಜ್ಜು	ಅಲ್ಮಬಿ	ಸಂಗ್ರಹಿಸು.
ನಿರಗಿ	ತುಂಬುವುದು	ಎನ್ನಿ	ಎತ್ತಿಕೋ.
		ಡಿರಕಿ	ತೆಗೆದುಕೋ. ಸಂಗ್ರಹಿಸಿಕೋ.

ಮೂಡು ಕೊರಗ:

ಕೊರಗ ಭಾಷೆಯ ಮೂರನೇ ಉಪ ಆಡು ಭಾಷೆ 'ಮೂಡು ಕೊರಗ' ಈ ಪ್ರಾಕಾರದಲ್ಲಿ ಕನ್ನಡ ಭಾಷೆಯ ಪ್ರಭಾವ ಗಾಢವಾಗಿದೆ.

ಭಾಷೆ:

1—ಭಾಷಾ ಅವಿಷ್ಕಾರ:

ಸ್ವರಗಳು

ಐ ಐ ಯು ಐ: ಯು :

ಇ ಅ ಒ ಇ: ಅ ಒ:

ವ್ಯಂಜನಗಳು

ಪ ಟ ಟ ಕ ಕ

ಬ ಡ ಡ ಜ ಗ

ಮ ನ ನೆ

ವ ಥ ಯ

ಲ ಲೆ

ಸ ಹ

ದ್ವನಿ

1—2—ವಿರುದ್ಧ ಪದಗಳು:

(ಅ) ಸ್ವರಗಳು:

ತಿನ್ನಿ ತಿನ್ನು

ಸಿನಿ ಸೀನು

ಉಂಜಿ ಒಂದು

ಪುಂಜಿ ಹುಂಜ

ನೆಗಿ ತೆಗೆದುಕೋ

ತೆ:ದಿ ಉಜ್ಜುವುದು.

ಕೊಣೆ ನರ್ತಿಸು.

ಕೊ:ಣೆ ಕೊಠಡಿ.

(ಅ) ಸ್ವರಗಳು : ಗುಣ:

ದೆನಿ : ದನ ಮಿಗಿ : ಜಿಂಕೆ. ಮೊಂಗಿ . ಮೀನು.

ಕು:ಜಿ: ಹುಡುಗಿ ಇರು ನಿನ್ನೆ ಹೆರಿ : ನಿವಾರಿಸಿಕೋ.

(ಇ) ಸ್ವರಗಳು (nasalization)

ಕೈ ಹಸ್ತ ತೋಟ :. ತೋಟ.

ಕಯಿ ಒಗಟಾದ ಹಯ್ಯಾಡಿ : ಹರಡು.

ತೊ : ಡಉಪನದಿ, ಕಿರು ತೊರೆ ಹಯ್ಯಾಗಿ : ಮರಳು.

(ಈ)ವ್ಯಂಜನಗಳು (Voicing)

ಕೊ :ಡಸದ್ದು ಕಡಿ : ಒಂದು ತುಂಡು ಗೋ:ಡ : ಗೋಡೆ

ಕುನ್ನಿ ಅಜ್ಜು ಕಡ್ಡಿ : ಡೋಲು, ಅಕೆ ತಂದೆ(ಅಪ್ಪ)

ಕಟ್ಟಿ ಕಟ್ಟು ಅಜ್ಜಿ ; ಅಜ್ಜಿ ಕಂತಿ: ಕೆಣಕು. ಹಾಸ್ಯಮಾಡು

ತಿಂಡಿ: ಊಟಮಾಡು

(ಉ) ವ್ಯಂಜನಗಳು : ಇತರ ಲಕ್ಷಣಗಳು:

ಹಿಲಿ —ಹುಲಿ ಹಂಡಿ —ಹಣ್ಣು ಪಂದಿ —ಹೌದು.
ಹಿರಿ — ಭೂತದಿಂದ ಬಿಡುಗಡೆ ಎರಿ —'ಏಳು ಮುಳ್ಳು | — ಮೂಲೆ
ನೆ : ಲಿ — ಉಳು ದ : ನಿ — ಬೀಜ 'ಪಿಲಿ — ಏದ್ದೇಳು.
ಸುಳ್ಳು — ಸುಳ್ಳು ಪೆ:ಲಿ -- ಕೇಳಿಸುವುದು ಮು:ಸ — ಪುನ:
ಹುಲಿ—ಹುಳು ಬಿಟ್ಟ — ಹೊಳೆ.
ಸುಲಿ — ಮರದ ಕೊನೆ. ಹೊಟ್ಟ — ಸಮಯ.

1.3-ಕ್ರಿಯೂಪದ ನೆಲೆಗಳು:- ಮೂಡು ಭಾಷೆಯು ಕನ್ನಡದಿಂದ ಅಪಾರವಾಗಿ ಪಡೆದುಕೊಂಡಿದೆ. ಮೂಡು ಕೊರಗ ಪ್ರಾರಂಭದ ಹಂತದಲ್ಲಿ ತುಳು

ಭಾಷೆಯಿಂದಲೂ ಪ್ರಭಾವಿತವಾಗಿದೆ. ದ್ರಾವಿಡ ಭಾಷಾ ಪಂಡಿತ ವರ್ಗದಲ್ಲಿ ಸಹಜವಾಗಿ ಆಸಕ್ತಿ ಕೆರಳಿಸ ಬಹುದಾದ ಕೆಲವು ಮೂಡು ಕೊರಗ ಭಾಷೆಯ ಕ್ರಿಯಾ ಪದಗಳನ್ನು ಈ ಕೆಳಗೆ ಕೊಡಲಾಗಿದೆ.

ಉ : ಲು	ಉಗಳು	ತಿಪ್ಪ ನುಲಿಯುವುದು, ಹಿಂಡುವುದು
ಒಜ್ಜಿ	ಹೇಳು	ನೀ ನಿ: ಕಿ ಇಣುಕಿ ನೋಡು.
ಒಡ್ಕಿ	ಒರೆಸು	ನೆ:ಲೀ ಉಳುವುದು.
ಕಂಟಿ	ಕೆಣಕು	ಬೋಲ ತೇಲುವುದು.
ಕಮಡಿ	ಕದಿಯುವುದು	ಬಲಿ ಎಳೆಯುವುದು.
ಕಿಪ್ಪ	ಕೀಳುವುದು	ಮಜ ಮೊನಚುಗೊಳಿಸು, ಹರಿತಗೊಳಿಸು
ಕುಕೆಡಿ	ಒಲೆಯ ಮೇಲಿರಿಸು ಹಜಿ	ಹುಡುಕು.
ಕಂಕಿ	ಮಗುವನ್ನು ಹತ್ತ್ಯುಯುವುದು ಮಯಡಿ	ಅವಿತುಕೋ
ಜಪ್ಪ	ಹೊಡೆಯುವುದು	ಹಯುಡಿ ಅಡಗಿಕೋ
ಜ : ಡ್ಡಿ	ಕೆಳಗಿಳಿಯುವುದು.	ಹು : ಡ್ಡಿ ಹೂಳುವುದು.

ಕೊರಗ ಉಪಭಾಷೆಗಳ ತೌಲನಿಕ ಅಧ್ಯಯನ:

ಕೊರಗ ಉಪಭಾಷೆಗಳ ಅಧ್ಯಯನವು ಎರಡು ಕಾರಣಗಳಿಗಾಗಿ ಮೈನವಿರೇಳಿಸುವುದು. ಮೊದಲು, ದ್ರಾವಿಡ ಭಾಷೆಗಳ ಪೈಕಿಯಲ್ಲಿ ದಕ್ಷಿಣ ಇಂಡಿಯಾದ ಮಟ್ಟಿಗೆ ಕೊರಗ ಭಾಷೆಯೊಂದು ಮಾತ್ರವೇ ಉತ್ತರದ ದ್ರಾವಿಡ ಭಾಷೆಗಳಾದ ಕುಡು, ಮಾಲ್ಟೋ ಮತ್ತು ಬ್ರಾಹುಯಿಗಳೊಂದಿಗೆ ಶಬ್ದ ರೂಪ ರಚನಾ ಶಕ್ತಿಯಿಂದ ಶಾಸ್ತ್ರದ ದೃಷ್ಟಿಯಿಂದ ಅನೇಕಾನೇಕ ಏಕರೂಪತೆಯ ಅಂಶಗಳನ್ನೊಳಗೊಂಡಿರುವ ಭಾಷೆಯಾಗಿದೆ. ಎರಡನೆಯದಾಗಿ, ಕೊರಗ ಭಾಷೆಯು, ಭಾಷೆಯೊಂದರ ಕೆಲವು ಸಂಕೀರ್ಣ ಸ್ವರೂಪದ ಬದಲಾವಣೆಗಳನ್ನು ಪರಿಳಿತಗಳನ್ನು ಗುರಿತಿಸಲು ಅರ್ಥೈಸಲು ಹಾಗೂ ಒಂದು ಸಾವಿರಕ್ಕೂ ಹೆಚ್ಚು

ವರ್ಷಗಳಿಂದಲೂ ದ್ವಿಭಾಷಾ ಪ್ರಭಾವಕ್ಕೊಳಗಾದ ಜನಾಂಗವೊಂದರ ಭಾಷೆಯಾಗಿ ಕೊರಗ ಭಾಷೆ ಮಹತ್ವದ್ದಾಗುವುದು.

ಇದುವರೆಗೆ ಮೂಡು ಕೊರಗ, ಒಂಟಿ ಕೊರಗ ಮತ್ತು ತಪ್ಪು ಕೊರಗ ಭಾಷಾ ಪ್ರಕಾರಗಳನ್ನು ವಿವರಿಸಲಾಗಿದೆ. ಒಂಟಿ ಕೊರಗದ ಮೇಲೆ ತುಳುವಿನ ಪದಭಾವ ಗಾಢವಾಗಿದ್ದರೆ ಮೂಡು ಕೊರಗದ ಮೇಲೆ ಕನ್ನಡದ ಪ್ರಭಾವ ಅಷ್ಟೇ ಗಾಢವಾದುದು. ತಪ್ಪು ಕೊರಗದ ಮೇಲೆ ತುಳು-ಕನ್ನಡ ಭಾಷೆಗಳೆರಡರ ಪ್ರಭಾವವೂ ಬಹಳವಾಗಿದೆ. ಆದರೆ ಮೂಡು ಕೊರಗದ ಮೇಲೆ ತುಳುವಿನ ಪ್ರಭಾವವೇ ತುಸು ಹೆಚ್ಚು ಎನ್ನಲಾಗುವುದು

ಕೊರಗ ಭಾಷಾ ಪ್ರಾಕಾರಗಳ ಹೋಲಿಕೆ ಹೀಗಿದೆ: ಒಂಟಿ ಕೊರಗದ 'ಪ', ಮೂಡು ಮತ್ತು ತಪ್ಪು ಕೊರಗದ 'ಹ' ಕಾರಕ್ಕೆ ಸಂವಾದಿಯಾಗುವುದು.

ಉದಾ;

	ಪದ	ಒಂಟಿಕೊರಗ	ಮೂಡುಕೊರಗ	ತಪ್ಪುಕೊರಗ
	ಕುಡಿ	ಪರಿ	ಹರಿ	ಹರಿ
	ಹಾರು	ಪ: ರಿ	ಹ:ರಿ	ಹ:ರಿ
	ಹಿಡಿದುಕೋ	ಪುಡ್ಡು	ಹುಡಾ	ಹುಡಿ
	ಹುಲಿ	ಪಿಲಿ	ಹಿಲಿ	ಹಿಲಿ
	ಹೊರಗೆ	ಪೆದೆಮಯಿ	ಹರ್ಮಿ	ಹಿದೆಮಯಿ
	ಹೋಗು	ಪೋ	ಹೋ : ಗ	ಹೋ

ಭಾಷಾ ಶಾಸ್ತ್ರದ ದೃಷ್ಟಿಯಿಂದ ಕೊರಗ ಭಾಷೆಯು ವಿವಿಧ ಪ್ರಕಾರಗಳ ನಡುವಣ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಗುರುತಿಸುವ ಆಗತ್ಯವಿದೆ. ಕೊರಗ ಜನಾಂಗದವರು ತಮ್ಮ ಹೀನಾಯ ಭಾವ ಮೌಢ್ಯ ನಾಚಿಕೆಯ ಚಿಪ್ಪು ತೊರೆದು ಹೊರಬಂದು ತಮ್ಮ ಭಾಷೆಯನ್ನು ಬಳಸುವಂತಾದರೆ ಅದರ ಸಂರಕ್ಷಣೆ ಸಾಧ್ಯವಾದೀತು. ಕೊರಗ ಭಾಷೆಯಲ್ಲಿ ಕೆಲವು ವಿಶಿಷ್ಟವಾದ ಕಥೆಗಳಿವೆ. ಈ ಕಥೆಗಳು ಕೊರಗರು ತಮ್ಮ ಸುತ್ತಲಿನ ಸಮಾಜವನ್ನು ಗ್ರಹಿಸುವ ರೀತಿಗೆ ಅವರ ಜೀವನ ಪ್ರೀತಿಗೆ ಸರಳತೆ, ಸಜ್ಜನಿಕೆ, ಹೃದಯವಂತಿಕೆ ಕನ್ನಡಿ ಹಿಡಿಯುವಂತಿವೆ. ಡಾ. ಡಿ. ಎಸ್. ಎಸ್. ಭಟ್ ಕೊರಗರ ಮೂರು ಉಪ ಭಾಷೆಗಳಿಂದ ಕಥೆಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ.

3. ಕೊರಗರ ಆರ್ಥಿಕ ಸಾಮಾಜಿಕ

ಸ್ಥಿತಿ– ಗತಿ

3.1 ಕೊರಗರ ವೃತ್ತಿ ಮತ್ತು ಭೌಗೋಳಿಕ ಪರಿಸರ.

3.2 ಕೊರಗರು ಮತ್ತು ಇತರ ಜನಾಂಗಗಳೊಂದಿಗಿನ ಸಂಬಂಧ.

3.3 ಕೊರಗರ ಜೀವನ ಮಟ್ಟ.

3.4 ಕೊರಗರ ಸಮಸ್ಯೆಗಳು.

3.5 ಕೊರಗರ ಸಮಸ್ಯೆಗಳು.

ಪರಿಹಾರಕ್ಕೆ ಸಲಹೆ ಸೂಚನೆಗಳು.

3.1 — ಕೊರಗರ ವೃತ್ತಿ ಮತ್ತು ಭೌಗೋಳಿಕ ಪರಿಸರ:—

ಕೊರಗರು ಗುಲಾಮ ಸ್ಥಿತಿಯಲ್ಲಿದ್ದುದನ್ನು ಈಗಾಗಲೇ ಚಾರಿತ್ರಿಕ ದಾಖಲೆಗಳಿಂದ ವಿವರಿಸಲಾಗಿದೆ. ಶತಶತಮಾನಗಳ ಹಿಂದೆ ಕೊರಗರನ್ನು ಗುಲಾಮರಾಗಿಸಿ ಬಹಿರಂಗವಾಗಿ ಮಾರಾಟ ಮಾಡಲಾಗುತ್ತಿತ್ತು. ಈ ಬಗೆಗೆ ಸುದೀರ್ಘವಾದ ವಿವರಣೆಗಳನ್ನು ನಾವು ಎಡ್ಗರ್ ಥರ್ಸ್ಟನ್‌ನ ದಕ್ಷಿಣ ಭಾರತದ ಜಾತಿಗಳು ಮತ್ತು ಪಂಗಡಗಳು ಕೃತಿಯಲ್ಲಿ ಕಾಣಬಹುದಾಗಿದೆ ಈ ವಿಚಾರವನ್ನು ಥರ್ಸ್ಟನ್ ಉಳ್ಳಾಲ ರಾಘವೇಂದ್ರರಾವ್‌ರವರ ಲೇಖನದಿಂದ ಉಲ್ಲೇಖಿಸಿದ್ದಾನೆ.

"ಈ ಗುಲಾಮರು ತೀರಾ ಹೀನಾಯ ಸ್ಥಿತಿಯಲ್ಲಿದ್ದರೂ ಅವರೇನೂ ಬಹಳ ದುಃಖಿಗಳಾಗಿಯಾಗಲಿ ಅಸಂತೋಷಿಗಳಾಗಿಯಾಗಲಿ ಇದ್ದುದು ತೋರುವುದಿಲ್ಲ. ಒಬ್ಬ ಗುಲಾಮ ಗಂಡಸಿಗೆ ಮೂರಾಣೆಯ ಅಕ್ಕಿಯನ್ನು ಅಥವಾ ಒಂದು ಆಣೆ ನಗದು ಮತ್ತು ಉಳಿದುದಕ್ಕೆ ಅಕ್ಕಿಯನ್ನು ಪಡೆಯುವನು. ಅವನಿಗೆ ಧಣಿಯು ಸ್ವಲ್ಪ ಉಪ್ಪನ್ನೂ ಕೊಡುವನು. ಹೆಣ್ಣು ಗುಲಾಮಳಿಗೆ ದಿನಕ್ಕೆ ಎರಡಾಣೆ ಕೂಲಿ ಅಕ್ಕಿ ರೂಪದಲ್ಲಿ ಆ ಗುಲಾಮರು ಗಂಡ ಹೆಂಡತಿಯರಾಗಿದ್ದರೆ ತಮಗೆ ಬಂದ ಅಕ್ಕಿಯಲ್ಲಿ ಸ್ವಲ್ಪ ಭಾಗವನ್ನು ಮಾರಿ ಜೀವನಾವಶ್ಯಕವಾದ ಇತರೆ ವಸ್ತುಗಳನ್ನು ಸುಲಭವಾಗಿ ಖರೀದಿಸಬಹುದು. ಈ ಗುಲಾಮರಿಗೆ ವರ್ಷಕ್ಕೊಮ್ಮೆ ಒಂದೊಂದು ವಸ್ತ್ರ ನೀಡಲಾಗುವುದು. ಈ ಗುಲಾಮರನ್ನು ಒಬ್ಬ ಧಣಿ ಇನ್ನೊಬ್ಬ ಧಣಿಗೆ ಮಾರಾಟ ಮಾಡಿಬಿಡುತ್ತಿದ್ದ. ಆಗ ಮಾರುವವನು ತನ್ನ ಕೊರಗರಿಗೆ ಒಂದೊಂದು ತೆಂಗಿನ ಕಾಯಿ. ಒಂದೊಂದು ಹಲಸಿನ ಮರ ಹಾಗು ಹತ್ತಿಪ್ಪತ್ತು ಸೇರು ಅಕ್ಕಿ ಬೆಳೆಯುವಷ್ಟು ನೆಲವನ್ನು ದಾನವಾಗಿ ನೀಡುತ್ತಿದ್ದನು. ಕೊರಗ ಗುಲಾಮರಲ್ಲಿ ಬಹು ಸಂಖ್ಯಾತರು ಅಳಿಯ ಕಟ್ಟು ಸಂತಾನಕ್ಕೆ ಸೇರಿದವರು. ಈ ವ್ಯವಸ್ಥೆಯನ್ವಯ ಗಂಡು ಗುಲಾಮನನ್ನು ಮೂರು ಪಗೋಡಾಗಳಿಗೆ (ಅಂದರೆ ಹದಿನಾಲ್ಕು ರೂಪಾಯಿಗಳಿಗೆ) ಹೆಣ್ಣು ಗುಲಾಮಳನ್ನು ಐದು ಪಗೋಡಾಗಳಿಗೆ ಮಾರಲಾಗುತ್ತಿತ್ತು. ಮಕ್ಕಳ ಸಂತಾನ ಪದ್ಧತಿಗೆ ಸೇರಿದ (ಪಿತೃ ಪ್ರಧಾನ ವ್ಯವಸ್ಥೆ) ಗುಲಾಮರನ್ನು — ಗಂಡಿಗೆ ಐದು

ಪಗೋಡಗಳಿಗೆ ಮತ್ತು ಹೆಣ್ಣಿಗೆ ಮೂರು ಪಗೋಡಗಳೆಂದು ದರ ನಿರ್ಣಯಿಸಿ ಮಾರಲಾಗುತ್ತಿತ್ತು. ಈ ಮಕ್ಕಳ ಸಂತಾನ ವ್ಯವಸ್ಥೆಯಲ್ಲಿ ಗುಲಾಮ ದಂಪತಿಗಳ ಮಕ್ಕಳು ಗಂಡನ ಧಣಿಗೆ ಸೇರುತ್ತಿದ್ದರು. ಅಳಿಯ ಸಂತಾನ ವ್ಯವಸ್ಥೆಯಲ್ಲಿ ತಾಯಿಯ ಧಣಿಗೆ ಆಕೆಯ ಮಕ್ಕಳು ಸೇರುತ್ತಿದ್ದರು. ಈ ಧಣಿಯು ಕೊರಗರ ವಿವಾಹಕ್ಕೆಂದು 1½ ಪಗೋಡಾ ಖರ್ಚು ಮಾಡುವನು. ಮಕ್ಕಳ ಸಂತಾನ ವ್ಯವಸ್ಥೆಯಲ್ಲಿ ಧಣಿ ಹೆಣ್ಣಿನ ಮದುವೆಗೆಂದು ಎರಡು ಪಗೋಡಾ ಖರ್ಚು ಮಾಡಿ ಆ ಕೊರತಿ ಮತ್ತು ಅವಳ ಮಕ್ಕಳ ಮೇಲೆ ಮಾಲಿಕತ್ವ ಪಡೆಯುತ್ತಿದ್ದನು. ಧಣಿಯೊಬ್ಬನು ಇತರರಿಗೆ ತನ್ನ ಕೊರಗ ಗುಲಾಮರನ್ನು ಬಾಡಿಗೆಗೆಂದು ಕೊಡುವ ಪದ್ಧತಿಯಿತ್ತು. ವರ್ಷಕ್ಕೆ ಒಂದು ಮುಡಿ ಅಥವಾ 40 ಸೇರು ಅಕ್ಕಿ ಒಬ್ಬ ಕೊರಗ ಕಾರ್ಮಿಕನ ಬಾಡಿಗೆ. ಕೊರಗರ ಧಣಿಗಳು ಅವರನ್ನು ಇತರರಿಗೆ ಮೂರ್‍ನಾಲ್ಕು ಪಗೋಡಾಗಳಿಗೆ ಅಡವಿಡುವುದೂ ಇತ್ತು.

ಇದು ಕೊರಗ ಕಾರ್ಮಿಕರ ನೂರು ವರ್ಷಗಳ ಹಿಂದಿನ ಚಿತ್ರ. ಆ ಚಿತ್ರ ಎರಡು ಸಾವಿರ ವರ್ಷಗಳಿಗೂ ಹೆಚ್ಚಿನ ಕಾಲದಿಂದಲೂ ಬದಲಾಗದೆ ಉಳಿದು ಬಂದ ಗುಲಾಮ ವ್ಯವಸ್ಥೆಯ ಚಿತ್ರ. ಇಂಥ ಕೊರಗರು 20ನೇ ಶತಮಾನದಲ್ಲಿ, ಮುಖ್ಯವಾಗಿ ಭಾರತದ ಸ್ವಾತಂತ್ರ್ಯ ನಂತರದ ವರ್ಷಗಳಲ್ಲಿ. ಜೀತಗಾರಿಕೆ ವ್ಯವಸ್ಥೆ ನಾಶವಾದಂತೆಲ್ಲಾ, ಕೊರಗರು ಧಣಿಗಳಿಂದ ಬಿಡುಗಡೆ ಪಡೆದರು. 20ನೇ ಶತಮಾನದ ರಾಜಕೀಯ ಬೆಳವಣಿಗೆಗಳು ಕೊರಗರಿಗೂ ಸ್ವಾತಂತ್ರ್ಯ ತಂದವು.

ಗುಲಾಮ ಕಾರ್ಮಿಕರಾಗಿ ಕೊರಗರು ದುಡಿಯುತ್ತಿದ್ದಾಗ ಕಲಿತ ಕಸುಬು ಬುಟ್ಟಿ ಹೆಣೆಯುವುದು, ತೋಟದ ಕೆಲಸ, ಕೃಷಿ, ಮನೆ ಚಾಕ್ರಿ ಇತ್ಯಾದಿ. ಈ ಎಲ್ಲಾ ಕಸುಬುಗಳನ್ನೂ ಇಂದಿನ ಕೊರಗರೂ ಕೈಗೊಂಡಿದ್ದಾರೆ. ಪ್ರಧಾನವಾಗಿ ಇಂದು ಕೊರಗರು ಬುಟ್ಟಿ ಹೆಣೆಯುವವರು. ಸಾಮಾನ್ಯವಾಗಿ ಬೆಟ್ಟಗುಡ್ಡಗಳ ತಪ್ಪಲುಗಳಲ್ಲಿ, ಕಾಡುಮೇಡುಗಳಲ್ಲಿ ವಾಸಿಸುವ ಕೊರಗರು ಕಾಡಿನಿಂದ ಬೆತ್ತ ತಂದು ಬಗೆಬಗೆಯ ಬುಟ್ಟಿಗಳನ್ನು ತಯಾರಿಸಿ ಹಳ್ಳಿಯ ಕೃಷಿಕರಿಗೆ ಮಾರುತ್ತಾರೆ. ಕೊರಗರ ಬೆತ್ತದ ಬುಟ್ಟಿಗಳಿಗೆ ಹಣದ ರೂಪದಲ್ಲಿ, ಅಕ್ಕಿ, ತೆಂಗಿನ ಕಾಯಿ, ಕೊಬ್ಬರಿಎಣ್ಣೆ ರೂಪದಲ್ಲಿ ಕೃಷಿಗರು ಹಣ ಸಂದಾಯ ಮಾಡುವರು. ಕೊರಗರ ಬುಟ್ಟಿಗಳಿಗೆ ನ್ಯಾಯೋಚಿತ ಬೆಲೆ ಎಲ್ಲಾ ಸಂದರ್ಭದಲ್ಲೂ ಸಿಗುವುದಿಲ್ಲ.

ಕೃಷಿಕರು ಕೊಟ್ಟಷ್ಟು: ಕೊರಗರು ಪಡೆದಷ್ಟೇ ಬೆಲೆ: ಹೀಗಾಗಿ ಕೊರಗರದ್ದು ಕಡು ಬಡತನದ ಜೀವನ. ಅರೆ ಹೊಟ್ಟೆ- ಅರೆ ಬಟ್ಟೆ. ಮನೆ ತುಂಬಾ ಮಕ್ಕಳು. ಮನೆಮಂದಿಯೆಲ್ಲರ ದುಡಿತ. ಆದರೂ ಯಾರ ಹೊಟ್ಟೆಯೂ ತುಂಬದಿರುವ ಹೀನ ದೀನ ಸ್ಥಿತಿ. ಕೊರಗರ ಬುಟ್ಟಿಗಳಿಗೆ ಸೂಕ್ತ ಮಾರುಕಟ್ಟೆ ವ್ಯವಸ್ಥೆ ಇಲ್ಲ. ಇದೇ ಕೊರಗರ ಬಡತನದ ಸಮಸ್ಯೆಯ ಮೂಲ ಹಾಗೂ ಹಿಂದಿನಂತೆ ಕೃಷಿಕರು ಮನೆಯಲ್ಲಿ ಬೀಳಲುಗಳ ಉತ್ಪನ್ನಗಳಾದ ಬುಟ್ಟಿಗಳು, ತಡಿಕೆಗಳನ್ನು ದಾನ್ಯ ಸಂಗ್ರಹಿಸಿಡಲು ಬಳಸುವುದಿಲ್ಲ. ಹೀಗಾಗಿ ಮಾರುಕಟ್ಟೆ ಕೂಡ ಕೊರಗರ ಉತ್ಪನ್ನಗಳಿಗೆ ಕುಸಿಯುತ್ತಿದೆ. ಇದು ಕೊರಗರ ಬಡತನವನ್ನು ತೀವ್ರಗೊಳಿಸುತ್ತಿದೆ. ಕೊರಗರು ಕಾಡಿನಿಂದ ನಾರುಗಳು, ಬಿಳಲುಗಳು ಮತ್ತು ಧಣಿಗಳ ಮನೆಗಳಿಂದ ತೆಂಗಿನ ಚಿಪ್ಪುಗಳನ್ನು ಗೆರಟೆಗಳನ್ನು ತಂದು ವಿವಿಧ ಬಗೆಯ ಬುಟ್ಟಿಗಳನ್ನು, ಅಕ್ಕಿ ಸೋಸುವ ಗೆರಸೆ, ದಾನ್ಯ ಅಳೆಯುವ ಕಳಸಿಗೆ, ಕೋಳಿಗಳನ್ನು ರಕ್ಷಿಸುವ ಬುಟ್ಟಿ. ತರಗೆಲೆ ಸಂಗ್ರಹಿಸುವ ಮುಡಚ್ಚಿಟ, ಮೀನು ಹಿಡಿಯುವ ಕುತ್ತೇರಿ, ಹೀಗೆ ಬಗೆಬಗೆಯ ತಟ್ಟಿಗೆಗಳು-ತಯಾರಿಸುವರು.

ಇತ್ತೀಚಿನ ವರ್ಷಗಳಲ್ಲಿ ಕೊರಗರ ಬುಟ್ಟಿ ಉತ್ಪನಗಳನ್ನು ಮುಸ್ಲಿಂ ವ್ಯಾಪಾರಿಗಳು ಖರೀದಿಸುವರು. ಅವರು ಸಗಟು ಖರೀದಿ ಮಾಡಿ ಪೇಟೆ, ಪಟ್ಟಣಗಳಿಗೆ ಪೂರೈಸುವರು. ಕೊರಗರಿಗೆ ಮುಂಗಡ ಹಣ ನೀಡಿ ನಂತರ ಕಡಿಮೆ ಬೆಲೆಗೆ ಬುಟ್ಟಿಗಳನ್ನು ಈ ವ್ಯಾಪಾರಿಗಳು ಕಬಳಿಸುವುದೂ ಉಂಟು

ಅತಿ ಹಿಂದುಳಿದ ಪ್ರದೇಶಗಳಲ್ಲಿ ಕೊರಗರು ಬಹಳ ನಿಕೃಷ್ಟ ಜೀವನ. ನಡೆಸುತ್ತಿದ್ದಾರೆ. ಅವರಿಗೆ ಬೆತ್ತದ ಕೆಲಸ ಬಿಟ್ಟರೆ ಬೇರೇನೂ ಬರುವುದಿಲ್ಲ. ಇತರೆ ಕೊರಗರನ್ನು ಇಂದು ಕೃಷಿಕರು ಕೂಲಿ ಕೆಲಸಕ್ಕೂ ಕರೆಯುವುದಿಲ್ಲ. ತೀವ್ರ ಕಡುಬಡತನದಿಂದ ನರಳುತ್ತ ಬಳಲಿ ಬೆಂಡಾಗಿರುವ ಕೊರಗರು ಕೂಲಿ ಕೆಲಸ ಮಾಡಲು ಗಮನಹರಿಸುವುದಿಲ್ಲ. ಮನೆಮನೆಗೆ ಹೋಗಿ ಅನ್ನ ಬೇಡುತ್ತ ಜೀವಿಸುವ ಕೊರಗರನ್ನೂ ಇಂದು ಹಳ್ಳಿಗಳಲ್ಲಿ ಕಾಣಬಹುದು.

ಸುಮಾರು ಒಂದು ಶತಮಾನದಿಂದಲೂ ಕೊರಗರು ಸ್ಥಳೀಯ ಸಂಸ್ಥೆಗಳಲ್ಲಿ ಜಾಢಮಾಲಿಗಳಾಗಿ ಕೆಲಸ ಮಾಡುತ್ತಿದ್ದಾರೆ. ಇಂದಿಗೂ ಪೇಟೆ ಪಟ್ಟಣಗಳಲ್ಲಿ ಈ ನೈರ್ಮಲೀಕರಣದ ವೃತ್ತಿಯಲ್ಲಿರುವವರ ಜೀವನಮಟ್ಟ

ಪರವಾಗಿ ಇಲ್ಲ. ಇವರಿಗೆ ವಾಸಕ್ಕೆ ಮನೆ, ಎರಡು ಹೊತ್ತಿಗೆ ಊಟ, ದಿನವೂ ಸೇಂದಿ ಕುಡಿಯುಲು ಹಣ ಸಿಗುತ್ತದೆ. ಈ ಕೊರಗರು ತಮ್ಮದೇ ವೃತ್ತಿಯ ಭಂಗಿಗಳೊಂದಿಗೆ ವಿವಾಹ ಸಂಬಂಧ ಮಾಡುತ್ತಿರುವುದು ಇತ್ತೀಚಿನ ಬೆಳವಣಿಗೆ ಆಗಿದೆ.

3.2–ಕೊರಗರು ಮತ್ತು ಇತರ ಜನಾಂಗಗಳೊಂದಿಗಿನ ಸಂಬಂಧ

ಕೊರಗರು ಮತ್ತು ಇತರ ಜನಾಂಗಗಳೊಂದಿಗಿನ ಸಂಬಂಧವು ಬಹಳ ತೆಳುವಾದುದು. ಪ್ರತ್ಯೇಕತೆಯೇ ಉಸಿರಾದ ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ಗುಲಾಮರಾಗಿದ್ದ ಕೊರಗರು ಯಾವ ಸಂತೋಷದಾಯಕ ಸಂಬಂಧವಿರಿಸಿ ಕೊಳ್ಳಲು ಸಾಧ್ಯವಾದೀತು? ಹೀಗಾಗಿ ಕೊರಗರಿಗೆ ಇತರರೊಂದಿಗೆ ಸಾಮಾಜಿಕ ಮತ್ತು ಸಾರ್ವಜನಿಕವಾದ ಸಾಮುದಾಯಿಕ ಸಂಬಂಧಗಳು ಬಹುಮಟ್ಟಿಗೆ ಕಡಿಮೆ.

1. ಕೊರಗರನ್ನು ದಲಿತರೂ ಕೀಳೆಂದು ಪರಿಗಣಿಸುವರು.

2. ಬೇರೆ ಜಾತಿಯ ಶೂದ್ರರು ಕೊರಗರನ್ನು ದಲಿತರೆಂದೇ ಪರಿಗಣಿಸಿ ಅಸ್ಪೃಶ್ಯರಾಗಿ ಭಾವಿಸುತ್ತಾರೆ.

3. ಭೂಮಾಲೀಕ ವರ್ಗ ಮತ್ತು ಪುರೋಹಿತ ವರ್ಗ ಇಂದಿಗೂ ಕೊರಗರನ್ನು ಅಜ್ಞಾನಿಗಳೆಂದೂ, ಅನಾಗರಿಕರೆಂದೂ ನಂಬುತ್ತಾರೆ.

ಒಟ್ಟು ಅಧ್ಯಯನದಲ್ಲಿ ಕೊರಗರ ಸಂಬಂಧಗಳು ಒಂದೊಂದು ಮೇಲ್ವರ್ಗದ ವರ್ಣಗಳೊಟ್ಟಿಗೂ ವಿಶಿಷ್ಟ ನೆಲೆಗಳಲ್ಲಿ ವ್ಯವಹರಿಸುವುದು ಕಂಡುಬರುವುದು. ಬ್ರಾಹ್ಮಣ ಸಮಾಜದೊಂದಿಗೆ ಇರುವ ಸಂಬಂಧಗಳನ್ನು ಗಮನಿಸುತ್ತಾ ಹೋದರೆ ಇವರ ಪ್ರಭಾವ ಕೊರಗರ ಮೇಲೆ ಅಧಿಕವಾಗಿರುವುದು ಕಂಡುಬರುವುದು. ದೇವರು ಮತ್ತು ಆರಾಧನೆಗಳ ವಿಚಾರದಲ್ಲಿ ವೈದಿಕರನ್ನು ಅದೇ ಸ್ಥಾನದಲ್ಲಿಟ್ಟು ನೋಡುವ ಬಗೆ ಕಂಡುಬರುತ್ತದೆ. ಇದಲ್ಲದೆ ಕೊರಗರ ಜನಪದ ಕಥೆ ಪಾಡ್ದನಗಳನ್ನು ಅವಲೋಕಿಸಿದರೆ ನಾವೇನು ಅವರಿಗಿಂತ ಕಡಿಮೆಯಿಲ್ಲ ಎನ್ನುವ

ಮನೋಭಾವ ಅವುಗಳಲ್ಲಿ ವ್ಯಕ್ತವಾಗಿರುವುದು ಎದ್ದು ತೋರುವುದು. ಬಹುಶಃ ಈ ಹಿಂದೆ ನಾವು ಚಾರಿತ್ರಿಕ ಮತ್ತು ಪೌರಾಣಿಕ ಹಿನ್ನೆಲೆಗಳಲ್ಲಿ ಗಮನಿಸಿದಂತೆ ಇವುಗಳಿಗೆ ಉತ್ತರಗಳನ್ನು ಕಂಡುಕೊಳ್ಳಬಹುದಾಗಿದೆ. ಕೊರಗರಿಗೆ ಬ್ರಾಹ್ಮಣರ ಮಾತುಗಳಲ್ಲಿ ಗಾಢ ಶ್ರದ್ಧೆ: ಪ್ರಶ್ನಾತೀತವಾದ ನಂಬಿಕೆ ಉಂಟು. ಈ ವಿಚಾರವನ್ನು ಘಟನೆಯೊಂದರ ಮೂಲಕ ವಿಶದೀಕರಿಸಬಹುದು.

ಕಾಸರಗೋಡು ಜಿಲ್ಲೆಯ ಹಳ್ಳಿಗಳಲ್ಲಿ ವಾಸಿಸುವ ಕೊರಗರಿಗೆ ಸರ್ಕಾರ ನೀಡಿದ ಮನೆಗಳಲ್ಲಿ–ಹಂಚು ಹೊದೆಸಿದ ಮನೆಗಳಲ್ಲಿ–ವಾಸಿಸಲು ಅಲ್ಲಿಯ ಕೊರಗರು ಸದಾ ನಿರಾಕರಿಸುತ್ತಿದ್ದರು. ಈ ವಿಷಯದಲ್ಲಿ ಅಲ್ಲಿಯ ಅಭಿವೃದ್ಧಿ ಅಧಿಕಾರಿಗೆ ಕೊರಗರ ಮನವೊಲಿಸುವುದು ಕಷ್ಟವಾಯಿತು. ಕೊನೆಗೆ ವೈದಿಕರ ಮಾತುಗಳಲ್ಲಿ ಕೊರಗರಿಗೆ ಗಾಢ ಶ್ರದ್ಧೆ ಎನ್ನುವುದನ್ನು ಕಂಡುಕೊಂಡ ಆ ಅಧಿಕಾರಿಯು ತನಗೆ ಗೊತ್ತಿದ್ದ ವ್ಯಕ್ತಿಯೊಬ್ಬನಿಗೆ ವೈದಿಕನ ವೇಷ ಹಾಕಿಸಿ ಕೊರಗರ ಹಳ್ಳಿಗಳಿಗೆ ಅವನನ್ನು ಕರೆದೊಯ್ದರು. ಆ ವೇಷದ ವೈದಿಕನು ಕೊರಗರಿಗೆ ಹಂಚಿನ ಮನೆಗಳಲ್ಲಿ ವಾಸಿಸುವಂತೆ ಉಪದೇಶಿಸಿದನು. ಆಗ ಅಲ್ಲಿಯ ಕೊರಗರು ಹಂಚಿನ ಮನೆಗಳಲ್ಲಿ ವಾಸಿಸುವುದಕ್ಕೆ ಒಪ್ಪಿಕೊಂಡರು. ಆಗ ಅಧಿಕಾರಿ ನೆಮ್ಮದಿಯ ನಿಟ್ಟುಸಿರು ಬಿಟ್ಟನು.

ಈಗಿನ ವಸ್ತು ಸ್ಥಿತಿಯಲ್ಲಿ ಕೊರಗರಿಂದ ವೈದಿಕರು 'ಏನನ್ನೂ ಪಡೆಯುವುದಿಲ್ಲ. ಆದರೆ ಕೊರಗರು ವೈದಿಕರಿಂದ ಅನ್ನವನ್ನು ಪಡೆಯುವ ವಿಷಯವನ್ನು ನಾವು ಈಗಾಗಲೇ ಗಮನಿಸಿದ್ದೇವೆ. ಇವರಿಗಿಂತಲೂ ಹೆಚ್ಚಿನ ಸಂಬಂಧವನ್ನು ಕೊರಗರೊಂದಿಗೆ ಹೊಂದಿರುವ ಭೂ ಮಾಲೀಕರಾದ ಶೂದ್ರರು. ನಂಬಿಕೆ ಮತ್ತು ಸಂಪ್ರದಾಯಗಳ ವಿಶ್ಲೇಷಣೆಯಲ್ಲಿ ನಾವು ಗಮನಿಸಿದಂತೆ ಕೊರಪಳು ಮೊಲೆ-ವುಣಿಸುವ ಸಂಪ್ರದಾಯ ಶೂದ್ರರೊಂದಿಗೆ ಎಂಥ ಗಾಢವಾದ ಸಂಬಂಧವಿದೆ ಎನ್ನುವುದನ್ನು ಸ್ಪಷ್ಟಪಡಿಸುವುದು. ಕೊರಗರ ಎಂಜಲು ನೆಲಕ್ಕೆ ಬಿದ್ದರೆ ವಿಷ ಎಂದು ಪರಿಗಣಿಸುವ ವಿಚಾರವಿದ್ದಾಗ ಅದೇ ಕೊರಗರ ಹೆಂಗಸೊಬ್ಬಳಿಂದ ಮೇಲ್ಜಾತಿಯ ಮಗುವಿಗೆ ಮೊಲೆ ಹಾಲನ್ನು ಉಣಿಸುವುದೆಂದರೆ ಸಾಮಾನ್ಯ ಮಾತಲ್ಲ. ಇದರ ಹಿಂದೆ ಮಗುವನ್ನು ಉಳಿಸಿಕೊಳ್ಳಬೇಕೆಂಬ ಶೂದ್ರರ ಹಂಬಲ ಎಷ್ಟು ಕೆಳಮಟ್ಟಕ್ಕೆ

ಅವರನ್ನು ಇಳಿಸಿಬಿಡುತ್ತದೆ ಎನ್ನುವುದು ಸ್ಪಷ್ಟವಾಗುವುದು. ದುಡಿತದ ಹಿನ್ನೆಲೆಯಲ್ಲಿರುವ ಕೊರಗರು ಇವರಿಗೆ ಹತ್ತಿರವಾಗಿದ್ದಾರೆ.

ಇನ್ನು ಇತ್ತೀಚಿನ ದಿನಮಾನಗಳಲ್ಲಿ ದಲಿತರಲ್ಲಿಯೇ ಒಂದು ಹೊಸ ಬೆಳವಣಿಗೆ ಎನ್ನುವಂತೆ ಕೊರಗರು ಬಾಕುಡರೊಟ್ಟಿಗೆ ಬೆಳೆಸಿದ ಸಂಬಂಧ. ಬಾಕುಡರು ಮೂಲತಃ ಭಂಗಿ ವೃತ್ತಿಯವರಾಗಿದ್ದು ಕೊರಗರು ಮುನಿಸಿಪಾಲಿಟಿಯ ಕೆಲಸಕ್ಕೆ ಸೇರಿದ್ದರಿಂದಾಗಿ ಇವರು ಆ ವೃತ್ತಿಗಂಟಿ ಅವರೊಟ್ಟಿಗೆ ಬೆಳೆಸಿದ ರಕ್ತ ಸಂಬಂಧ ಗಣನೀಯವಾದುದು.

ಕೊರಗರು ಮೇಲ್ಜಾತಿಯ ದೇವರ ಉತ್ಸವಗಳಿಗೆ ಹೋಗಿ ಡೋಲು ಬಾರಿಸುವುದು, ಕೊಳಲು ಊದುವುದು ನರ್ತಿಸುವುದೂ ಉಂಟು. ಅದು ದೇವರ ಸೇವೆಯೆಂದೇ ಕೊರಗರು ನಂಬುವರು. ದೇವರ ಉತ್ಸವಗಳ ಸಂಘಟಕರು ಕೊರಗರನ್ನು ಆಹ್ವಾನಿಸದಿದ್ದರೂ ಅವರು ಸ್ವಯಂ ತಾವೇ ಅಂಥ ಸಮಾರಂಭಗಳಿಗೆ ಸಂತೋಷದಿಂದ ಹೋಗುತ್ತಾರೆ. ಕಾಪುವಿನ ಮಾರಿಕಾಂಬ ಜಾತ್ರೆ ಅಂಥದೊಂದು ಉದಾಹರಣೆಯಾಗಿದೆ.

ಹೀಗೆ ಕೊರಗರ ಮೇಲೆ ಸಾಮಾಜಿಕ-ಸಾಂಸ್ಕೃತಿಕ ನಿಷೇಧಗಳ ನಿರ್ಬಂಧಗಳ ದಾಳಿಯು ಏಕ ಪ್ರಕಾರವಾಗಿ ನಡೆದು ಬಂದಿರುವುದರಿಂದ ಅವರು ಅತ್ಯಂತ ದೀನರೂ ಮತ್ತು ದುರ್ಬಲರೂ ಆಗಿದ್ದಾರೆ. ಬದುಕಿನ ಬಗೆಗೆ ನಿರುತ್ಸಾಹ ಇತರರ ಕುರಿತು ಅಪನಂಬಿಕೆ ಮತ್ತು ಭಯ, ಹೀನಾಯ ಮತ್ತು ಸ್ವನೈರಾಶ್ಯ ಪ್ರವೃತ್ತಿ ಕೊರಗರಲ್ಲಿ ಮನೆ ಮಾಡಿವೆ. ಈ ಎಲ್ಲಾ ಅಂಶಗಳು ಕೊರಗರ ಅಭಿವೃದ್ಧಿಗೆ ಮಾರಕವಾದವುಗಳಾಗಿವೆ.

ಉತ್ತರ ಕರ್ನಾಟಕದ ಭಾಗದಲ್ಲಿ ವಾಸಿಸುವ ಕೊರವರು ಹೆಚ್ಚಾಗಿ ದಕ್ಷಿಣ ಕನ್ನಡದ ಕೊರಗರನ್ನು ಹೋಲುವುದು ಕಾಡುಬರುವುದು. (ಆದರೆ ಉತ್ತರ ಕರ್ನಾಟಕದ ಕೊರವರು ಭಂಗಿ ಕೆಲಸ ಮಾಡುವುದಿಲ್ಲ. ಹಾಗು ದಕ್ಷಿಣ ಕನ್ನಡದ ಎಲ್ಲಾ ಕೊರಗರು ಭಂಗಿ ಕೆಲಸ ಮಾಡುವುದಿಲ್ಲ.) ವೃತ್ತಿಯಲ್ಲಿ ಬುಟ್ಟಿ ಹೆಣೆಯುವ ಮತ್ತು ಸಂಗೀತ ಪ್ರೇಮಿಗಳೂ ಆಗಿರುವವರು ಕೊರವ ಕೊರಗರಿಬ್ಬರೂ.ಈ ಹಿನ್ನೆಲೆಯಲ್ಲಿ ಅಧ್ಯಯನ ನಡೆಯುವುದು ಅವಶ್ಯಕವಾಗಿಗೆ

3.3–ಕೊರಗರ ಜೀವನ ಮಟ್ಟ

ಕೊರಗರಂಥ ಕಡು ಬಡತನದಲ್ಲಿರುವ ಜನಕ್ಕೆ ಯಾವುದೇ ಸಾಮಾಜಿಕ ಸಮಾಜಕ್ಕೊಪ್ಪಿಗೆಯಾಗುವ, ಘನತೆ ತರುವ ಜೀವನಮಟ್ಟ ಸಿಗುವುದು ಸಾಧ್ಯವಿಲ್ಲ. ಕೊರಗರಿಗೂ ನಿರ್ಗತಿಕರಿಗೂ ಯಾವುದೇ ವ್ಯತ್ಯಾಸವಿಲ್ಲ. ಅಲ್ಪಸಂಖ್ಯಾತ ಜನಾಂಗಕ್ಕೆ ಅಸ್ತಿತ್ವವೇ ಹೋರಾಟವಾಗುವುದು. ಈ ಮಾತು ಕೊರಗರಿಗೆ ಅಕ್ಷರಶಃ ಅನ್ವಯಿಸುವುದು.

ಕೊರಗರಲ್ಲಿ ಅನೇಕಾನೇಕರಿಗೆ ಸ್ವಂತ ಭೂಮಿ ಇಲ್ಲ, ವಸತಿ ಇಲ್ಲ, ಕುಡಿಯುವ ನೀರಿನ ಸೌಲಭ್ಯವಿಲ್ಲ, ಅವರ ಮಕ್ಕಳು ಶಾಲೆಗೆ ಹೋಗುವುದಿಲ್ಲ. ಹೀಗೆ ಇಲ್ಲಗಳ ಪಟ್ಟಿ ಉದ್ದವಾಗಿಯೇ ಬೆಳೆಯುವುದು. ಬಡತನ, ಕಂಡಳಕುತನ, ಕಸಗುಡಿಸುವ ಕೆಲಸ, ಭಿಕ್ಷೆ ಎತ್ತುವುದು, ಇತರರ ಎಂಜಲೂಟ ಮಾಡುವುದು. ಶೇಂದಿ ಕುಡಿಯುವುದು ಮುಂತಾದ ಕಾರಣಗಳಿಂದಾಗಿ ಕೊರಗ ಜನಾಂಗಕ್ಕೆ ಅನೇಕ ಬಗೆಯ ರೋಗಗಳು ಅಂಟಿವೆ. ಸರ್ಕಾರಿ ಆಸ್ಪತ್ರೆಗಳಿಗೆ ತೆರಳಿ ಔಷಧೋಪಚಾರ ಪಡೆಯಬೇಕೆನ್ನುವ ಅರಿವೂ ಇರದ ಮುಗ್ಧ, ಅಜ್ಞಾನದ ಮಂದಿ ಕೊರಗರು. ಅಲ್ಲಲ್ಲಿ ಕೆಲಕೆಲವು ಕೊರಗ ಕುಟುಂಬಗಳಿಗೆ ದರಖಾಸ್ತು ಭೂಮಿ—ಒಂದೆರಡು ಎಕರೆ—ದೊರೆತಿದೆ. ಆದರೆ ಅಲ್ಲಿ ನೀರಿಲ್ಲ. ಅಂಥ ಭೂಮಿಗಳಲ್ಲಿ ಕೇವಲ ನೀಲಗಿರಿಯನ್ನೋ, ಸರ್ವೇಮರಗಳನ್ನೋ, ಗೇರುಮರಗಳನ್ನೋ ಮಾತ್ರ ಬೆಳೆಸಬಹುದಾಗಿದೆ. ಇಂಥ ಕಳಪೆ ಗುಣಮಟ್ಟದ ಒಣ ಭೂಮಿಯನ್ನು ಅಭಿವೃದ್ಧಿಪಡಿಸುವಂತೆ ಕೊರಗರನ್ನು ತರಪೇತುಗೊಳಿಸಬೇಕು.

ಬಹುಸಂಖ್ಯಾತ ಕೊರಗರದ್ದು ಮುಳಿಹುಲ್ಲಿನ ಮನೆ. ಕೊರಗರು ವಾಸಿಸುವ ಜಾಗಗಳು ಕಾಡಿನ ಜಾಗಗಳು, ಎಲ್ಲಾ ಸರ್ಕಾರಿ ದರಖಾಸ್ತು ಭೂಮಿಗಳು ಇವರಿಗೆಲ್ಲಾ ಇನ್ನೂ ಪಟ್ಟಾ ಕೂಡಾ ಸಿಕ್ಕಿಲ್ಲ. ಮಳೆಯಲ್ಲಿ ಸೋರುವ ಒಂದು ರೂಮಿನ ಮನೆಗಳು. ಕೊರಗರ ಮನೆಗಳು ಬಹುಮಟ್ಟಿಗೆ ದನದ ಕೊಟ್ಟಿಗೆಗಳಂತೆ ಕಾಣುವುವು. ಅಲ್ಲಿ ಧಾರಾಳವಾಗಿ ಗಾಳಿ, ಬೆಳಕು ಬರುವುದಿಲ್ಲ. ಕೊರಗರ ಪ್ರಿಯವಾದ ಪ್ರಾಣಿಗಳು ನಾಯಿ ಮತ್ತು ಕೋಳಿಗಳು: ಬೆತ್ತದ ಸರಕು, ಬೆತ್ತದ ಉತ್ಪನ್ನ ನಾಲ್ಕಾರು ಮಕ್ಕಳು ಗಂಡ ಹೆಂಡತಿ–ಎಲ್ಲಕ್ಕೂ ಒಂದು ರೂಮಿನ ಮನೆಯೇ ಆಧಾರ. ಕೊರಗರ ಕಾಲೋನಿಗಳಿಗೆ ಇಂದಿಗೂ ವಿದ್ಯುಚ್ಛಕ್ತಿ ಬಂದಿಲ್ಲ.

ಅವರು ಸೀಮೆ ಎಣ್ಣೆ ದೀಪಗಳನ್ನು ಬಳಸುತ್ತಾರೆ ದಿನದ ಶ್ರಮದ ದುಡಿಮೆಯ ನಂತರ ಸಂಜೆ ಆರೇಳು ಘಂಟೆಗೇ ಊಟ ಮಾಡಿ, ಸೇಂದಿ ಕುಡಿದು ಬೇಗನೆ ಮಲಗುವುದು ಕೊರಗರ ಹವ್ಯಾಸ. ಇದೇ ಅವರ ದಿನಚರಿ.

ಒಟ್ಟಿನಲ್ಲಿ ಕೊರಗರು ಬಡವರಲ್ಲಿ ಕಡುಬಡವರು. ಅನಾರೋಗ್ಯ ಕೊರಗ ಜನಾಂಗದ ದೀರ್ಘಕಾಲೀನ ಅಸ್ತಿತ್ವಕ್ಕೇ ಧಕ್ಕೆಯಿದೆ. ಈ ಅಪಾಯದಿಂದ ಕೊರಗರನ್ನು ಪಾರುಮಾಡಬೇಕು. ಇದು ಇಂದಿನ ಜರೂರು ಆಗತ್ಯ. ಈ ಕಾರ್ಯ ಸಾಧಿಸಲು ಕೊರಗರಿಗೆ ಉತ್ತಮ ವೃತ್ತಿಗಳು ಮತ್ತು ವಾಸಕ್ಕೆ ಮನೆ ಮತ್ತು ಆರೋಗ್ಯ ಸೇವೆಗಳನ್ನು ಪೂರೈಸುವುದರ ಮೂಲಕ ಸಾಧಿಸಬಹುದಾಗಿದೆ.

ಸರ್ಕಾರದ ಸಾಮಾಜಿಕ ನ್ಯಾಯ ಕಲ್ಪಿಸುವ ಯೋಗಕ್ಷೇಮ ಕಾರ್ಯಕ್ರಮಗಳ ಲಾಭ ಅಲ್ಲಲ್ಲಿ ಕೆಲವು ಕೊರಗ ಕುಟುಂಬಗಳಿಗೆ ಲಭಿಸಿದೆ. 15ರಿಂದ 20 ಸೆಂಟ್ಸ್‌ಗಳ ಉಚಿತ ಸೈಟು, ಜನತಾ ಮನೆ ಸೌಲಭ್ಯ ದೊರಕಿರುವ ಕೊರಗರೂ ಉಂಟು. ಕೊರಗರಲ್ಲಿ ಶೈಕ್ಷಣಿಕ ಕ್ರಾಂತಿ ತರಲು ಸರ್ಕಾರ ಉಡುಪಿ ತಾಲ್ಲೂಕಿನಲ್ಲೊಂದು ವಸತಿ ಶಾಲೆ ಸ್ಥಾಪಿಸಿದೆ. ಶಾಲೆಗಳಿಗೆ ಹೋಗುವ ಕೊರಗ ಮಕ್ಕಳಿಗೆ ಪ್ರತಿ ತಿಂಗಳಿಗೆ ನೂರು ರೂಪಾಯಿಗಳ ವಿದ್ಯಾರ್ಥಿ ವೇತನವನ್ನೂ ಸರ್ಕಾರ ನೀಡುತ್ತಿದೆ. ಹೀಗಿದ್ದರೂ ನಮ್ಮ ಶಾಲೆಗಳು ಕೊರಗ ಮಕ್ಕಳನ್ನು ಆಕರ್ಷಿಸುತ್ತಿಲ್ಲ. ಪ್ರಾಥಮಿಕ ಹಂತದ ನಂತರ ಶಿಕ್ಷಣ ತೊರೆದು ಮನೆಯಲ್ಲಿ ಬುಟ್ಟಿ ಹೆಣೆಯಲು ಕೂರುವ ಕೊರಗ ಮಕ್ಕಳೇ ಹೆಚ್ಚು. ಹೀಗಾಗಿ ಸರ್ಕಾರದ ಉನ್ನತ ಹುದ್ದೆಗಳಲ್ಲಿ ಕೊರಗರ ಪ್ರಾತಿನಿಧ್ಯವಿಲ್ಲವಾಗಿದೆ. ಕೊರಗರು ತಮ್ಮ ಮಾನವ ಶಕ್ತಿಯನ್ನು ಅಭಿವೃದ್ಧಿಪಡಿಸಿಕೊಳ್ಳದೆ ಸರ್ಕಾರ ಕೊಡಮಾಡಿರುವ ಪರಿಶಿಷ್ಟ ಪಂಗಡ ಮೀಸಲಾತಿ ಸೌಲಭ್ಯ ಅವರಿಗೆ ದೊರಕುವುದಿಲ್ಲ. ಶಿಕ್ಷಣ ದೊರಕದೆ ಕೊರಗರ ಸರ್ವಾಂಗೀಣ ಪ್ರಗತಿ ಸಾಧ್ಯವಿಲ್ಲ. ಜೀವನಮಟ್ಟ ಹೆಚ್ಚಳ ಆಗದು.

3.4- ಕೊರಗರ ಸಮಸ್ಯೆಗಳು:-

ಕೊರಗರ ಕುರಿತ ನಮ್ಮ ವಿಶ್ಲೇಷಣಾತ್ಮಕ ಅಧ್ಯಯನದಲ್ಲಿ ಸಂದರ್ಭಕ್ಕನುಸಾರವಾಗಿ ಅಲ್ಲಲ್ಲಿ ಅವರ ಸಮಸ್ಯೆಗಳನ್ನು ಕುರಿತು ಮತ್ತು

ಸಮಸ್ಯೆಗಳ ಜಾಲದಲ್ಲಿ ಸಿಗುವ ಬಗೆಯು ಕುರಿತು ಸೂಕ್ಷ್ಮವಾಗಿ ಗಮನಿಸಿದ್ದೇವೆ. ಅಂತಹ ಸಮಸ್ಯೆಗಳನ್ನೆಲ್ಲಾ ಒಟ್ಟು ಕ್ರೋಢೀಕರಿಸಿ ಕೊಡುವುದೇ ಇಲ್ಲಿಯ ಉದ್ದೇಶವಾಗಿದೆ.

ಕೊರಗ ಜನಾಂಗದ ಸಮಸ್ಯೆಗಳನ್ನು ಒಟ್ಟು ಅಧ್ಯಯನದ ಹಿನ್ನೆಲೆಯಲ್ಲಿ ಮೂರು ರೀತಿಯಲ್ಲಿ ಪ್ರತ್ಯೇಕವಾಗಿ ಗುರುತಿಸಿಕೊಳ್ಳಬಹುದು.

1. ಸಾಂಸ್ಕೃತಿಕ ಸಮಸ್ಯೆಗಳು. 2. ಸಾಮಾಜಿಕ ಸಮಸ್ಯೆಗಳು.

3. ಆರ್ಥಿಕ ಸಮಸ್ಯೆಗಳು.

ಈ ಬಗೆಯ ವರ್ಗೀಕರಣದ ವಿವರಣಾತ್ಮಕ ಪಟ್ಟಿ ಮುಂದೆ ಸಮಸ್ಯೆಗಳ ಪರಿಹಾರ ಕ್ರಮಗಳನ್ನು ಗುರುತಿಸಿಕೊಳ್ಳುವಲ್ಲಿ ಅನುಕೂಲವಾಗುತ್ತದೆ.

1. ಸಾಂಸ್ಕೃತಿಕ ಸಮಸ್ಯೆಗಳು:

ಸಾಂಸ್ಕೃತಿಕ ಸಮಸ್ಯೆಗಳಲ್ಲಿ ವ್ಯಕ್ತಿಗತ ಸಮಸ್ಯೆಗಿಂತ ಸಾರ್ವತ್ರಿಕವಾದ ಜನಾಂಗೀಯ ಮಟ್ಟದ ಸಮಸ್ಯೆ ಮಹತ್ವದ್ದಾಗುತ್ತದೆ. ಹೀಗಿರುವುದರಿಂದ ಪರಿಹಾರ ಸೂಚಕ ಸಂಬಂಧವನ್ನಿಟ್ಟುಕೊಂಡೇ ಸಮಸ್ಯೆಗಳನ್ನು ನೀಡುವ ಪ್ರಯತ್ನ ಇಲ್ಲಿಯದ್ದಾಗಿದೆ.

ಈ ಹಿಂದೆಯೇ ಪ್ರಸ್ತಾಪಿಸಿದಂತೆ ಅವರ ಸಂಗೀತ ಕುರಿತ ಸಮಸ್ಯೆ ಮಹತ್ವದ್ದೆನಿಸುತ್ತದೆ. ಹಲವು ಬಗೆಯ ವಾದ್ಯಗಳನ್ನು ನುಡಿಸುವಲ್ಲಿ ಪ್ರಾವೀಣ್ಯತೆ ಪಡೆದುಕೊಂಡ ಕೊರಗರ ಕಲೆಗೆ ಯಾವುದೇ ಬಗೆಯ ಮಹತ್ವ ದೊರಕಿಲ್ಲ. ಹೀಗೆಂದ ಮಾತ್ರಕ್ಕೆ ಅವರ ಕಲೆ ನಿಕೃಷ್ಟವಾದುದೆಂದೇನೂ ಅಲ್ಲ. ಉತ್ತಮವಾದ ಕೊಳಲುವಾದಕರು, ಡೋಲು ಬಾರಿಸುವವರು ಕೊರಗರಲ್ಲಿದ್ದಾರೆ. ಸಾರ್ವತ್ರಿಕವಾಗಿ ಇವರ ಕಲೆ ಬಳಕೆಯಾಗುತ್ತಿದ್ದರೂ ಅದು ಕೇವಲ ನೆಪ ಮಾತ್ರವಾಗಿದೆ.

ಮನರಂಜನೆಗೆ ಸಂಬಂಧಪಟ್ಟಂತೆ ಕೊರಗರಿಗೆ ತಮ್ಮದೇ ಆದ ಯಾವುದೇ ವಿಶಿಷ್ಟ ಬಗೆಯ ಇತರೇ ಮಾರ್ಗಗಳಿರುವುದು ಕಂಡು ಬರುವುದಿಲ್ಲ.

ಸಂಗೀತವೆಂಬುದು ಮನರಂಜನೆಗೆ ಮಾರ್ಗವಾಗಿದ್ದರೂ ದೈನಂದಿನ ಮನರಂಜನಾ ಚಟುವಟಿಕೆಯಲ್ಲಿ ಅದನ್ನು ಸೇರಿಸುವುದು ಸಮಂಜಸವೆನಿಸುವುದಿಲ್ಲ. ಜನಪದದ ಆಟಗಳು ಎನ್ನುವಂಥವು ತೀರಾ ವಿರಳವಾಗಿ ಪ್ರವೇಶಿಸಲ್ಪಟ್ಟಿದೆ. ಗ್ರಾಮಗಳ ಸಂಪರ್ಕವಿದ್ದವರಿಗೆ ಮಾತ್ರ ಇವುಗಳ ಪರಿಚಯ ಇದೆ. ಆದರೆ ಇವೂ ಕೂಡ ಅಧಿಕೃತವಾಗಿ ಮನರಂಜನೆಯನ್ನು ಒದಗಿಸುತ್ತವೆ ಎಂದು ಹೇಳಲಾಗುವುದಿಲ್ಲ.

2. ಸಾಮಾಜಿಕ ಸಮಸ್ಯೆಗಳು

ಸಾಮಾಜಿಕವಾಗಿ ಸಮಸ್ಯೆಯಲ್ಲಿ ವ್ಯಕ್ತಿಗತವಾದ ಸಮಸ್ಯೆಯೂ ಸಾಮಾಜಿಕ (ಸಾರ್ವತ್ರಿಕ)ಆಯಾಮ ಪಡೆದುಕೊಳ್ಳುತ್ತದೆ. ಸಾಮಾಜಿಕ ಸಮಸ್ಯೆಗಳು ಸಾಂಸ್ಕೃತಿಕ ಸಮಸ್ಯೆಗಳೊಂದಿಗೆ ನೇರವಾಗಿ ತಳುಕು ಹಾಕಿಕೊಂಡು ಅವರ ಜೀವನಪರಂಪರಾಗತವಾದಮಾರ್ಗವೊಂದುಘಟ್ಟವಾದರೆ ನಾಗರಿಕತೆಯ ಬದುಕಿಗೆ ಕೊರಗರು ಒಗ್ಗಿಕೊಳ್ಳಲು ಹವಣಿಸುತ್ತಿರುವುದು ಇನ್ನೊಂದು ಘಟ್ಟವಾಗುತ್ತದೆ ಈ ಎರಡೂ ಘಟ್ಟಗಳ ಮಧ್ಯದಲ್ಲಿ ನಡೆಯುವ ಸಂಘರ್ಷವೇ ಕೊರಗರು ಎದುರಿಸುತ್ತಿರುವ ಸಾಮಾಜಿಕ ಸಮಸ್ಯೆಗಳಿಗೆ ಕಾರಣವೂ ಆಗಿದೆ.

ಕೊರಗ ಜನಾಂಗದವರು ಮುಖ್ಯವಾಗಿ ಅವಿಭಕ್ತ ಕುಟುಂಬ ಹೊಂದಿದವರು. ಒಂದೊಂದು ಮನೆಯಲ್ಲಿ ಇಪ್ಪತ್ತೆರಡು ಕುಟುಂಬಗಳು ಒಟ್ಟಿಗೇ ವಾಸಿಸುವ ಉದಾಹರಣೆಯೂ ಸಿಕ್ಕುತ್ತದೆ. ಇಂತಹ ಸಂದರ್ಭದಲ್ಲಿ ಕೊರಗರಿಗೆ ವಸತಿ ಸೌಕರ್ಯ ಒದಗಿಸುವುದು ತುಂಬಾ ಕಷ್ಟದಾಯಕವಾದುದು. ಅವಿಭಕ್ತ ಕುಟುಂಬವಾಗಿಯೇ ಇರಬೇಕೆನ್ನುವುದು ಕೊರಗರ ನಂಬಿಕೆ. ಅವಿಭಕ್ತ ಕುಟುಂಬ ಬೆಳವಣಿಗೆಯ ಲಕ್ಷಣವಲ್ಲವೆಂದು ಬಗೆದ ನಾಗರಿಕ ಸಂಪ್ರದಾಯದ ವ್ಯವಸ್ಥೆ. ಪ್ರತ್ಯೇಕ ಮನೆಗಳನ್ನು ಕಟ್ಟಿಸಿಕೊಡುವಂಥ ಯೋಜನೆ ರೂಪಿಸಿದ ಉದಾಹರಣೆಗಳಿವೆ. ಆದರೆ ಅಂತಹ ಮನೆಗಳನ್ನು ಬಳಸಿಕೊಳ್ಳಲಾಗದೆ ಹಾಗೆ ಉಳಿದಿರುವ ಉದಾಹರಣೆಗಳು ದೊರೆಯುತ್ತವೆ.

ಕೆಲವೊಂದು ನಂಬಿಕೆ ಆಚರಣೆಗಳಿಂದಾಗಿ ಇವರ ಬದುಕು ಮತ್ತಷ್ಟು ಹಿಂದುಳಿಯಲು ಸಹಾಯಕವಾಗಿರುವುದನ್ನು ಈ ಹಿಂದೆಯೇ ಚರ್ಚಿಸಿದ್ದೇವೆ. ಉದಾ: ವಸತಿಗಾಗಿ ನಿರ್ಮಿಸಿಕೊಟ್ಟ ಮನೆಯೊಂದರಲ್ಲಿ 'ಹಿರಿಯ' ಕೊರಗ ಮರಣ

ಹೊಂದಿಪರೆ ಉಳಿದವರು ಮಕ್ಕಳೊಂದಿಗೆ ತಾಯಿ ಮನೆಯಲ್ಲಿ ವಾಸಿಸುತ್ತಾರೆ. ಮೊದಲಿನ ಮನೆಯಲ್ಲಿ ಸೂತಕದ ಮನೆಯೆಂದು ತೊರೆದು ಬಿಡುತ್ತಾರೆ. ಮಾತೃ ಪ್ರಧಾನ ವ್ಯವಸ್ಥೆಯ ನಿಯಮಾಚರಣೆಗೆ ಬದ್ಧವಾದ ಕೆಲ ಕುಟುಂಬಗಳು ಪಿತೃ ಪ್ರಧಾನ ವ್ಯವಸ್ಥೆಯ ನಿಯಮಾಚರಣೆಗಳನ್ನು ಅರಿಯದಿರುವುದರಿಂದ ಸಮಸ್ಯೆಗೊಳಗಾಗುತ್ತಿದಾರೆ. ಸರ್ಕಾರದ ಹಾಗೂ ಸಮಾಜದ ಪಿತೃಪ್ರಧಾನ ನಿಯಮಗಳು, ಇವರ ಪರಂಪರೆಯ ಮಾತೃಪ್ರಧಾನ ನಿಯಮಗಳು ಪರಸ್ಪರ ಸಂಘರ್ಷಕ್ಕೊಳಪಟ್ಟು, ಸರ್ಕಾರ ಕೊಟ್ಟ ಸವಲತ್ತುಗಳು ಅರ್ಥಹೀನವಾಗುತ್ತವೆ.

ಶಿಕ್ಷಣ ವ್ಯವಸ್ಥೆಗೆ ಸಂಬಂಧಿಸಿದಂತೆಯೂ ಕೊರಗರಲ್ಲಿ ಹೊಸ ಸಮಸ್ಯೆಗಳು ಹುಟ್ಟಿಕೊಳ್ಳುತ್ತಲಿವೆ. ಮೊದಲ ತಲೆಮಾರಿನಲ್ಲಿ. ಶಿಕ್ಷಣಕ್ಕೆ ಒಳಪಡಿಸುತ್ತಿರುವ ಪೀಳಿಗೆಯಲ್ಲಿ ಹೆಣ್ಣಿನವೊಂದು ಬಗೆಯ ಸಮಸ್ಯೆಯಾದರೆ, ಗಂಡಿನದೊಂದು ಬಗೆಯದು. ಕೊರಗರ ಒಂದು ಸಮಾಜದಲ್ಲಿ ಒಂದು ಅಥವಾ ಎರಡು ಮನೆತನಗಳು ಸ್ವಲ್ಪ ಮುಂದುವರಿದಿದ್ದು, ಹೆಚ್ಚಾಗಿ ಪ್ರಾಥಮಿಕ ಮಾಧ್ಯಮಿಕ ಶಿಕ್ಷಣವನ್ನು ಪಡೆದಿದ್ದಾರೆ. ಬಳಿ ಪದ್ಧತಿಯ ಸಂಬಂಧಗಳು ಇರುವುದರಿಂದ (ಒಂದೇ ಬಳಿಯಲ್ಲಿ ವಿವಾಹ ನಿಶಿದ್ಧವಾದುದರಿಂದ) ಒಂದೇ ಬಳಿಯವರು ಶಿಕ್ಷಣ ಪಡೆದಾಗ ಆ ಕುಟುಂಬದೊಂದಿಗೆ ರಕ್ತ ಸಂಬಂಧ ಬೆಳೆಸುವುದಕ್ಕೆ ಇನ್ನುಳಿದವರು ಮನಸ್ಸು ಮಾಡದಿರುವುದು ಕಂಡು ಬರುತ್ತದೆ. ಕಲಿತ ಹೆಣ್ಣನ್ನು ಯಾರಿಗೆ ಕೊಟ್ಟು ಮದುವೆ ಮಾಡಬೇಕು ಎನ್ನುವುದು ತಂದೆಯ ಸಮಸ್ಯೆಯಾದರೆ, ಕಲಿತ ಹೆಣ್ಣನ್ನು ತಂದು ಸಾಕುವ ಸಾಮರ್ಥ್ಯ ನಮಗಿದೆಯೇ? ಎಂದು ಇನ್ನೊಂದು ಕುಟುಂಬ ಪ್ರಶ್ನಿಸಿಕೊಳ್ಳುತ್ತದೆ.

ಕೊರಗರು ಬಟ್ಟೆಯನ್ನು ತೊಡದಿರುವುದಕ್ಕೆ ಅವರಲ್ಲಿ ತಮ್ಮದೇ ಆದ ಕಥೆಗಳಿವೆ: ನಂಬಿಕೆಗಳಿವೆ. ಇವುಗಳನ್ನು ಮೀರಲು ಕೊರಗರಿಗೆ ಸಾಧ್ಯವಾಗುತ್ತಿಲ್ಲ. ಇದರಂತೆಯೇ ಎಂಜಲು ಅಥವಾ ಬಿಕ್ಷಾನ್ನ ತಿನ್ನುವುದಕ್ಕೆ ತಮ್ಮದೇ ಆದ ಪೌರಾಣಿಕ ಕಥೆಗಳಿರುವುದರಿಂದ ಇವುಗಳನ್ನು ಬಿಟ್ಟು ಹೊರಬಂದರೆ ನಮಗೆ ಕೇಡಾಗುವುದೆಂದು ನಂಬಿರುವುದರಿಂದ ಇಂಥ ನಂಬಿಕೆಗಳಿಂದ ಅವರು ಮುಕ್ತರಾಗುತ್ತಿಲ್ಲ. ಇದರೊಂದಿಗೆ ಸೇರಿಕೊಂಡು ಬಂದಿರುವ ಅಸ್ಪೃಶ್ಯತೆಯ ಪಿಡುಗು ಬಂದಾಗಿದೆ. ಈ ಬದುಕಿಗೆ ಪ್ರತ್ಯುತ್ತರವಾಗಿ

ಕೊರಗರು ಜ್ವರದಡ್ಡೆ, ಕುಷ್ಠರೋಗ, ಆನೆಕಾಲು ಕ್ಷಯ-ಇಂತಹ ರೋಗಗಳಿಂದ ಬಳಲುವುದು ಕಂಡುಬರುತ್ತದೆ.

ಕೊರಗರು ದ್ವಿಭಾಷಿಗಳೂ ಮತ್ತು ಬಹುಮುಖ ಭಾಷಿಗಳೂ ಆಗಿರುವುದರಿಂದ ಅವರು ತಮ್ಮ ಕೊರಗ ಭಾಷೆಯನ್ನು ಮರೆಯುತ್ತಿದ್ದಾರೆ. ಈ ಅರ್ಥದಲ್ಲಿ ಕೊರಗ ಭಾಷೆ ತನ್ನ ಬೇರನ್ನೆ ಕಳಚಿಕೊಳ್ಳುತ್ತಿದೆ. ಇದು ಕೇವಲ ಭಾಷೆಯ ಸಮಸ್ಯೆಯಾಗದೆ ಇದರೊಂದಿಗೆ ಸಾಂಸ್ಕೃತಿಕ ಸಮಸ್ಯೆಗಳು ತಲೆ ಎತ್ತಿವೆ.

3. ಆರ್ಥಿಕ ಸಮಸ್ಯೆಗಳು:

ಕೊರಗರು ಆರ್ಥಿಕವಾಗಿ ಶೋಷಿಸಲ್ಪಟ್ಟವರು ಮತ್ತು ಶೋಷಿಸಲ್ಪಡುತ್ತಿರುವವರು. ಕೊರಗರ ಆರ್ಥಿಕ ಸಮಸ್ಯೆಗಳು ಅವರ ಸಾಮಾಜಿಕ, ಸಾಂಸ್ಕೃತಿಕ ಹಿಂದುಳಿಯುವಿಕೆಯೊಂದಿಗೆ ತಳಕು ಹಾಕಿಕೊಂಡಿವೆ ಹೀಗಾಗಿ ಕೊರಗರ ಆರ್ಥಿಕ ಅಭಿವೃದ್ಧಿ ಅವರ ಇತರೇ ಸಮಸ್ಯೆಗಳ ಪರಿಹಾರಕ್ಕೂ ಸಹಾಯಕವಾಗುವುದು.

ಕೊರಗರ ಸರ್ವಾಂಗೀಣ ಹಿಂದುಳಿಯುವಿಕೆಯನ್ನು ಪರಿಹರಿಸಲು ಕೊರಗರಿಗೆ ಆರ್ಥಿಕ ಸ್ವಾತಂತ್ರ್ಯ ಲಭಿಸುವಂತೆ ಮಾಡಬೇಕು. ಕೊರಗರ ಆರ್ಥಿಕ ಸಮಸ್ಯೆಗಳೆಂದರೆ ನಿರುದ್ಯೋಗ, ಅರೆ-ಉದ್ಯೋಗ, ವಸತಿ ಹೀನತೆ, ನಿರಕ್ಷರತೆ, ಅನಾರೋಗ್ಯ, ನಾಗರಿಕ ಸವಲತ್ತುಗಳು ಕೊರಗರಿಗೆ ಲಭಿಸದಿರುವುದು, ಭೂಮಿರಹಿತತೆ ಆಗಿವೆ. ಈ ಸಮಸ್ಯೆಗಳಿಗೆ ಸರ್ಕಾರವು ಶೀಘ್ರ ಪರಿಹಾರಗಳನ್ನು ರೂಪಿಸಬೇಕಾಗಿದೆ.

ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳ ಪ್ರತಿಫಲ ಗ್ರಾಮಾಂತರ ಪ್ರದೇಶಗಳಲ್ಲಿರುವ ಕೊರಗರಿಗೆ ಇನ್ನೂ ತೃಪ್ತಿಕರವಾಗಿ ತಲುಪಿಲ್ಲ. ಈ ಸಮಸ್ಯೆಯನ್ನು ಪರಿಹರಿಸಲು ಇಂದು ಆದ್ಯ ಗಮನ ನೀಡಬೇಕಾಗಿದೆ. ಈ ಹಂತದಲ್ಲಿ ಆಗುವ ಸೋರಿಕೆಯನ್ನೂ ತಡೆಗಟ್ಟುವುದೇ ಸಮಸ್ಯೆಯ ಇನ್ನೊಂದು ಮುಖ.

ಕೊರಗರಲ್ಲಿ ಆರ್ಥಿಕ ಆಧುನೀಕರಣ ತರಲು ಶಿಕ್ಷಣವನ್ನೇ ಆಶ್ರಯಿಸಬೇಕು.

ಕೊರಗರ ಸಮಗ್ರ ಏಳ್ಗೆಗೆ ಶೈಕ್ಷಣಿಕ-ಉದ್ಯೋಗ ಸಂಬಂಧಿ ಬದಲಾವಣೆಗಳನ್ನು ತರುವುದು ಅವಶ್ಯ.

ಪರಿಹಾರಕ್ಕೆ ಸಲಹೆ ಸೂಚನೆಗಳು:

ಕೊರಗ ಜನಾಂಗದ ಸಮಸ್ಯೆಗಳನ್ನು ಅವಲೋಕಿಸಿದ ನಂತರ ಪರಿಹಾರಗಳನ್ನು ಸೂಚಿಸುವ ಮುಖ್ಯವಾದ ಹಂತಕ್ಕೆ ನಾವು ಬಂದಿದ್ದೇವೆ. ಪರಿಹಾರ ಎಂದಾಕ್ಷಣ ಥಟ್ಟನೆ ಎದುರಾಗುವ ಪ್ರಶ್ನೆ ಯಾವ ಬಗೆಯದ್ದು ಎನ್ನುವುದು. ಇದರಲ್ಲಿಯೇ ಎರಡು ಬಗೆಗಳಿವೆ.

1. ಸಾಂಪ್ರದಾಯಿಕ ವ್ಯವಸ್ಥೆಗೆ ಬದ್ಧವಾಗಿರುವಂಥ ಪರಿಹಾರಗಳನ್ನು ಕೊಡುವುದು.

2. ಸಾಂಪ್ರದಾಯಿಕ ವ್ಯವಸ್ಥೆಯನ್ನು ಮೀರಿ ಸಮಸ್ಯೆಗಳಿಗೆ ಪರಿಹಾರಗಳನ್ನು ಸೂಚಿಸುವಂಥದ್ದು. ಸಾಂಪ್ರದಾಯಿಕ ವ್ಯವಸ್ಥೆಗೆ ಬದ್ಧವಾಗುವಂಥ ಪರಿಹಾರಗಳನ್ನು ನೀಡಿದರೆ ಅವರನ್ನು ಮತ್ತೆ ವ್ಯವಸ್ಥೆಯ ಇನ್ನೊಂದು ಮುಖದಿಂದ ಹತ್ತಿಕ್ಕುವ ಪರಿಸರಕ್ಕೆ ಜೋಡಿಸಿದಂತಾಗುತ್ತದೆ ಸಾಮಾನ್ಯವಾಗಿ ಇತ್ತೀಚಿನ ದಿನಗಳಲ್ಲಿ ಇಂತಹ ಪರಿಹಾರ ಕ್ರಮಗಳೇ ಜಾರಿಗೆ ಬರುತ್ತಿರುವುದು ಕಂಡುಬರುತ್ತದೆ. ಉದಾ: ದೇವಮಂದಿರಗಳನ್ನು ಕಟ್ಟಿಸಿಕೊಡುವುದು, ಭಜನೆಗಾಗಿ ದಲಿತರಿಗೆ ಭಜನಾ ಸಾಮಗ್ರಿಗಳನ್ನು ಕೊಡಿಸುವುದು ಇನ್ನುಳಿದ ಜನಗಳೊಂದಿಗೆ ಬೆರೆಯದಂತೆ ಪ್ರತ್ಯೇಕತಾ ನೀತಿಯನ್ನು ಸುಧಾರಣೆಗೆ ಕೈ ಹಾಕುವುದು, ಸಂಸ್ಕೃತಿ ಎನ್ನುವ ಹೆಸರಿನಲ್ಲಿ ರೂಢಿಗತವಾದ ಬಾಹ್ಯ ಮೌಲ್ಯಗಳನ್ನೇ ಎತ್ತಿ ಹಿಡಿಯುವಂಥ ಚಟುವಟಿಕೆಗಳಲ್ಲಿ ತೊಡಗುವುದು ಕಾಣುತ್ತದೆ. ಇಂಥವು ಹೊಸ ಬದುಕಿನ ಮೌಲ್ಯಗಳಿಗೆ ಒಗ್ಗಿಕೊಳ್ಳುವ ಜನತೆಗೆ ಅವಶ್ಯಕವಾದವುಗಳಲ್ಲ. 'ಏಕೆಂದರೆ ಆ ಚಟುವಟಿಕೆಗಳು ದೈನಂದಿನ ಬದುಕಿನ ಜ್ವಲಂತ ಸಮಸ್ಯೆಗಳನ್ನು ಮರೆಸಿ ಪಾರಮಾರ್ಥಿಕ ಲೋಕದೆಡೆಗೆ ಅವರನ್ನು ಕೊಂಡೊಯ್ಯುತ್ತವೆ. ಆಗ ಚಿಂತನೆಯು ಮಾರ್ಗಕ್ಕೆ ! ಗೋಡೆಕಟ್ಟಿದಂತಾಗುತ್ತದೆ. ಆದ್ದರಿಂದ ಇಂಥ ಪರಿಹಾರಗಳಿಂದ ಮನ:ಶಾಂತಿ ಎನ್ನುವ ಭ್ರಮೆಯನ್ನು ಹೊರತುಪಡಿಸಿದರೆ ಬೇರೇನೂ ಲಾಭವಿಲ್ಲ.

ಕೊರಗರಿಗೆ ತಮ್ಮದೇ ಆದ ಸಂಗೀತವಿರುವುದರಿಂದ, ವಾದ್ಯಗಳಿರುವುದರಿಂದ ಅದೇ ಮಾದರಿಯ ಆಧುನಿಕ ಉಪಕರಣಗಳೂ ಬಂದಿರುವುದರಿಂದ ಇಂಥ ಉಪಕರಣಗಳನ್ನು ಒದಗಿಸಿಕೊಡಬೇಕು. ಈ ಸಂಗೀತವನ್ನು ಆರಾಧನೆ ಕ್ರಮದಿಂದ ಪ್ರತ್ಯೇಕಗೊಳಿಸಿ ಸಾರ್ವತ್ರಿಕತೆಯೆಡೆಗೆ ತಂದು ಕೊಟ್ಟಾಗ ಇವರು ಸಮಾಜದ ಇತರ ಜನರೊಂದಿಗೆ ಶೀಘ್ರವಾಗಿ ಬೆರೆಯಲು ಸಾಧ್ಯವಾಗುತ್ತದೆ. ಜೊತೆಗೆ ಕಲೆ ಸಾರ್ವತ್ರಿಕವಾಗುವುದರೊಂದಿಗೆ ಆರ್ಥಿಕವಾಗಿ ಆದಾಯ ತರುವಂಥದಾಗುತ್ತದೆ

ಈ ಕ್ರಮವೇ ಅತ್ಯಂತ ಉತ್ಕೃಷ್ಟವಾದದ್ದೆಂದೇನೂ ಅಲ್ಲ. ಅವರ ವೃತ್ತಿಯನ್ನು ಬೆಳೆಸಿ ಅವರಿಗೇ ಅದನ್ನು ಮಾಡಲು ಹಚ್ಚಿದಂತಾಗುತ್ತದೆ. ಬೇರೆ ವೃತ್ತಿ ಮಾಡಬಾರದೇ? ಅವರ ವೃತ್ತಿ ಅವರೇ 'ಏಕೆ ಮಾಡಬೇಕು, ಎನ್ನುವ ಪ್ರಶ್ನೆಗಳು 'ಏಳುತ್ತವೆ. ಇಲ್ಲಿ ಬೇರೆ ವೃತ್ತಿಯನ್ನು ಅವರು ಮಾಡಬಾರದೆಂದೇನೂ ಇಲ್ಲ. ಒಂದು ವೃತ್ತಿಯಿಂದ ಇನ್ನೊಂದು ವೃತ್ತಿಗೆ ಒಗ್ಗಿ—ಕೊಳ್ಳುವುದು ಬಹಳ ಕಷ್ಟದಾಯಕವಾದುದು. ಮೂಲದ ವೃತ್ತಿಯಿಂದ ಅದೇ ಮಾದರಿಯ ಆಧುನಿಕ ವೃತ್ತಿಗೆ ಹೊಂದಿಕೊಳ್ಳುವುದು ಬೆಳವಣಿಗೆಯ ಒಂದು ಘಟ್ಟವಾಗುತ್ತದೆ. ಎರಡನೆಯ ಘಟ್ಟದಲ್ಲಿ ಬೇರೆ ವೃತ್ತಿಗಳಿಗೆ ಹೊಂದಿಕೊಳ್ಳುವುದು ಮಾನಸಿಕ ಸಿದ್ಧತೆಯೂ ಆಗಿರುತ್ತದೆ. ಜೊತೆಗೆ ಆರ್ಥಿಕತೆಯ ಬೆನ್ನೆಲುಬು ಸಿಕ್ಕಾಗ ಅನ್ಯ ವೃತ್ತಿಗೆ ತಮ್ಮಷ್ಟಕ್ಕೆ ತಾವೇ ತಿರುಗಿಕೊಳ್ಳುತ್ತಾರೆ.

ಮನರಂಜನೆಗೆ ಸಂಬಂಧಪಟ್ಟಂತೆ ಭಜನೆ ಸಾಮಾಗ್ರಿ ಒದಗಿಸುವುದನ್ನು ಬಿಟ್ಟು ದೈಹಿಕ ಮತ್ತು ಬೌದ್ಧಿಕವಾಗಿ ಶ್ರಮವಹಿಸುವಂಥ ಮನರಂಜನೆಯ ಉಪಕರಣಗಳು ಹಾಗೂ ಸ್ಥಳಾವಕಾಶ ಕಲ್ಪಿಸಿಕೊಡಬೇಕು.

ವೃತ್ತಿಯ ನೆಲೆಯಲ್ಲಿ ಗಮನಿಸುವುದಾದರೆ ಕೊರಗರು ಹೆಣೆದು ತಯಾರಿಸುವಂಥ ಬುಟ್ಟಿಗಳನ್ನು ಹಣವಂತರಾದವರು ಮಧ್ಯದಲ್ಲಿ ನಿಂತುಕೊಂಡು ಮಾರ್ಕೆಟ್ಟಿನಲ್ಲಿ ಮಾರುವವರಿಗೆ ಒದಗಿಸುವ ಪದ್ಧತಿ (ದಲ್ಲಾಳಿ ಪದ್ಧತಿ) ಇತ್ತೀಚೆಗೆ ಅಸ್ತಿತ್ವಕ್ಕೆ ಬರುತ್ತಿದೆ. ಈ ದಲ್ಲಾಳಿ ಪದ್ಧತಿಯನ್ನು ತಪ್ಪಿಸುವುದಕ್ಕೆ ಪ್ರಾರಂಭಿಕ ಹಂತದಲ್ಲಿ ಸರ್ಕಾರದ ಪ್ರತಿನಿಧಿ

ಕೊರಗರ ಬುಟ್ಟಿ ಉತ್ಪನ್ನಗಳನ್ನು ಖರೀದಿಸಿ ಹಣ ಸಂದಾಯ ಮಾಡುವಂತಾಗಬೇಕು. ಕೊರಗರು ತಮ್ಮ ಆರ್ಥಿಕ ವಹಿವಾಟವನ್ನು ತಾವೇ ವ್ಯವಸ್ಥೆ ಮಾಡಿಕೊಳ್ಳುವ ಮಟ್ಟಕ್ಕೆ ಬೌದ್ಧಿಕವಾಗಿ, ಸಂಘಟನಾತ್ಮಕವಾಗಿ ಬೆಳೆದಾಗ ಸಹಕಾರಿ ಸಂಘಗಳನ್ನು ಸ್ಥಾಪಿಸುವುದು ಸೂಕ್ತ.

ಅನೌಪಚಾರಿಕ ಶಿಕ್ಷಣದನ್ವಯ ಕೊರಗರ ಸಮಸ್ಯೆಗಳಿಗೆ ಅವಲ್ಲೇ ಸ್ವಯಂ ಜನಜಾಗೃತಿ ಮೂಡುವಂತೆ ಮಾಡುವುದು. ಇಲ್ಲಿ ವಸತಿ, ಅನಾರೋಗ್ಯ. ಅವಿಭಕ್ತ ಕುಟುಂಬದ ದುಷ್ಪರಿಣಾಮಗಳು ಇತ್ಯಾದಿಗಳ ಕುರಿತು ಕೊರಗರಿಗೆ ಪ್ರಜ್ಞೆ ಮೂಡಿಸುವ ಕಾರ್ಯವೂ ಆಗಬೇಕು. ಔಪಚಾರಿಕ ಶಿಕ್ಷಣ ಸೌಲಭ್ಯವನ್ನು ಹೆಚ್ಚಳಗೊಳಿಸಲು ವಸತಿ ,ಶಾಲೆಗಳನ್ನು ಸ್ಥಾಪಿಸುವುದೂ ಅಗತ್ಯ.

ನಾಗರಿಕ ಸೌಲಭ್ಯಗಳಾದ ವಸತಿ, ವಿದ್ಯುಚ್ಛಕ್ತಿ, ಶೌಚಾಲಯ ನೀರು ರಸ್ತೆ. ಆಸ್ಪತ್ರೆ ಇತ್ಯಾದಿಗಳು ಹೆಚ್ಚಬೇಕು.

ಕೊರಗ ಜನಾಂಗಕ್ಕೆ ಉಚಿತವಾಗಿ ವರ್ಷ ವರ್ಷಕ್ಕೆ ಸರ್ಕಾರ ಅಗತ್ಯವಿರುವಷ್ಟು ಉಡುಪನ್ನು ಪಾತ್ರೆಗಳಂತಹ ಅವಶ್ಯಕ ವಸ್ತುಗಳನ್ನು ಪೂರೈಸಬೇಕು.

ಇಂದು ಕೊರಗರನ್ನು ಪರಿಶಿಷ್ಟ ಪಂಗಡದಲ್ಲಿ ಸರ್ಕಾರ ಸೇರಿಸಿದ್ದು ಈ ಕೊರಗರು ಅದೇ ಮೀಸಲಾತಿ ವರ್ಗದಲ್ಲಿ ಬರುವ ಇತರೆ ಜನಗಳೊಂದಿಗೆ ಸ್ಪರ್ಧಿಸುವ ಮಟ್ಟದಲ್ಲಿಲ್ಲ. ಆದ್ದರಿಂದ ಪ್ರಾದೇಶಿಕ ನಿರ್ಬಂಧದೊಂದಿಗೆ ಕೊರಗರಿಗೆ ಶೇಕಡ 3ರ ಪ್ರತೇಕ ಮೀಸಲಾತಿಯನ್ನು ನೀಡುವುದು ಅಗತ್ಯ. ಈ ಪ್ರತ್ಯೇಕತೆ ಆಧರಿತ ಮೀಸಲಾತಿಯನ್ನು ರಾಷ್ಟ್ರೀಯ ಮೀಸಲಾತಿ ಚೌಕಟ್ಟಿನೊಳಗೇ ಕಲ್ಪಿಸುವುದು ಸಾಧ್ಯವಿದೆ. ಈ ದಿಸೆಯಲ್ಲಿ ಅಗತ್ಯವಾದ ಕ್ರಮಗಳನ್ನು, ವಿಧಿವಿಧಾನಗಳನ್ನು ಕರ್ನಾಟಕ ರಾಜ್ಯ ಸರ್ಕಾರವು, ಕೇಂದ್ರ ಸರ್ಕಾರಕ್ಕೆ ಬೇಗನೆ ಕಳುಹಿಸಬೇಕಾಗಿದೆ.

ಆಧಾರ ಗ್ರಂಥಗಳು

- E. Thurston – Castes and Tribes of Southern India Cosmo Publications Delhi. 1975.

- D N.S Bhat – The Koraga Language. Deccan College, Postgraduate and Research Institute, Poona – 1971.

- Fr. B R Ambedkar – Who were the Untouchables

- Stuart – Manual of the South Kanara District

ಅಮೃತ ಸೋಮೇಶ್ವರ : ಕೊರಗರು, ಐ.ಬಿ ಎಚ್. ಪ್ರಕಾಶನ, ಬೆಂಗಳೂರು 1982.

ಕೊರಗ ಜನಾಂಗದ ಪ್ರಥಮ ಸಮ್ಮೇಳನದಲ್ಲಿ ಕೈಕೊಂಡ ನಿರ್ಣಯಗಳು :

ದಿನಾಂಕ 7-5-1989ರಂದು ಉಡುಪಿಯಲ್ಲಿ ಡಾ। ಬಿ. ಆರ್. ಅಂಬೇಡ್ಕರ್‌ರವರ 98ನೇ ಜನ್ಮ ದಿನದ ಅಂಗವಾಗಿ ಜರಗಿದ ದ ಕ. ಜಿಲ್ಲಾ ಪ್ರಪ್ರಥಮ ಕೊರಗ ಸಮ್ಮೇಳನವು ಉಡುಪಿಯ ಲೋಕಸಭಾ ಸದಸ್ಯರಾದ ಸನ್ಮಾನ್ಯ ಆಸ್ಕರ್ ಫೆರ್ನಾಂಡಿಸ್‌ರವರ ಅಧ್ಯಕ್ಷತೆಯಲ್ಲಿ ಜರಗಿ ಈ ಕೆಳಗಿನ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ದ.ಕ ಜಿಲ್ಲೆಯಲ್ಲಿ ಪರಿಶಿಷ್ಟ ಪಂಗಡದ ಇಂದಿಗೂ ತೀರ ನಿಕೃಷ್ಟ ರೀತಿಯಲ್ಲಿ ಬದುಕುತ್ತಿರುವ ಜನಾಂಗ ನಮ್ಮ ಕೊರಗ ಜನಾಂಗ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ತೀರಾ ಹಿಂದುಳಿದಿರುವ ನಮ್ಮ ಈ ಜನಾಂಗ ಜಿಲ್ಲೆಯ ಕೆಲವು ಭಾಗಗಳಲ್ಲಿ ಪ್ರಾಣಿಗಳ ಹಾಗೆ ಎಂಜಲೆಲೆ ತಿಂದು ನಿಕೃಷ್ಟ ರೀತಿಯಲ್ಲಿ ತಮ್ಮ ಬದುಕನ್ನು ಸಾಗಿಸುತ್ತಾ ಇದೆ. ನಮ್ಮ ಸಮಾಜದ ಅಭ್ಯುದಯಕ್ಕಾಗಿ ಸರಕಾರವು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರೂ ಅದರ ಪ್ರಯೋಜನವು ದಕ್ಕದಿರುವಂತಹ ನತದೃಷ್ಟರು ನಾವಾಗಿದ್ದೇವೆ. 1981 ರ ಜನಗಣತಿಯ ಪ್ರಕಾರ ಈ ಜಿಲ್ಲೆಯಲ್ಲಿ ಸುಮಾರು 30,000 ಜನರಿದ್ದೇವೆ. ಇಂದಿಗೂ ಅಸ್ಪೃಶ್ಯತೆ ತಾಂಡವವಾಡುತ್ತಿರುವ ಈ ಜಿಲ್ಲೆಯಲ್ಲಿ ಸ್ವಂತ ಜಮೀನಿಲ್ಲದೆ, ಉಳಕೊಳ್ಳಲು ಸರಿಯಾದ ಮನೆಯಿಲ್ಲದೆ ಹಾಗೂ ಕುಲ ಕಸುಬಾದ ಬುಟ್ಟಿ ಹೆಣೆಯುವುದಕ್ಕೂ ನ್ಯಾಯವಾದ ಬೆಲೆ ಸಿಗದೆ ಕಂಗೆಟ್ಟ ಜನಜೀವನ ನಮ್ಮದಾಗಿದೆ.

ಅನಕ್ಷರಸ್ತರಾಗಿರುವ ನಮ್ಮ ಜನಾಂಗಕ್ಕೆ ಸರಕಾರದಿಂದ ಸಿಗುವ ಸವಲತ್ತುಗಳು ಅಧಿಕಾರಿಗಳ ವಂಚನೆಯಿಂದ ಹಾಗೂ ರಾಜಕೀಯ ಮತ್ತು ಇತರ ವ್ಯಕ್ತಿಗಳಿಂದ ನಡೆದ ನಿರಂತರ ಶೋಷಣೆಯಿಂದಾಗಿ ನಮ್ಮ ಸಮಾಜಕ್ಕೆ ಸಿಗದಂತಾಗಿ ಇಂದಿಗೂ ತೀರಾ ನಿಕೃಷ್ಟ ರೀತಿಯಲ್ಲಿ ಬದುಕುತ್ತಿದ್ದೇವೆ ಆದುದರಿಂದ ಈ ಜಿಲ್ಲೆಯಲ್ಲಿ ಪ್ರಪ್ರಥಮವಾಗಿ ಸಂಘಟಿತರಾದ ನಾವು ಈ ಸಮ್ಮೇಳನದಲ್ಲಿ ಈ ಕೆಳಗಿನ ನಿರ್ಣಯಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇವೆ.

ನಿರ್ಣಯಗಳು:

1. ದ. ಕ. ಜಿಲ್ಲೆಯಲ್ಲಿರುವ ಸುಮಾರು 30,000ದಷ್ಟು ನಮ್ಮ ಕೊರಗ ಜನಾಂಗದವರಿದ್ದು ಶೈಕ್ಷಣಿಕವಾಗಿ ತೀರಾ ಹಿಂದುಳಿದವರಾಗಿರುತ್ತೇವೆ. ಜಿಲ್ಲೆಯಲ್ಲಿ ಈ ವರೆಗೂ ಯಾವನೇ ಒಬ್ಬ ಕಾಲೇಜು ಮಟ್ಟದ ವಿದ್ಯಾಭ್ಯಾಸವನ್ನು ಪಡೆದವನಿಲ್ಲ. ಬೆರಳೆಣಿಕೆಯಷ್ಟು ಮಂದಿ ಪ್ರಾಥಮಿಕ ಹಂತ್ರ ಹಾಗೂ ಪ್ರೌಢ ಮಟ್ಟದ ವಿದ್ಯಾಭ್ಯಾಸವನ್ನು ಪಡೆದವರಾಗಿರುತ್ತೇವೆ ಆದುದರಿಂದ ನಮ್ಮ ಶೈಕ್ಷಣಿಕ ಪ್ರಗತಿಗಾಗಿ ಪ್ರತಿ ಕಾಲೋನಿಯಲ್ಲೂ ಪ್ರಾಥಮಿಕ ಹಂತದ ವಸತಿ ಶಾಲೆಯನ್ನು ಕೂಡಲೆ ತೆರೆಯಬೇಕೆಂದು ರಾಜ್ಯ ಸರಕಾರವನ್ನು ಈ ಸಮ್ಮೇಳನವು ಒತ್ತಾಯಿಸುತ್ತಗೆ.

2. ಪ್ರಸ್ತುತ ಶಾಲೆಯಲ್ಲಿ ಕಲಿಯುತ್ತಿರುವ ನಮ್ಮ ಜನಾಂಗದ ವಿದ್ಯಾರ್ಥಿಗಳಿಗೆ ಹಾಗೂ ಅವರ ಪೋಷಕರಿಗೆ ದೊರಕುವ ವಿಶೇಷ ಪ್ರೋತ್ಸಾಹ ಧನದಲ್ಲಿ ಅಧಿಕಾರಿಗಳ ಮಟ್ಟದಲ್ಲಿ ವಂಚನೆಯಾಗುತ್ತಿದ್ದು. ಇದನ್ನು ತಪ್ಪಿಸಲು ವಿತರಣೆ ಮಾಡುವ ಅಧಿಕಾರಿಯು ಆಯಾ ಶಾಲೆಯ ಮುಖ್ಯೋಪಾಧ್ಯಾಯರ ಸಮ್ಮುಖದಲ್ಲಿ ಹಂಚುವ ವ್ಯವಸ್ಥೆಯನ್ನು ಜಾರಿಗೆ ತರಬೇಕು ಮತ್ತು ಇದರಲ್ಲಿ ವಂಚನೆ ನಡೆಸುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕೆಂದು ಈ ಮೂಲಕ ಒತ್ತಾಯಿಸುತ್ತೇವೆ.

3 ವಸತಿ ರಹಿತ ನಮ್ಮ ಜನಾಂಗದ ಪ್ರತಿ ಕುಟುಂಬಕ್ಕೂ ಸಂಪೂರ್ಣ ಸರಕಾರಿ ವೆಚ್ಚದಲ್ಲಿ ವಸತಿ. ವಿದ್ಯುದ್ದೀಕರಣ. ಕುಡಿಯುವ ನೀರು ಹಾಗೂ ಶೌಚಾಲಯ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕಾಗಿ ಈ ಮೂಲಕ ಒತ್ತಾಯಿಸುತ್ತೇವೆ.

4. ದ.ಕ. ಜಿಲ್ಲೆಯಲ್ಲಿ ಪರಿಶಿಷ್ಟ ಪಂಗಡದಲ್ಲಿರುವ ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಮುಂದುವರಿದಿರುವ ಜಾತಿಯವರೇ ಮೀಸಲಾತಿಯ ಸೌಲಭ್ಯಗಳನ್ನು ಈವರೆಗೂ ಪಡೆದುಕೊಂಡು ಬಂದಿರುತ್ತಾರೆ. ಆದರೆ ಸ್ವಾತಂತ್ರ್ಯ ದೊರಕಿ 42 ವರುಷಗಳು

ಕಳೆದರೂ, ಈ ವರೆಗೂ ನಮ್ಮ ಜನಾಂಗ ಮೀಸಲಾತಿಯು ಎಲ್ಲಾ ಸೌಲಭ್ಯಗಳಿಂದ ವಂಚಿತರಾಗಿರುತ್ತೇವೆ. ಆದುದರಿಂದ ಪರಿಶಿಷ್ಟ ಪಂಗಡದಲ್ಲಿರುವ ತೀರಾ ಹಿಂದುಳಿದ ನಮ್ಮ ಜನಾಂಗಕ್ಕೆ ಈಗಾಗಲೇ ವ್ಯವಸ್ಥೆಯಲ್ಲಿರುವ ಶೇಕಡಾ 3ರಲ್ಲಿ ಪ್ರಾದೇಶಿಕ ಸಿರ್ಬಂಧದೊಂದಿಗೆ ಪ್ರತ್ಯೇಕವಾಗಿ ಶೇಕಡಾ 2 ರಷ್ಟು ಮೀಸಲಾತಿ ಸೌಲಭ್ಯ ನಿಗದಿಪಡಿಸಿ ಕೂಡಲೇ ಅನುಷ್ಠಾನಗೊಳಿಸಬೇಕೆಂದು ಈ ಮೂಲಕ ಒತ್ತಾಯಿಸುತ್ತೇವೆ

5. ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿರುವ ನಮ್ಮ ಜನಾಂಗವು ಸ್ವತಂತ್ರವಾಗಿ ಕೃಷಿ ಅವಲಂಬನೆಯನ್ನು ಮಾಡಲು ಕೃಷಿ ಜಮೀನನ್ನು ಪಡೆಯುವಲ್ಲಿ ವಂಚಿತರಾಗಿದ್ದೇವೆ. ಆದುದರಿಂದ ನಮ್ಮ ಪ್ರತೀ ಕುಟುಂಬಕ್ಕೂ ಕಡಿಮೆ ಪಕ್ಷ 5 ಎಕ್ರೆ ಕೃಷಿ ಜಮೀನನ್ನು ಮಂಜೂರು ಮಾಡಬೇಕೆಂದು ಈ ಮೂಲಕ ಒತ್ತಾಯಿಸುತ್ತೇವೆ.

6. ಈ ಜಿಲ್ಲೆಯಲ್ಲಿರುವ ನಮ್ಮ ಜನಾಂಗದವರು ಸರಕಾರಿ ಭೂಮಿಯಲ್ಲಿ ಮನೆಗಳನ್ನು ಕಟ್ಟಿ ಮರ ಗಿಡಗಳನ್ನು ನೆಟ್ಟು ಹಲವಾರು ವರ್ಷಗಳಿಂದ ಅನುಭವಿಸಿಕೊಂಡು ಬಂದಿದ್ದರೂ ಈ ತನಕ ಯಾರಿಗೂ ಹಕ್ಕು ಪತ್ರವು ದೊರಕಿರುವುದಿಲ್ಲ. ಇದರಿಂದಾಗಿ ಸರಕಾರದಿಂದ ಸಿಗಬೇಕಾದ ಎಲ್ಲಾ ಸೌಲಭ್ಯಗಳಿಂದ ವಂಚಿತರಾಗಿದ್ದೇವೆ. ಆದುದರಿಂದ ಇಂತಹ ಪ್ರಕರಣಗಳನ್ನು ಕಂದಾಯ ಇಲಾಖೆಯು ಪತ್ತೆ ಹಚ್ಚಿ ಹಕ್ಕು ಪತ್ರವನ್ನು ಕೂಡಲೇ ನೀಡಬೇಕೆಂದು ರಾಜ್ಯ ಸರಕಾರವನ್ನು ಒತ್ತಾಯಿಸುತ್ತೇವೆ.

7. ನಮ್ಮ ಜನಾಂಗವು ಹೆಚ್ಚಾಗಿ ವಾಸಿಸುತ್ತಿರುವ ಕಾಲೋನಿಗಳಲ್ಲಿ ನಾಗರಿಕ ಸೌಲಭ್ಯಗಳಾದ ರಸ್ತೆ, ವಿದ್ಯುತ್, ನೀರು ಇತ್ಯಾದಿ ಸೌಲಭ್ಯಗಳಿಂದ ವಂಚಿತರಾಗಿರುತ್ತೇವೆ. ನಮಗೆ ಈ ಬಗ್ಗೆ ರಾಜ್ಯ ಸರ್ಕಾರವು ಒದಗಿಸುತ್ತಿರುವ ಹಣವು ದುರುಪಯೋಗವಾಗುತ್ತಿದ್ದು ಈ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು. ಅಲ್ಲದೆ ಈ ಮೇಲಿನ ಸೌಲಭ್ಯಗಳನ್ನು ಕೂಡಲೇ ಎಲ್ಲಾ ಕಾಲೋನಿಗಳಿಗೂ ಒದಗಿಸುವಂತೆ ಈ ಮೂಲಕ ಒತ್ತಾಯಿಸುತ್ತೇವೆ.

8. ಈಗಾಗಲೇ ಈ ಪಂಗಡಗಳ ಕಲ್ಯಾಣಕ್ಕಾಗಿರುವ್ವ ಲ್ಯಾಂಪ್ ಸೊಸ್ಯಾಟಿಯು ಅಧಿಕರೇತರರ ಮೇಲ್ವಿಚಾರಣೆಯಲ್ಲಿ ನಡೆಯುತ್ತಿದ್ದು, ದೈನಂದಿನ ವ್ಯವಹಾರದಲ್ಲಿ ಅನೇಕ ರೀತಿಯು ವಂಚನೆಗಳು ಸ್ವಜನ ಪಕ್ಷಪಾತಗಳು ನಡೆಯುತ್ತಿದ್ದು ಅಲ್ಲದೆ ನಮ್ಮ ಜನರಿಗೆ ಈ ಸೊಸ್ಯಾಟಿಯಲ್ಲಿ ಯಾವುದೇ ರೀತಿಯು ಪ್ರಾತಿನಿಧ್ಯವಿಲ್ಲದೆ ನಮ್ಮ ಜನರ ಶ್ರೇಯಸ್ಸು ಈ ಸಂಸ್ಥೆಯಿಂದ ಸಾಧ್ಯವಾಗಿಲ್ಲ. ಈ ಜಿಲ್ಲೆಯಲ್ಲಿ ಹೆಚ್ಚಿನ ನಮ್ಮ ಜನರು ತಯಾರಿಸುವಂತಹ ಬುಟ್ಟಿ ಇತ್ಯಾದಿಗಳಿಗೆ ನ್ಯಾಯವಾದ ಬೆಲೆ ಸಿಗದೆ ಮಧ್ಯವರ್ತಿಗಳ ಮೂಲಕ ಮಾರುಕಟ್ಟೆಗೆ ಬರುತ್ತಿದೆ. ಆದುದರಿಂದ ಈ ದಲ್ಲಾಳಿ ಪದ್ಧತಿಯನ್ನು ತಪ್ಪಿಸುವುದಕ್ಕೆ ಸರಕಾರವೇ ಪ್ರಾರಂಭಿಕ ಹಂತದಲ್ಲಿ ಬುಟ್ಟಿ ಇತ್ಯಾದಿಗಳನ್ನು ಖರೀದಿಸುವಂತಾಗಬೇಕು ನಮ್ಮ ಆರ್ಥಿಕ ವ್ಯವಹಾರವನ್ನು ನಾವೇ ವ್ಯವಸ್ಥೆ ಮಾಡಿಕೊಳ್ಳುವ ಮಟ್ಟಕ್ಕೆ ಬೌದ್ಧಿಕವಾಗಿ ಸಂಘಟನಾತ್ಮಕವಾಗಿ ಬೆಳೆದಾಗ ಸಹಕಾರಿ ಸಂಘಗಳನ್ನು ಸ್ಥಾಪಿಸಬೇಕೆಂದು ಈ ಮೂಲಕ ಒತ್ತಾಯಿಸುತ್ತೇವೆ.

9. ನಮ್ಮ ಜನಾಂಗದ ಕುಲಕಸುಬು ಬುಟ್ಟಿ ಹೆಣೆಯುವುದಾದರೂ ಅದಕ್ಕೆ ಬೇಕಾದ ಬಿಳಲು ಹಾಗೂ ಬಿದಿರಿನ ಸಲಕರಣೆಗಳು ದೊರಕದಿದ್ದುದರಿಂದ ಅನಿವಾರ್ಯವಾಗಿ ಪೌರಕಾರ್ಮಿಕ ವೃತ್ತಿಗೆ ಇಳಿದಿರುವುದನ್ನು ಗಮನಿಸ ಬಹುದು. ದಿನನಿತ್ಯ ತ್ಯಾಜ್ಯ ವಸ್ತುಗಳ ನೈರ್ಮಲ್ಯೀಕರಣ ಕೆಲಸ ಮಾಡುವುದರಿಂದ ಹೆಚ್ಚಿನ ನಮ್ಮ ಜನರು ಅನಾರೋಗ್ಯ ಪೀಡಿತರಾಗಿರುತ್ತಾರೆ. ಇದರ ದುಷ್ಪರಿಣಾಮ ನಮ್ಮ ಮಕ್ಕಳ ಮೇಲೂ ಬಿದ್ದಿದೆ ಆದುದರಿಂದ ಪ್ರತಿ ತಿಂಗಳಿಗೊಮ್ಮೆ ನಮ್ಮ ಕಾಲೋನಿಗಳಲ್ಲಿ ವೈದ್ಯಕೀಯ ತಪಾಸಣೆ ನಡೆಸಿ ಉಚಿತ ಔಷಧಿಗಳನ್ನು ಹಂಚುವ ವ್ಯವಸ್ಥೆಯನ್ನು ಮಾಡಬೇಕೆಂದು ಈ ಮೂಲಕ ಒತ್ತಾಯಿಸುತ್ತೇವೆ.

10. ಈ ಜಿಲ್ಲೆಯಲ್ಲಿ ನಮ್ಮ ಜನಾಂಗದವರು ಪೌರ ಕಾರ್ಮಿಕರ ಹೊರತು ಸರಕಾರಿ ಹುದ್ದೆಗಳಲ್ಲಿ ಇರುವುದೇ ವಿರಳ. ನಮ್ಮ ಸಾಮಾಜಿಕ ಹಿಂದುಳಿಯುವಿಕೆಯಿಂದ ಮೀಸಲಾತಿ ಹುದ್ದೆಗಳಿಗೆ ಇತರ ಜಾತಿಗಳೊಂದಿಗೆ

ಸ್ಪರ್ಧಿಸಿ ಸರಕಾರಿ ಹುದ್ದೆಗಳನ್ನು ಪಡೆಯುವರೇ ವಿಫಲರಾಗಿರುತ್ತೇವೆ **ಆದುದರಿಂದ** ಪ್ರಾಥಮಿಕ ಶಿಕ್ಷಣದ ಹಂತವನ್ನು ಮುಗಿಸಿದ ನಮ್ಮ **ಜನಾಂಗದ** ಸದಸ್ಯನಿಗೆ ಕನಿಷ್ಠಪಕ್ಷ ಸರಕಾರದ 'ಡಿ' ವರ್ಗದ ಹುದ್ದೆಗೆ ನೇರ ನೇಮಕಾತಿ ಹಾಗೂ ಎಸ್.ಎಸ್.ಎಲ್.ಸಿ.ಯನ್ನು ಮುಗಿಸಿದ ಜನಾಂಗದ ಸದಸ್ಯನಿಗೆ 'ಸಿ' ವರ್ಗದ ಹುದ್ದೆಗೆ ನೇರ ನೇಮಕಾತಿಯನ್ನು ಮಾಡುವರೇ ಸರಕಾರ ಕಾನೂನುಗಳನ್ನು ತಿದ್ದುಪಡಿ ಮಾಡಿ ನೇರ ನೇಮಕಾತಿಗೆ ಅವಕಾಶ ಮಾಡಿಕೊಡಬೇಕಾಗಿ ಈ ಮೂಲಕ ಒತ್ತಾಯಿಸುತ್ತೇವೆ.

❀ ❀ ❀